# BDA ಕಾರಂತ ಬಡಾವಣೆ ನಿವೇಶನ ಆಕಾಂಕ್ಷಿಗಳಿಗೆ ಸಂಕಷ್ಟ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಡಾ.ಕೆ. ಶಿವರಾಮ ಕಾರಂತ ಬಡಾವಣೆಯಲ್ಲಿ ನಿವೇಶನ ಪಡೆಯಲು ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ 15 ವರ್ಷಗಳ ನಿವಾಸ ಪ್ರಮಾಣಪತ್ರ ಪಡೆಯುವಲ್ಲಿನ ವಿಳಂಬ ಅಡ್ಡಿಯಾಗಿದೆ. ನೋಂದಣಿ ಶುಲ್ಕ ಪಾವತಿಸಿ ಚಲನ್ ಪಡೆದಿರುವ 9,442 ಅರ್ಜಿದಾರರ ಪೈಕಿ ಕೇವಲ 2,639 ಮಂದಿ ಮಾತ್ರ ತಮ್ಮ ಅರ್ಜಿಗಳನ್ನು ಸಂಪೂರ್ಣವಾಗಿ ಸಲ್ಲಿಸಿದ್ದಾರೆ.

ಅರ್ಜಿ ಸಲ್ಲಿಸಲು ಅಗತ್ಯವಿರುವ ದಾಖಲೆಗಳನ್ನು, ವಿಶೇಷವಾಗಿ 15 ವರ್ಷಗಳ ನಿವಾಸ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕಿದೆ ಎಂದು ಬಿಡಿಎಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರಂಭದಲ್ಲಿ ಕಂದಾಯ ಇಲಾಖೆಯು 15 ವರ್ಷಗಳ ನಿವಾಸ ಪ್ರಮಾಣಪತ್ರ ನೀಡಲು ಹಿಂದೇಟು ಹಾಕಿ, ಬದಲಿಗೆ 10 ವರ್ಷಗಳ ನಿವಾಸ ಪ್ರಮಾಣಪತ್ರಗಳನ್ನು ನೀಡುತ್ತಿತ್ತು. ಇದರಿಂದ ಅನೇಕ ಅರ್ಜಿದಾರರಲ್ಲಿ ಗೊಂದಲ ಉಂಟಾಗಿತ್ತು. ಈ ಸಮಸ್ಯೆ ಬಿಡಿಎ ಗಮನಕ್ಕೆ ಬಂದ ಕೂಡಲೇ ಕಂದಾಯ ಇಲಾಖೆಯೊಂದಿಗೆ ಚರ್ಚಿಸಿ ಪರಿಹರಿಸಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ. ಅರ್ಜಿದಾರರಿಗೆ ಪ್ರಕ್ರಿಯೆಯನ್ನು ಸುಲಭಗೊಳಿಸುವ ಉದ್ದೇಶದಿಂದ, ಸದ್ಯ 10 ವರ್ಷಗಳ ನಿವಾಸದ ಪುರಾವೆ ಸಲ್ಲಿಸಲು ಅವಕಾಶ ನೀಡಲಾಗುತ್ತಿದೆ. ಉಳಿದ ಐದು ವರ್ಷಗಳ ನಿವಾಸವನ್ನು ದೃಢೀಕರಿಸುವ ದಾಖಲೆಗಳನ್ನು ನಂತರ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ. ಆರಂಭಿಕ ಹಂತದಲ್ಲಿ ಉಂಟಾದ ಈ ಗೊಂದಲದಿಂದಾಗಿ ಅನೇಕರು ಅರ್ಜಿ ಸಲ್ಲಿಸಲು ಸಾಧ್ಯವಾಗಿರಲಿಲ್ಲ. ಇದೇ ಕಾರಣವನ್ನು ಮುಂದಿಟ್ಟುಕೊಂಡು ಅರ್ಜಿ ಸಲ್ಲಿಕೆಯ ಗಡುವು ವಿಸ್ತರಿಸುವಂತೆ ಅರ್ಜಿದಾರರು ಅಧಿಕಾರಿಗಳಿಗೆ ಮನವಿ ಮಾಡಿದ್ದರು ಎಂದು ಹೇಳಿದ್ದಾರೆ.

**ಅರ್ಜಿ ಪ್ರಕ್ರಿಯೆ ಪೂರ್ಣಗೊಳಿಸಲು ಅರ್ಜಿದಾರರು ನಮೂನೆಯನ್ನು ಭರ್ತಿ ಮಾಡಬೇಕು. ಸರ್ಕಾರದಿಂದ ಹಂಚಿಕೆಯಾದ ಬೇರೆ ಯಾವುದೇ ನಿವೇಶನ ತಮ್ಮ ಹೆಸರಿನಲ್ಲಿ ಇಲ್ಲ ಎಂಬುದನ್ನು ದೃಢೀಕರಿಸುವ ನೋಟರಿ ಪ್ರಮಾಣೀಕೃತ ಅಫಿಡವಿಟ್ ಅನ್ನು ಅಪ್‌ಲೋಡ್ ಮಾಡಬೇಕು.**

# ಸಂಗೀತ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಯ್ಯಾಲಿಕಾವಲಿನ 16ನೇ ಅಡ್ಡರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ದಸರಾ ಬ್ರಹ್ಮೋತ್ಸವದ ಪ್ರಯುಕ್ತ ಅಕ್ಟೋಬರ್ 16, ಶುಕ್ರವಾರ ಸಂಜೆ 6-00ಕ್ಕೆ ಕು|| ಅನ್ವಿತಾ ಶ್ರೀಧರ್ ರವರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಇವರ ಗಾಯನಕ್ಕೆ ಪಿಟೀಲು ವಾದನದಲ್ಲಿ ಶ್ರೀ ಎಸ್. ಶಶಿಧರ್ ಮತ್ತು ತಬಲಾ ವಾದನದಲ್ಲಿ ಶ್ರೀ ಶ್ರೀನಿವಾಸ್ ಅನಂತರಾಮಯ್ಯ ಸಹಕರಿಸಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

## ಸರ್ಕಾರದ ವಿರುದ್ಧ ಡಿಜಿಪಿ ಅಲೋಕ್ ಕುಮಾರ್ ಅಸಮಾಧಾನ!

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಕ್ರಮಗಳ ತನಿಖೆಗಾಗಿ ಕರ್ನಾಟಕ ಹೈಕೋರ್ಟ್ ತಮ್ಮನ್ನು ಎಸ್‌ಐಟಿ ಮುಖ್ಯಸ್ಥರನ್ನಾಗಿ ನೇಮಿಸಿದ್ದನ್ನು ರಾಜ್ಯ ಸರ್ಕಾರ ಆಕ್ಷೇಪಿಸಿದ ರೀತಿಯ ಬಗ್ಗೆ ಕರ್ನಾಟಕ ಡಿಜಿಪಿ (ಜೈಲು) ಅಲೋಕ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲೋಕ್ ಕುಮಾರ್ ನೇತೃತ್ವದ ಎಸ್‌ಐಟಿ ತಂಡ ರಚನೆಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಹೀಗಾಗಿ ಅಕ್ಟೋಬರ್ 1ರಂದು ಸುಪ್ರೀಂ ಕೋರ್ಟ್ ವಿಚಾರಣೆ ವೇಳೆ ಸರ್ಕಾರ ಪರ ವಾದ ಮಂಡಿಸಿದ್ದ ಕಪಿಲ್ ಸಿಬಲ್, ಅಲೋಕ್ ಕುಮಾರ್ ಅವರ ವಿರುದ್ಧ ಸಿಬಿಐ ತನಿಖೆ ಬಾಕಿ ಇದೆ ಎಂದು ವಾದಿಸಿದ್ದರು. ಈ ವಾದವನ್ನು ಖಂಡಿಸಿ ಅಲೋಕ್ ಕುಮಾರ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ತಮ್ಮ ವಿರುದ್ಧ ಸಿಬಿಐ ತನಿಖೆ ಬಾಕಿಯಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸರ್ಕಾರ ಸಲ್ಲಿಸಿದ್ದ ಮಾಹಿತಿಯನ್ನು ತಿದ್ದುಪಡಿ ಮಾಡುವಂತೆ ಅಕ್ಟೋಬರ್ 5ರಂದು ಕರ್ನಾಟಕ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದರು. ಈ ಹೇಳಿಕೆಯು ವಾಸ್ತವಿಕವಾಗಿ ತಪ್ಪಾಗಿದೆ ಎಂದು ಕುಮಾರ್ ಪ್ರತಿಪಾದಿಸಿದ್ದರು. ಸರ್ಕಾರ ಸಲ್ಲಿಸಿದ ಈ ಮಾಹಿತಿಯು ಅನಗತ್ಯವಾಗಿ ತಮ್ಮ ಹೆಸರನ್ನು ವಿವಾದಕ್ಕೆ ಎಳೆತಂದಿದೆ. ತಮ್ಮ ವೃತ್ತಿಪರ ಪ್ರಾಮಾಣಿಕತೆ ಹಾಗೂ ಘನತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಅಲೋಕ್ ಕುಮಾರ್ ಹೇಳಿದ್ದಾರೆ.

## ಮತ್ತೆ ಗುಡುಗಿದ ಕಾಂಗ್ರೆಸ್ ನಾಯಕ ವಿಎಸ್ ಉಗ್ರಪ್ಪ!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದಲ್ಲಿ ನಡೆದ ಮದಕರಿ ನಾಯಕ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅಬ್ಬರದ ಭಾಷಣ ಮಾಡಿದ್ದ ಮಾಜಿ ಸಂಸದ ವಿಎಸ್ ಉಗ್ರಪ್ಪ ನಟ ಸುದೀಪ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದರು. ನಾಯಕ ಸಮುದಾಯದ ಮಗನಾಗಿದ್ದರೆ ನಮ್ಮ ಸಮುದಾಯದ ಪರ ಧ್ವನಿ ಎತ್ತಿ.

ದಮ್ಮು, ತಾಕತ್ ಇದ್ರೆ ನಮ್ಮ ಸಮುದಾಯದ ಮೀಸಲಾತಿ ಹೋರಾಟಕ್ಕೆ ಬನ್ನಿ ಎಂದಿದ್ದು ಇದೀಗ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ನಟ ಸುದೀಪ್ ಅವರಿಗೆ ಅಪಮಾನ ಮಾಡಲಾಗಿದೆ ಎನ್ನುವ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಉಗ್ರಪ್ಪ, ನಟ ಸುದೀಪ್ ಅವರು ನಮ್ಮ ಸಮುದಾಯದ ಹೆಸರಲ್ಲಿ ಗುರುತಿಸಿಕೊಂಡವರು. ನಾಯಕ ಸಮಾಜದ ಜಯಂತಿಯಲ್ಲಿ ಸುದೀಪ್ ಅವರನ್ನು ಮೊದಲು ಪರಿಚಯಿಸಿದ್ದೇ ನಾನು. ನಾನು ವಕೀಲ ಎಲ್ಲರ ಪ್ರಶ್ನೆಗೆ ಉತ್ತರ ಕೊಡಬಲ್ಲೆ.

ಗೋಕಾಕ್ ಚಳುವಳಿಗಾಗಿ ಡಾ. ರಾಜಕುಮಾರ್ ಕೂಡ ಬೀದಿಗಿಳಿದು ಹೋರಾಟ ಮಾಡಿದ್ದರು ಎಂದರು. 'ರಾಜೂಗೌಡರೇ ನಿಮಗೂ ಸುದೀಪ್ ಗೂ ಈಗಲೂ ಹೇಳುವುದೇನೆಂದರೆ, ಸಮಾಜಕ್ಕಾಗಿ ಹೋರಾಟ ಮಾಡೋಣ, ಸುದೀಪ್ ಅವರೇ ನೀವು ಬನ್ನಿ ನಿಮ್ಮ ನಾಯಕತ್ವದಲ್ಲೇ ಹೋರಾಡೋಣ. ಫೇವರಿಸಂ ಬೆಳೆಸೋ ಹೇಳಿಕೆ ಒಳ್ಳೇದಲ್ಲ. ಸಮಾಜದ ಬೆಂಬಲಕ್ಕೆ ನೀವು ನಿಲ್ಲಬೇಕು. ಸಮಾಜ ನಿಮ್ಮ ಬೆಂಬಲಕ್ಕೆ ಬಂದಿದ್ದು ನೆನಪಿದೆಯಲ್ಲ. ನಾನು ಇದುವರೆಗೂ ಯಾರಿಗೂ ಅಗೌರವ ತೋರಿಲ್ಲ. ಅಗೌರವವಾಗುವಂತೆ ನಡೆದುಕೊಂಡೂ ಇಲ್ಲ. ಬದುಕಿನ ಪ್ರಶ್ನೆ ಬಂದಾಗ ಪ್ರತಿಷ್ಠೆ ಬಿಟ್ಟು ಹೋರಾಟಕ್ಕೆ ಬನ್ನಿ, ನಮ್ಮ ಆಕ್ರೋಶ ಎಲ್ಲರಿಗೂ ಗೊತ್ತಾಗಬೇಕು ಎಂದು ಹೇಳಿದರು.

## ನಮ್ಮ ಮೆಟ್ರೋ ರೈಲಿನಲ್ಲಿ 18 ನಿಮಿಷದಲ್ಲಿ ಜೀವಂತ ಹೃದಯ ಸಾಗಾಟ!

• ಉದಯವಾಹಿನಿ, ಬೆಂಗಳೂರು

ವೈದ್ಯಕೀಯ ಪ್ರಕ್ರಿಯೆಯೊಂದಕ್ಕಾಗಿ ಮಾನವನ ಜೀವಂತ ಹೃದಯವೊಂದನ್ನು ಸಾಗಿಸಲು 'ನಮ್ಮ ಮೆಟ್ರೋ' ನೆರವು ನೀಡಿದೆ. ಗೊರಗುಂಟೆಪಾಳ್ಯ ಮತ್ತು ಮಂತ್ರಿ ಸ್ಕ್ವೇರ್ ಸಂಪಿಗೆ ರಸ್ತೆ ನಿಲ್ದಾಣಗಳ ನಡುವೆ ಮೆಟ್ರೋ ರೈಲಿನಲ್ಲಿ ಕೇವಲ 18 ನಿಮಿಷಗಳಲ್ಲಿ ಹೃದಯ ತಲುಪಿದೆ. ಯಶವಂತಪುರದ ಸ್ಪರ್ಶ ಆಸ್ಪತ್ರೆಯಿಂದ ಶೇಷಾದ್ರಿಪುರದ ಅಪೊಲೊ ಆಸ್ಪತ್ರೆಗೆ ಈ ಹೃದಯವನ್ನು ಸಾಗಿಸಲಾಯಿತು. ಮಧ್ಯಾಹ್ನ 2:22ಕ್ಕೆ ಗೊರಗುಂಟೆಪಾಳ್ಯ ನಿಲ್ದಾಣದಲ್ಲಿ ಮೆಟ್ರೋ ರೈಲಿನಲ್ಲಿ ಇರಿಸಲಾದ ಈ ಹೃದಯವು, ಮಧ್ಯಾಹ್ನ 2:40ಕ್ಕೆ ಮಂತ್ರಿ ಸ್ಕ್ವೇರ್ ಸಂಪಿಗೆ ರಸ್ತೆ ನಿಲ್ದಾಣವನ್ನು ತಲುಪಿತು. ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಆರೋಗ್ಯ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ, ಸಮಯ ನಿರ್ಣಾಯಕವಾದ ಈ ತುರ್ತು ವೈದ್ಯಕೀಯ ಅಂಗವನ್ನು ಸುಗಮವಾಗಿ ಸಾಗಿಸಲು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಿಕೊಟ್ಟಿತು.' ನಡೆದ ಈ ಸಾಗಾಟದೊಂದಿಗೆ, 'ನಮ್ಮ ಮೆಟ್ರೋ' ಇದುವರೆಗೆ ಒಟ್ಟು ಆರು ಪ್ರಮುಖ ಅಂಗಗಳನ್ನು ಸಾಗಿಸಲು ಸಹಕರಿಸಿದಂತಾಗಿದೆ. ಒಂದು ಯಕೃತ್ತು ಮೂರು ಹೃದಯಗಳು ಮತ್ತು ಒಂದು ಜೋಡಿ ಶ್ವಾಸಕೋಶಗಳು ಸೇರಿವೆ.

## ರಾಜ್ಯದಲ್ಲಿ 2.04 ಕೋಟಿ ಮಾನವ ದಿನ ಉದ್ಯೋಗ ಸೃಷ್ಟಿ: ಸಚಿವ ಈಶ್ವರ್ ಖಂಡ್ರೆ

• ಉದಯವಾಹಿನಿ, ಬೆಂಗಳೂರು

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಾದ ವಿಬಿ-ಜಿ ರಾಮ್ ಜಿ ಅಡಿಯಲ್ಲಿ ರಾಜ್ಯ ಸರ್ಕಾರವು ಈ ವರ್ಷದ ಜುಲೈ 1ರಿಂದ ಅಕ್ಟೋಬರ್ 13ರವರೆಗೆ ದಾಖಲೆಯ 2.04 ಕೋಟಿ ಮಾನವ ದಿನ ಉದ್ಯೋಗವನ್ನು ಸೃಷ್ಟಿಸಿದೆ ಎಂದು ಸಚಿವ ಈಶ್ವರ್ ಬಿ. ಖಂಡ್ರೆ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ವರ್ಷ ಇದೇ ಅವಧಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ) ಅಡಿಯಲ್ಲಿ 1.71 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿತ್ತು. ಎಲ್ ನಿನೊ ಪರಿಣಾಮದಿಂದಾಗಿ ಮಳೆ ಕೊರತೆ ಉಂಟಾಗಿರುವ ನಡುವೆಯೇ ಈ ವರ್ಷ ಉದ್ಯೋಗ ಸೃಷ್ಟಿಯಲ್ಲಿ ಹೆಚ್ಚಳವಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ಇರುವುದರಿಂದ ಗ್ರಾಮೀಣ ಪ್ರದೇಶಗಳ ಬಡವರು, ದಲಿತರು ಹಾಗೂ ಭೂರಹಿತ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಒದಗಿಸಲಾಗುವುದು ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲೆ 24 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಸುವ ಮೂಲಕ ರಾಜ್ಯದಲ್ಲೇ ಮೊದಲ ಸ್ಥಾನ ಪಡೆದಿದೆ. ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳು ಕ್ರಮವಾಗಿ 21 ಲಕ್ಷ ಹಾಗೂ 18 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಸುವ ಮೂಲಕ ಎರಡನೇ ಮತ್ತು ಮೂರನೇ ಸ್ಥಾನ ಪಡೆದಿವೆ.

# 100 ವರ್ಷಗಳ ಇತಿಹಾಸದಲ್ಲೇ ಕಾಣದ ಭೀಕರ ಜಲಕ್ಷಾಮಕ್ಕೆ ಕರ್ನಾಟಕ ಸಾಕ್ಷಿ..!

## 2023ರಲ್ಲಿ ಈ ಪ್ರಮಾಣ ಶೇ.18ರಷ್ಟಿತ್ತು. ದೇಶದ ಈ ಪ್ರದೇಶದಲ್ಲಿ ಇದುವರೆಗೆ ದಾಖಲಾದ ಅತಿ ಹೆಚ್ಚಿನ ಮಳೆ ಕೊರತೆ 1918ರಲ್ಲಿ ಶೇ.47ರಷ್ಟಿತ್ತು

• ಉದಯವಾಹಿನಿ, ಬೆಂಗಳೂರು

**1** ಒಳನಾಡಿನಲ್ಲಿ ಅತಿ ಹೆಚ್ಚು ಮಳೆ ಕೊರತೆ

**2** ರಾಮನಗರದಲ್ಲಿ ಶೇ.87ರಷ್ಟು ಮಳೆ ಅಭಾವ

**3** ಶೇ.31ರಷ್ಟು ಮಳೆ ಕೊರತೆ ದಾಖಲಾಗಿತ್ತು

ರಾಜ್ಯದಲ್ಲಿ ಈ ವರ್ಷ ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟಿದ್ದು, ಇತಿಹಾಸದಲ್ಲೇ ಅತ್ಯಂತ ಕಠಿಣ ಪರಿಸ್ಥಿತಿ ಎದುರಾಗಿದೆ. 2026ರ ನೈಋತ್ಯ ಮುಂಗಾರು ಹಂಗಾಮಿನಲ್ಲಿ (ಜೂನ್ 1ರಿಂದ ಸೆಪ್ಟೆಂಬರ್ 30) ರಾಜ್ಯಾದ್ಯಂತ ಶೇಕಡಾ 32 ರಷ್ಟು ಭೀಕರ ಮಳೆ ಕೊರತೆ ದಾಖಲಾಗಿದೆ. ಇದು 1918ರ ನಂತರ (ಅಂದು ಶೇ. 47 ರಷ್ಟು ಕೊರತೆಯಾಗಿತ್ತು) ರಾಜ್ಯ ಕಂಡ ಅತಿ ದೊಡ್ಡ ಮಳೆ ಕೊರತೆಯಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಅಧಿಕೃತವಾಗಿ ತಿಳಿಸಿದೆ. 2002ರಲ್ಲಿ ರಾಜ್ಯದಲ್ಲಿ ಶೇ.31ರಷ್ಟು ಮಳೆ ಕೊರತೆ ದಾಖಲಾಗಿತ್ತು. 2023ರಲ್ಲಿ ಈ ಪ್ರಮಾಣ ಶೇ.18ರಷ್ಟಿತ್ತು. ದೇಶದ ಈ ಪ್ರದೇಶದಲ್ಲಿ ಇದುವರೆಗೆ ದಾಖಲಾದ ಅತಿ ಹೆಚ್ಚಿನ ಮಳೆ ಕೊರತೆ 1918ರಲ್ಲಿ ಶೇ.47ರಷ್ಟಿತ್ತು.

ಜೂನ್ 1ರಿಂದ ಸೆಪ್ಟೆಂಬರ್ 30ರವರೆಗೆ ರಾಜ್ಯದಲ್ಲಿ ವಾಡಿಕೆಯಂತೆ 831.8 ಮಿ.ಮೀ. ಮಳೆಯಾಗಬೇಕಿತ್ತು. ಆದರೆ, ಈ ಬಾರಿ ಕೇವಲ 563.7 ಮಿ.ಮೀ. ಮಳೆಯಾಗಿದೆ. ಅಕ್ಟೋಬರ್ 14ರಂದು ಮುಂಗಾರು ದೇಶದಿಂದ ಅಧಿಕೃತವಾಗಿ ನಿರ್ಗಮಿಸಿದ್ದು, ಪ್ರಸ್ತುತ ಹವಾಮಾನದ ಮುನ್ಸೂಚನೆಗಳ ಪ್ರಕಾರ ಮುಂಬರುವ ಹಿಂಗಾರು ಮಳೆಯೂ ಕುಂಠಿತಗೊಳ್ಳುವ ಸಾಧ್ಯತೆ ದಟ್ಟವಾಗಿದೆ. ಇದರಿಂದಾಗಿ ಮುಂದಿನ ಬೇಸಿಗೆಯ ವೇಳೆಗೆ ರಾಜ್ಯದಲ್ಲಿ ನೀರಿನ ಬಿಕ್ಕಟ್ಟು ಇನ್ನಷ್ಟು ತೀವ್ರಗೊಳ್ಳುವ ಮುನ್ನೆಚ್ಚರಿಕೆಯನ್ನು ಹವಾಮಾನ ತಜ್ಞರು ನೀಡಿದ್ದಾರೆ.

ಸಾಮಾನ್ಯವಾಗಿ ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯನ್ನು ನೈಋತ್ಯ ಮುಂಗಾರು ಕಾಲವೆಂದು ಪರಿಗಣಿಸಲಾಗುತ್ತದೆ. ಇದೇ ಅವಧಿಯ ಮಳೆಯ ಅಂಕಿಅಂಶಗಳನ್ನು ದಾಖಲಿಸಲಾಗುತ್ತದೆ ಎಂದು ಅವರು ವಿವರಿಸಿದ್ದಾರೆ. ಆದರೆ,



ಉದಯವಾಹಿನಿ ಚಿತ್ರ

ಈ ವರ್ಷ ನೈಋತ್ಯ ಮುಂಗಾರು ರಾಜ್ಯಕ್ಕೆ ತಡವಾಗಿ ಪ್ರವೇಶಿಸಿದ್ದು, ಹಿಂತೆಗೆತವೂ ವಿಳಂಬವಾಗಿದೆ.

17 ಜಿಲ್ಲೆಗಳನ್ನು ಒಳಗೊಂಡ ದಕ್ಷಿಣ ಒಳನಾಡಿನ ಕರ್ನಾಟಕ ಉಪವಿಭಾಗದಲ್ಲಿ ಅತಿ ಹೆಚ್ಚು ಶೇ.36ರಷ್ಟು ಮಳೆ ಕೊರತೆ ದಾಖಲಾಗಿದೆ. ಈ ಪ್ರದೇಶದಲ್ಲಿ ವಾಡಿಕೆಯ 678.4 ಮಿ.ಮೀ. ಮಳೆಯ ಬದಲಿಗೆ ಕೇವಲ 432.9 ಮಿ.ಮೀ. ಮಳೆಯಾಗಿದೆ. 11 ಜಿಲ್ಲೆಗಳನ್ನು ಒಳಗೊಂಡ ಉತ್ತರ ಕರ್ನಾಟಕ ಉಪವಿಭಾಗದಲ್ಲಿ ಶೇ.32ರಷ್ಟು ಮಳೆ ಕೊರತೆ ದಾಖಲಾಗಿದೆ. ಇಲ್ಲಿ ವಾಡಿಕೆಯ 480.8 ಮಿ.ಮೀ. ಮಳೆಯಾಗಬೇಕಿದ್ದರೂ, ಕೇವಲ 329.1 ಮಿ.ಮೀ. ಮಳೆಯಾಗಿದೆ.

ಮೂರು ಜಿಲ್ಲೆಗಳನ್ನು ಒಳಗೊಂಡ ಕರಾವಳಿ ಕರ್ನಾಟಕ ಉಪವಿಭಾಗದಲ್ಲಿ ಶೇ.28ರಷ್ಟು ಮಳೆ ಕೊರತೆ ದಾಖಲಾಗಿದೆ. ಈ ಪ್ರದೇಶದಲ್ಲಿ ವಾಡಿಕೆಯ 3,093.9 ಮಿ.ಮೀ. ಮಳೆಯ ಬದಲಿಗೆ 2,226.7 ಮಿ.ಮೀ. ಮಳೆಯಾಗಿದೆ. ರಾಜ್ಯದ ಜಿಲ್ಲಾವಾರು ಅಂಕಿಅಂಶಗಳ ಪ್ರಕಾರ, ರಾಮನಗರದಲ್ಲಿ ಅತಿ ಹೆಚ್ಚು ಶೇ.87ರಷ್ಟು ಮಳೆ ಕೊರತೆ ದಾಖಲಾಗಿದೆ. ಜಿಲ್ಲೆಯಲ್ಲಿ ವಾಡಿಕೆಯ 459.6 ಮಿ.ಮೀ. ಮಳೆಯ ಬದಲಿಗೆ ಕೇವಲ 59.2 ಮಿ.ಮೀ. ಮಳೆಯಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಮಾತ್ರ ವಾಡಿಕೆಯಷ್ಟು ಮಳೆಯಾಗಿದೆ. ಜಿಲ್ಲೆಯಲ್ಲಿ ಸಾಮಾನ್ಯವಾಗಿ 573.3 ಮಿ.ಮೀ. ಮಳೆಯಾಗಬೇಕಿದ್ದು, ಈ ಬಾರಿ 572 ಮಿ.ಮೀ. ಮಳೆಯಾಗಿದೆ.

**ಕಳೆದ ಒಂದೆರಡು ದಿನಗಳಲ್ಲಿ ನೈಋತ್ಯ ಮುಂಗಾರು ಕರ್ನಾಟಕದಿಂದ ಸಂಪೂರ್ಣವಾಗಿ ನಿರ್ಗಮಿಸಿದ್ದು, ಈ ಅವಧಿಯಲ್ಲಿ ರಾಜ್ಯದಲ್ಲಿ ಮಳೆಯಾಗಿಲ್ಲ. ಕಳೆದ ಹಲವು ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಶೇ.32ರಷ್ಟು ಮಳೆ ಕೊರತೆ ದಾಖಲಾಗಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ತಿಳಿಸಿದ್ದಾರೆ. - ನಿರ್ದೇಶಕ ಎನ್. ಪುವಿಯರಸನ್**

### 2026ರಿಂದ ಆರಂಭವಾಗುವ ಈಶಾನ್ಯ ಮುಂಗಾರು

ಅಕ್ಟೋಬರ್‌ನಲ್ಲಿ ಕರ್ನಾಟಕದಲ್ಲಿ ಸುರಿದ ಮಳೆ ನೈಋತ್ಯ ಮುಂಗಾರು ಹಿಂತೆಗೆತದ ಅವಧಿಗೆ ಸಂಬಂಧಿಸಿದ್ದಾಗಿದ್ದರೂ, ಹವಾಮಾನ ವೈಜ್ಞಾನಿಕವಾಗಿ ಅಕ್ಟೋಬರ್ 2026ರಿಂದ ಆರಂಭವಾಗುವ ಈಶಾನ್ಯ ಮುಂಗಾರು ಅವಧಿಯ ಮಳೆಯೆಂದು ದಾಖಲಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

# ಗ್ರಾಮ ಪಂಚಾಯಿತಿಗಳ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಕ್ರಮ: ಸಿಎಂ ಡಿ.ಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಗ್ರಾಮ ಪಂಚಾಯಿತಿಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಮೂಲಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ತಿಳಿಸಿದರು. ಸಿಎಂ ಗೃಹ ಕಚೇರಿ ಶಿವಕುಮಾರ್ ಅವರು ಕೃಷ್ಣಾದಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆನಡೆಸಿ ಮಾತನಾಡಿದರು. 5ನೇ ಹಣಕಾಸು ಆಯೋಗದ ವರದಿಯ ಹಣಕಾಸು ಹಂಚಿಕೆ ಹಾಗೂ ಆಡಳಿತ ಸುಧಾರಣೆಗೆ ಸಂಬಂಧಿಸಿದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ಕುರಿತಾಗಿ ಗ್ರಾಮೀಣಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗುವುದು.

ಸಮಿತಿಯು ಅನುಷ್ಠಾನಗೊಳಿಸಬಹುದಾದ ಶಿಫಾರಸುಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲಿದೆ ಎಂದರು. 5ನೇ ರಾಜ್ಯ ಹಣಕಾಸು ಆಯೋಗದ ವರದಿಯಂತೆ ಗ್ರಾಮ ಪಂಚಾಯಿತಿಗಳಿಗೆ ಒಟ್ಟು ರೂ. 1261 ಕೋಟಿ, ತಾಲ್ಲೂಕು ಪಂಚಾಯಿತಿಗಳಿಗೆ ಒಟ್ಟು ರೂ. 557 ಕೋಟಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಒಟ್ಟು ರೂ. 183 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಿದರು. ಗ್ರಾಮಸಭೆಗಳ ಮಾದರಿಯಲ್ಲಿ ವಾರ್ಡ್ ಸಭೆಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾಗಿದೆ. ಈಗಾಗಲೇ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ಗ್ರಾಮ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲಾಗಿದ್ದು, ಈ ಎಲ್ಲಾ ಸಮಿತಿಗಳು ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಸೂಚನೆ ನೀಡಿದರು.

### ತಜ್ಞರೊಂದಿಗೆ ಸಮಾಲೋಚನೆ

**ಸಂವಿಧಾನದ 74ನೇ ತಿದ್ದುಪಡಿಯ ಆಶಯದಂತೆ ನಗರ ಸ್ಥಳೀಯ ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.**

**ಈ ನಿಟ್ಟಿನಲ್ಲಿ ಕಾಯ್ದೆಗಳಿಗೆ ಸೂಕ್ತ ತಿದ್ದುಪಡಿ ತರುವ ಕುರಿತಾಗಿ ನ್ಯಾಷನಲ್ ಲಾ ಕಾಲೇಜಿನ ತಜ್ಞರೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದು ಹೇಳಿದರು.**

# CBI ತನಿಖೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನಕಾರ

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಅವರ ವಿರುದ್ಧ ನಡೆದಿದೆಯೆನ್ನಲಾದ ಸ್ಟಿಂಗ್ ಆಪರೇಷನ್ ಪ್ರಕರಣವನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ತನಿಖೆಗೆ ವಹಿಸಬೇಕೆಂಬ ಕೇಂದ್ರ ಸಚಿವ ಹಾಗೂ ಜನತಾ ದಳ (ಜಾತ್ಯತೀತ) ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಬೇಡಿಕೆಯನ್ನು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ನಿರಾಕರಿಸಿದ್ದಾರೆ.

ಇದೇ ವೇಳೆ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಪ್ರಕರಣಕ್ಕೆ ಸಂಬಂಧಿಸಿದ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊಗಳು ಹಾಗೂ ಆರೋಪಗಳನ್ನು ಹರಿಬಿಡುವ ಮೂಲಕ ತಮ್ಮ ಪ್ರತಿಷ್ಠೆಗೆ ಧಕ್ಕೆ ತರುವ ಸಂಚು ನಡೆದಿದೆ ಎಂದು ಆರೋಪಿಸಿ ಸಿದ್ದರಾಮಯ್ಯ ದೂರು ನೀಡಿದ ಬಳಿಕ ವಿವಾದ ತೀವ್ರಗೊಂಡಿದೆ.

ಈ ದೂರಿನ ಸಂಬಂಧ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಸೈಬರ್ ಅಪರಾಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಿಬಿಐ ತನಿಖೆ ಏಕೆ ಬೇಕು. ಸಿಬಿಐಗೆ ಸಿಬ್ಬಂದಿ ಎಲ್ಲಿಂದ ಬರುತ್ತಾರೆ? ರಾಜ್ಯವೇ ಅವರಿಗೆ ಸಿಬ್ಬಂದಿಯನ್ನು ಒದಗಿಸಬೇಕು. ಈ ಪ್ರಕರಣದ ತನಿಖೆಯನ್ನು ರಾಜ್ಯ ಪೊಲೀಸರು ನಡೆಸುತ್ತಾರೆ ಎಂದು ಹೇಳಿದರು.

ಇದೇ ವೇಳೆ ಈ ವಿಷಯವನ್ನು ಪದೇಪದೇ ಪ್ರಸ್ತಾಪಿಸುತ್ತಿರುವವರ ವಿರುದ್ಧವೂ ಖರ್ಗೆ ವ್ಯಂಗ್ಯವಾಡಿದರು. ಸ್ಟಿಂಗ್ ಆಪರೇಷನ್‌ಗೆ ಸಂಬಂಧಿಸಿದಂತೆ ಅವರ ಬಳಿ ಹೆಚ್ಚಿನ ಮಾಹಿತಿಯಿರುವಂತೆ ಕಾಣುತ್ತಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ಸುದೀಪ್ ಹೆಲಿಕಾಪ್ಟರ್‌ನಲ್ಲಿ ಬಂದಿದ್ದು ನೋಡಿ ಉಗ್ರಪ್ಪಗೆ ಹೊಟ್ಟೆ ಕಿಚ್ಚು

• ಉದಯವಾಹಿನಿ, ಬೆಂಗಳೂರು

ಯಾವುದೇ ಗಾಡ್‌ಫಾದರ್ ಇಲ್ಲದೆ ತಮ್ಮ ಕಠಿಣ ಪರಿಶ್ರಮದಿಂದಲೇ 33 ವರ್ಷಗಳ ಕಾಲ ನಟನೆಯಲ್ಲಿ ಬೆಳೆದು ಇಂದು ಪ್ಯಾನ್ ಇಂಡಿಯಾ ಸ್ಟಾರ್ ಆಗಿ ಹೊರಹೊಮ್ಮಿರುವ ಮೇರು ನಟ ಸುದೀಪ್ ಅವರಿಗೆ ಉಗ್ರಪ್ಪ ಅವಮಾನ ಮಾಡಿರುವುದು ಸರಿಯಲ್ಲ ಎಂದು ಮಾಜಿ ಸಚಿವ ರಾಜುಗೌಡ ಆಕ್ರೋಶ ವ್ಯಕ್ತಪಡಿಸಿದರು. ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಕೊಡೇಕಲ್ ಪಟ್ಟಣದಲ್ಲಿ ಈ ಕುರಿತು ಮಾತನಾಡಿದ ಬಿಜೆಪಿಯ ಮಾಜಿ ಸಚಿವ ರಾಜುಗೌಡ ಅವರು, ಉಗ್ರಪ್ಪ ಅವರ ನಡೆಗೆ ತೀವ್ರ ಖಂಡನೆ ವ್ಯಕ್ತಪಡಿಸಿದ್ದಾರೆ. ತಾವು ಮತ್ತು ನಟ ಸುದೀಪ್ ಇಲ್ಲದ ಸಂದರ್ಭದಲ್ಲಿ ಉಗ್ರಪ್ಪ ಅವರು ಉಗ್ರಾವತಾರ ತೋರಿಸಿದ್ದಾರೆ ಎಂದು ರಾಜುಗೌಡ ವಾಗ್ದಾಳಿ ನಡೆಸಿದ್ದಾರೆ. ರಾಜ ವೀರಮದಕರಿ ನಾಯಕ ಜಯಂತಿಗೆ ಸುದೀಪ್ ಬಂದರೆ ತಪ್ಪೇನು ಎಂದು ಪ್ರಶ್ನಿಸಿದ ಅವರು, ಕಲಾವಿದನಿಗೆ ಯಾವುದೇ ಜಾತಿ ಇರುವುದಿಲ್ಲ ಎಂದರು.ಸುದೀಪ್ ಅವರ ಹೆಲಿಕಾಪ್ಟರ್ ಬರೋದು ನೋಡಿ ಉಗ್ರಪ್ಪ ಅವರಿಗೆ ಹೊಟ್ಟೆಕಿಚ್ಚಾಗಿದೆ ಎಂದು ಕಿಡಿಕಾರಿದ ರಾಜುಗೌಡ, ರಾಜಕೀಯವಾಗಿ ತಮ್ಮ ಅಥವಾ ಶ್ರೀರಾಮುಲು ಅವರ ಬಗ್ಗೆ ಮಾತನಾಡಲಿ, ಆದರೆ ನಟರ ಬಗ್ಗೆ ಏಕವಚನದಲ್ಲಿ ಮಾತನಾಡುವುದು ಹಾಗೂ ಅವಮಾನಿಸುವುದು ಸರಿಯಲ್ಲ ಎಂದು ಎಚ್ಚರಿಕೆ ನೀಡಿದರು.

## ಸ್ಥಳೀಯ ಸಂಸ್ಥೆಗಳಿಗೂ ಜಿಎಸ್‌ಟಿ ಆದಾಯ ಹಂಚಿಕೆ

• ಉದಯವಾಹಿನಿ, ಬೆಂಗಳೂರು

ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಆದಾಯವನ್ನು ಹಂಚಿಕೆ ಮಾಡುವಂತೆ ಜಿಎಸ್‌ಟಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮತ್ತು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೈಗಾರಿಕೆಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರವನ್ನು ಹಿಂಪಡೆದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಗಳ ಆದಾಯದಲ್ಲಿ ಇಳಿಕೆಯಾಗಿದೆ ಎಂಬುದನ್ನು ರಾಜ್ಯ ಸರ್ಕಾರ ಗಮನಿಸಿದೆ. ಕಾನೂನಿನ ಪ್ರಕಾರ, ಪ್ರಾಧಿಕಾರ ಸಂಗ್ರಹಿಸುವ ಆಸ್ತಿ ತೆರಿಗೆಯ ಶೇ. 30ರಷ್ಟು ಮೊತ್ತವನ್ನು ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಬೇಕು. ಈವರೆಗೆ ಪ್ರಾಧಿಕಾರ ಸಂಗ್ರಹಿಸಿರುವ ಆಸ್ತಿ ತೆರಿಗೆ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಿರುವ ಮೊತ್ತದ ಸಂಪೂರ್ಣ ವಿವರಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ನಡೆದ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, 5ನೇ ರಾಜ್ಯ ಹಣಕಾಸು ಆಯೋಗವು ನಿಧಿ ಹಂಚಿಕೆ ಮತ್ತು ಆಡಳಿತಾತ್ಮಕ ಸುಧಾರಣೆಗಳಿಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸುಗಳನ್ನು ಪರಿಶೀಲಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಬಿ. ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದು ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಐದನೇ ರಾಜ್ಯ ಹಣಕಾಸು ಆಯೋಗದ ವರದಿಯ ಪ್ರಕಾರ, ಸರ್ಕಾರವು ಗ್ರಾಮ ಪಂಚಾಯಿತಿಗಳಿಗೆ 1,261 ಕೋಟಿ ರೂ., ತಾಲ್ಲೂಕು ಪಂಚಾಯಿತಿಗಳಿಗೆ 557 ಕೋಟಿ ರೂ. ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ 183 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ತಿಳಿಸಿದರು.**

# ನಿರ್ಲಕ್ಷ್ಯ ಸಹಿಸಲ್ಲ, ಮಾರ್ಗಸೂಚಿ ಪಾಲಿಸದಿದ್ದರೆ ಕಠಿಣ ಕ್ರಮ: ಹೈಕೋರ್ಟ್ ಚಾಟಿ

## ಬನಶಂಕರಿ 6ನೇ ಹಂತದ ಬಡಾವಣೆ ಯೋಜನೆ ಬಹುತೇಕ ಅನುಷ್ಠಾನಗೊಂಡಿದ್ದು, ಹಲವು ಪ್ರಕರಣಗಳಲ್ಲಿ ನ್ಯಾಯಾಲಯದ ಮಾನ್ಯತೆಯನ್ನೂ ಪಡೆದಿದೆ.

• ಉದಯವಾಹಿನಿ, ಬೆಂಗಳೂರು

**1** ವಿಭಾಗೀಯ ಪೀಠವು ಖಡಕ್ ಸೂಚನೆ ನೀಡಿದೆ.

**2** ಬಿಡಿಎ ಮೇಲ್ಮನವಿಗಳನ್ನು ಪೀಠ ಪುರಸ್ಕರಿಸಿದೆ

**3** ಬನಶಂಕರಿ 6ನೇ ಹಂತದ ಬಡಾವಣೆ ಯೋಜನೆ

ನ್ಯಾಯಾಲಯದ ಮೊಕದ್ದಮೆಗಳನ್ನು ನಿರ್ವಹಿಸುವಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ತೋರುತ್ತಿರುವ ಬೇಜವಾಬ್ದಾರಿತನ ಮತ್ತು ವೈಫಲ್ಯದ ವಿರುದ್ಧ ಕರ್ನಾಟಕ ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಪ್ರಾಧಿಕಾರವು ಇನ್ನು ಮುಂದೆ ತನ್ನದೇ ಆದ 11 ಅಂಶಗಳ ಕಾನೂನು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಡಿ.ಕೆ. ಸಿಂಗ್ ಮತ್ತು ಟಿ.ಎಂ. ನದಾಫ್ ಅವರಿದ್ದ ವಿಭಾಗೀಯ ಪೀಠವು ಖಡಕ್ ಸೂಚನೆ ನೀಡಿದೆ.

ಈ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಪಾಲಿಸುವ ಕುರಿತು ಬಿಡಿಎ ಆಯುಕ್ತರು ಸಲ್ಲಿಸಿರುವ ಅಫಿಡವಿಟ್‌ಗೂ ಬದ್ಧವಾಗಿರಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ಸುತ್ತೋಲೆ ಮತ್ತು ಮಾರ್ಗಸೂಚಿಗಳ ಪಾಲನೆಯಲ್ಲಿ ಯಾವುದೇ ಲೋಪ ಕಂಡುಬಂದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕು. ಇಂತಹ ಉಲ್ಲಂಘನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೈಕೋರ್ಟ್ ಎಚ್ಚರಿಕೆ ನೀಡಿದೆ. ನ್ಯಾಯಾಲಯದ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಕಂಡುಬಂದಿರುವ ಲೋಪದೋಷಗಳು ಹಾಗೂ ವ್ಯವಸ್ಥೆಯಲ್ಲಿನ ವೈಫಲ್ಯಗಳನ್ನು ಸರಿಪಡಿಸುವ ಉದ್ದೇಶದಿಂದ ನ್ಯಾಯಮೂರ್ತಿ ಡಿ.ಕೆ. ಸಿಂಗ್ ಮತ್ತು ನ್ಯಾಯಮೂರ್ತಿ ಟಿ.ಎಂ. ನದಾಫ್ ಅವರನ್ನೊಳಗೊಂಡ ವಿಭಾಗೀಯ ಪೀಠ ಈ ಆದೇಶ ನೀಡಿದೆ.



ಉದಯವಾಹಿನಿ ಚಿತ್ರ

ಇದೇ ವೇಳೆ, ಎರಡು ಪ್ರತ್ಯೇಕ ರಿಟ್ ಅರ್ಜಿಗಳಲ್ಲಿ 2024ರ ಮಾರ್ಚ್ 7 ಮತ್ತು 2023ರ ಆಗಸ್ಟ್ 18ರಂದು ನೀಡಿದ್ದ ಆದೇಶಗಳ ವಿರುದ್ಧ ಬಿಡಿಎ ಸಲ್ಲಿಸಿದ್ದ ಮೇಲ್ಮನವಿಗಳನ್ನು ಪೀಠ ಪುರಸ್ಕರಿಸಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಗುಬ್ಬಲಾಲ ಸಮೀಪದ ಎರಡು ಪ್ರತ್ಯೇಕ ಭೂಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ಹೊರಡಿಸಿದ್ದ ಅಧಿಸೂಚನೆಯನ್ನು ಈ ಹಿಂದೆ ರದ್ದುಗೊಳಿಸಲಾಗಿತ್ತು. ಕನಕಪುರದಿಂದ ಬನಶಂಕರಿಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಹಾಗೂ ಬನಶಂಕರಿ 6ನೇ ಹಂತದ ಬಡಾವಣೆಯ ವಿಸ್ತರಣೆಗೆ ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿತ್ತು.

ಬಿಡಿಎ ಸಲ್ಲಿಸಿದ್ದ ಮೇಲ್ಮನವಿಗಳನ್ನು ಪುರಸ್ಕರಿಸಿದ ವಿಭಾಗೀಯ ಪೀಠ, ಬನಶಂಕರಿ 6ನೇ ಹಂತದ ಬಡಾವಣೆ ಯೋಜನೆ ಬಹುತೇಕ ಅನುಷ್ಠಾನಗೊಂಡಿದ್ದು, ಹಲವು ಪ್ರಕರಣಗಳಲ್ಲಿ ನ್ಯಾಯಾಲಯದ ಮಾನ್ಯತೆಯನ್ನೂ ಪಡೆದಿದೆ ಎಂದು ಹೇಳಿದೆ. ಈ ಹಿನ್ನೆಲೆಯಲ್ಲಿ, ಪ್ರಕರಣದಲ್ಲಿರುವ ಭೂಮಿಯಂತಹ ಸಣ್ಣ ಸಣ್ಣ ಜಮೀನುಗಳ ತುಂಡುಗಳಲ್ಲಿ ಪ್ರತ್ಯೇಕ ದ್ವೀಪದಂತಿರುವ ಬಡಾವಣೆಗಳನ್ನು ನಿರ್ಮಿಸಲು ಬಿಡಿಎಗೆ ಅವಕಾಶವಿಲ್ಲ ಎಂಬ ಭೂಮಾಲೀಕರ ಪರ ಹಿರಿಯ ವಕೀಲರ ವಾದಕ್ಕೆ ಆಧಾರವಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿದೆ. ವಿಚಾರಣೆ ಮತ್ತು ನ್ಯಾಯಾಂಗ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಬಿಡಿಎ ರೂಪಿಸಿರುವ 11 ಮಾರ್ಗಸೂಚಿಗಳ ಪ್ರಕಾರ, ಯಾವುದೇ ವಕೀಲರು, ಅಧಿಕಾರಿ ಅಥವಾ ಇಲಾಖೆಗೆ ನೋಟಿಸ್, ಅರ್ಜಿ, ಮನವಿ, ಸಮನ್ಸ್, ನ್ಯಾಯಾಲಯದ ಆದೇಶ, ತೀರ್ಪು, ನ್ಯಾಯಾಂಗ ನಿಂದನೆ ನೋಟಿಸ್ ಅಥವಾ ಇತರ ಕಾನೂನು ಸಂಬಂಧಿತ ಪತ್ರಗಳು ಬಂದರೆ, ಅವುಗಳನ್ನು ಅದೇ ದಿನ ಅಥವಾ ಗರಿಷ್ಠ ಮರುದಿನದೊಳಗೆ ಮುಖ್ಯ ಕಾನೂನು ಅಧಿಕಾರಿಗೆ ರವಾನಿಸಬೇಕು.

**ನ್ಯಾಯಾಲಯದಿಂದ ಸ್ವೀಕರಿಸುವ ನೋಟಿಸ್‌ಗಳನ್ನು ಎಲ್ಲಾ ವಕೀಲರು ಅದೇ ದಿನ ಬಿಡಿಎಯ ಕಾನೂನು ವಿಭಾಗದ ವಾಟ್ಸ್‌ಆಪ್ ಗುಂಪಿನಲ್ಲಿ ಅಪ್‌ಲೋಡ್ ಮಾಡಬೇಕು. ಬಳಿಕ ಮುಖ್ಯ ಕಾನೂನು ಅಧಿಕಾರಿ ಸಂಬಂಧಪಟ್ಟ ವಲಯ ಆಯುಕ್ತರಿಗೆ ತಕ್ಷಣವೇ ಅಥವಾ ಗರಿಷ್ಠ 48 ಗಂಟೆಗಳೊಳಗೆ ಕಳುಹಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಬೇಕು.-ನ್ಯಾಯಮೂರ್ತಿ ಡಿ.ಕೆ. ಸಿಂಗ್**

### ಪ್ರಕರಣಗಳನ್ನು ಪರಿಶೀಲಿಸಿ

ನ್ಯಾಯಾಲಯಕ್ಕೆ ಸಲ್ಲಿಸಿರುವ ಕಚೇರಿ ಆದೇಶದಲ್ಲಿ ಬಿಡಿಎ, ನ್ಯಾಯಾಲಯಗಳಲ್ಲಿ ತನ್ನ ವಿರುದ್ಧ ಪ್ರತಿಕೂಲ ಆದೇಶಗಳು ಬಂದಾಗಲೆಲ್ಲ ಮೇಲ್ಮನವಿ ಸಲ್ಲಿಸುವ ಮೂಲಕ ಸಮಯ ಮತ್ತು ಹಣ ವ್ಯರ್ಥ ಮಾಡುವ ಬದಲು, ಮೊದಲು ಪ್ರಕರಣಗಳನ್ನು ಪರಿಶೀಲಿಸುವುದು ಸೂಕ್ತ ಎಂದು ತಿಳಿಸಿದೆ.

ಅಂತರಾಳದಿಂದ... EDITORIAL

# ಪ್ರವಾಸೋದ್ಯಮ ಉತ್ತೇಜನ ನೀತಿ ಅನುಷ್ಠಾನಕ್ಕೆ ಬದ್ಧತೆ ತೋರಲಿ



ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ತಂತ್ರಜ್ಞಾನ ಮತ್ತು ನಾವೀನ್ಯತೆಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಮುಂದಾಗಿರುವ ರಾಜ್ಯ ಸರಕಾರ ಇದಕ್ಕಾಗಿ ಹೊಸದಾಗಿ ಪ್ರವಾಸೋದ್ಯಮ ಉತ್ತೇಜನ ನೀತಿ ರೂಪಿಸಲು ನಿರ್ಧರಿಸಿದೆ. ರಾಜ್ಯದಲ್ಲಿ ಪ್ರವಾಸೋದ್ಯಮ ಕ್ಷೇತ್ರವು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ತಂತ್ರಜ್ಞಾನದ ಮೂಲಕ ಗುರುತಿಸಿ, ಸುಧಾರಿತ ತಂತ್ರಜ್ಞಾನದ ಮೂಲಕ ಪರಿಹಾರ ಕಂಡುಕೊಳ್ಳುವ ಗುರಿಯನ್ನು ಸರಕಾರ ಹಾಕಿಕೊಂಡಿದೆ. ಈಗಾಗಲೇ ದೇಶದ ಕೆಲವು ರಾಜ್ಯಗಳು ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಸುಧಾರಿತ ತಂತ್ರಜ್ಞಾನವನ್ನು ಬಳಸಿ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಸರಕಾರದ ಈ ಪ್ರಯತ್ನ ಸ್ವಾಗತಾರ್ಹ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಅಭಿವೃದ್ಧಿಗೆ ವಿಪುಲ ಅವಕಾಶಗಳಿದ್ದರೂ ಅವನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಸರಕಾರ ವಿಫಲವಾಗಿದೆ. ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಸರಕಾರ ಸಾರ್ವಜನಿಕ ಸಹಭಾಗಿತ್ವದಡಿಯಲ್ಲಿ ಖಾಸಗಿ ಸಂಸ್ಥೆಗಳ ಮೊರೆ ಹೋದರೂ ವಿಶೇಷ ಪ್ರಗತಿ ಕಂಡಿಲ್ಲ. ದೇಶ-ವಿದೇಶಗಳ ಪ್ರವಾಸಿಗರನ್ನು ಸೆಳೆಯಬಲ್ಲಂತಹ ಪ್ರವಾಸಿ ತಾಣಗಳು ನಮ್ಮಲ್ಲಿದ್ದರೂ ರಾಜ್ಯದಲ್ಲಿನ ಪ್ರವಾಸಿಗರು ಕೂಡ ಈ ತಾಣಗಳಿಗೆ ಭೇಟಿ ನೀಡಲು ಹಿಂದೇಟು ಹಾಕುವಂತಹ ಪರಿಸ್ಥಿತಿ ಇದೆ. ಅಧಿಕಾರಕ್ಕೇರಿದ ಸರಕಾರಗಳೆಲ್ಲವೂ ಹೊಸ ನೀತಿಗಳನ್ನು ರೂಪಿಸಿ ಜಾರಿಗೊಳಿಸುತ್ತಲೇ ಬಂದಿದ್ದರೂ ಪ್ರವಾಸೋದ್ಯಮ ನಿಂತ ನೀರಿನಂತಾಗಿರುವುದು ಸುಳ್ಳಲ್ಲ. ಆದರೆ ಸರಕಾರ ಮಾತ್ರ ಪ್ರವಾಸೋದ್ಯಮದ ಹೊಸ ಕನಸುಗಳನ್ನು ಬಿತ್ತುತ್ತಲೇ ಸಾಗಿವೆ ಹೊರತು ಅದನ್ನು ನನಸಾಗಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿಲ್ಲ ಎಂಬುದು ಸರ್ವವಿದಿತ. ಈಗ ಹಾಲಿ ಸರಕಾರ ಪ್ರವಾಸೋದ್ಯಮ ಉತ್ತೇಜನ ನೀತಿಯನ್ನು ರೂಪಿಸುವುದಾಗಿ ಘೋಷಿಸಿದೆ. ತಂತ್ರಜ್ಞಾನ ಮತ್ತು ನಾವೀನ್ಯತೆ ಬಳಸಿಕೊಂಡು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಮುಂದಾಗಿದೆ. ಪ್ರವಾ ಸೋದ್ಯಮ ಇಲಾಖೆಯ ಉದ್ದೇಶಿತ ಯೋಜನೆಯಂತೆ ಸ್ಟಾರ್ಟ್ ಅಪ್‌ಗು, ಯುವ ಉದ್ಯಮಿಗಳು ಹಾಗೂ ನವೋದ್ಯಮಿಗಳನ್ನು ಬಳಸಿಕೊಂಡು ರಾಜ್ಯದ ಪ್ರವಾಸೋದ್ಯಮ ವಲಯಕ್ಕೆ ಸಮಗ್ರ ಕಾಯಕಲ್ಪ ನೀಡಲಾಗುವುದು. ಪ್ರವಾಸಿ ಸ್ಥಳಗಳಲ್ಲಿನ ಮೂಲ ಸೌಕರ್ಯಗಳ ಕೊರತೆಯ ನಿವಾರಣೆ, ಡಿಜಿಟಲ್ ಸೇವೆಗಳ ವಿಸ್ತರಣೆ, ಪ್ರವಾಸಿತಾಣಗಳ ಸುವ್ಯವಸ್ಥಿತ ನಿರ್ವಹಣೆ, ನೈರ್ಮಲ್ಯ, ಸಾರಿಗೆ ವ್ಯವಸ್ಥೆ, ಸುರಕ್ಷೆ, ಪ್ರವಾಸಿಗರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಪ್ರವಾಸಿಗರನ್ನು ಸೆಳೆಯಲು ತಂತ್ರಜ್ಞಾನಸ್ನೇಹಿ ಸುಧಾರಣ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಸಂಬಂಧ ಸಂಬಂಧಿತ ಕ್ಷೇತ್ರದಲ್ಲಿನ ಸಾರ್ಟ್ ಅಪ್ ಗಳ ನೆರವು ಪಡೆಯುವುದರ ಜತೆಯಲ್ಲಿ ಇಂತಹ ಸ್ಟಾರ್ಟ್ ಅಪ್ ಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಗುರಿ ಸರಕಾರದ್ದಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ತಂತ್ರಜ್ಞಾನದ ಬಳಕೆ ಸಾಮಾನ್ಯವಾಗಿರುವಾಗ ಸರಕಾರದ ಈ ಚಿಂತನೆ ಅಕ್ಷರಶಃ ಕಾರ್ಯರೂಪಕ್ಕೆ ಬಂದದ್ದೇ ಆದಲ್ಲಿ ತನ್ನ ಉದ್ದೇಶಿತ ಗುರಿ ಸಾಧಿಸಲು ಸಾಧ್ಯ. ಈ ನಿಟ್ಟಿನಲ್ಲಿ ಸರಕಾರ ತನ್ನ ಇಚ್ಛಾಶಕ್ತಿ ಮತ್ತು ಬದ್ಧತೆ ಪ್ರದರ್ಶಿಸಬೇಕು.

**ಪ್ರಾಕೃತಿಕ, ಚಾರಿತ್ರಿಕ, ಧಾರ್ಮಿಕ, ಸಾಂಸ್ಕೃತಿಕ ತಿಕ ಹೀಗೆ ವಲಯಗಳಲ್ಲೂ ಪ್ರವಾಸೋದ್ಯಮಕ್ಕೆ ಸಾಕಷ್ಟು ಅವಕಾಶಗಳಿವೆ, ರಾಜ್ಯದ ಆರ್ಥಿಕತೆಗೆ ಪ್ರವಾಸೋದ್ಯಮ ತನ್ನದೇ ಆದ ಕೊಡುಗೆ ನೀಡುತ್ತ ಬಂದಿದ್ದರೂ ಈ ಕ್ಷೇತ್ರಕ್ಕೆ ಸರಕಾರಗಳಿಂದ ನಿರೀಕ್ಷಿತ ಆದ್ಯತೆ ಲಭಿಸಿಲ್ಲ. ಕಳೆದೆರಡು ದಶಕಗಳಲ್ಲಿ ಆಡಳಿತಕ್ಕೆ ಬಂದ ಸರಕಾರಗಳೆಲ್ಲವೂ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಸಲುವಾಗಿ ಹೊಸ ಹೊಸ ನೀತಿಗಳನ್ನು ರೂಪಿಸಿ, ಜಾರಿಗೊಳಿಸಿದ್ದರೂ ಉದ್ದೇಶಿತ ಗುರಿ ಸಾಧನೆಯಲ್ಲಿ ವಿಫಲವಾಗಿವೆ. ರಾಜ್ಯದ ಬಹುತೇಕ ಪ್ರವಾಸೋದ್ಯಮ ತಾಣಗಳು ಮೂಲಸೌಕರ್ಯಗಳ ಕೊರತೆ, ನೈರ್ಮಲ್ಯ ಸಮಸ್ಯೆಗಳಿಂದ ನಲುಗಿ ಹೋಗಿವೆ. ಕೆಲವು ತಾಣಗಳಲ್ಲಿ ಒಂದಿಷ್ಟು ಮೂಲ ಸೌಕರ್ಯಗಳನ್ನು ಕಲ್ಪಿಸಿ, ಪ್ರವಾಸಿಗರನ್ನು ಸೆಳೆಯುವ ಪ್ರಯತ್ನ ನಡೆದಿದ್ದರೂ ವ್ಯವಸ್ಥಿತ ನಿರ್ವಹಣೆ ಇಲ್ಲದೆ ಸೊರಗಿವೆ.**

# ರಾಮಾಯಣ



18. ರಾಮ-ಲಕ್ಷ್ಮಣರನು? ಇಂದಜಿತುವು ಸರ್ಪಾಸದಿಂದ ಕಿ ಹ ಈ ಕಟ್ಟಹಾಕುವುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಬರುತ್ತಿರುವ ವಿಭೀಷಣನನ್ನು ಕಂಡ ಸುಗ್ರೀವನಿಗೆ ಓಡಿಹೋಗುವ ಕಪಿಗಳನ್ನು ಕಂಡು ಖೇದವೆನಿಸಿತು. ಇವರೆಲ್ಲ ಯಾಕೆ ಹೀಗೆ ಪಲಾಯನ ಮಾಡುತ್ತಿದ್ದಾರೆ ಎಂದು ಅಂಗದನನ್ನು ಕೇಳಿದ. ಆಗ ಅವನು, ದೂರದಲ್ಲಿ ಗದಾಧಾರಿಯಾಗಿ ಬರುತ್ತಿದ್ದ ವಿಭೀಷಣನನ್ನು ನೋಡಿದ ಕಪಿಗಳು, ಮತ್ತೆ ಇಂದ್ರಜಿತುವೇ ಬಂದನೇನೋ ಎಂದು ಹೆದರಿದ್ದಾರೆ ಎಂದು ತಿಳಿಸಿದ. ಆಗ ಸುಗ್ರೀವನು ಜಾಂಬವಂತನನ್ನು ಕುರಿತು, ''ಜಾಂಬವಂತ, ವಿಭೀಷಣನನ್ನು ಕಂಡು ಇಂದ್ರಜಿತು ಮತ್ತೆ ಬಂದನೆಂದು ಹೆದರಿ ನಮ್ಮ ಭಟರೆಲ್ಲ ನಾಲ್ಕೂ ದಿಕ್ಕುಗಳಿಗೆ ಓಡುತ್ತಿದ್ದಾರೆ. ಅವರಿಗೆಲ್ಲ ಧೈರ್ಯ ಹೇಳು, ಬಂದವನು ವಿಭೀಷಣ ಎಂದು ತಿಳಿಸಿ, ಅವರನ್ನೆಲ್ಲ ಮರಳಿ ಬರಲು ಹೇಳು'' ಎಂದು ಹೇಳಿದ. ಆಗ ಜಾಂಬವಂತನು ಎಲ್ಲಾ ಕಡೆಗಳಿಗೂ ಹೋಗಿ ಇರುವ ವಿಷಯವನ್ನು ತಿಳಿಸಿ ಎಲ್ಲರನ್ನೂ ಕರೆತರಲು ಹೆಣಗಿದ. ಹತ್ತಿರ ಬಂದ ಕಪಿಗಳು ವಿಭೀಷಣನನ್ನು ಕಂಡು ತಮಗಾದ ಗಾಬರಿಯನ್ನು ನೆನೆದು ನಸುನಕ್ಕ ಬಂದ ವಿಭೀಷಣನು ರಾಮಲಕ್ಷ್ಮಣರಿದ್ದ ಕಡೆಗೆ ಹೋಗಿ ಮೂರ್ಛೆಗೊಂಡು ಶರತಲ್ಪದಲ್ಲಿ ಮಲಗಿದ್ದ ರಾಜಸುತರನ್ನು ಕಂಡು ಮಮ್ಮಲ ಮರುಗಿದ. ಶೋಕದಿಂದ ಅವರ ಗುಣಗಳನ್ನು ನೆನೆಯುತ್ತ, ಹೊಗಳುತ್ತ, ಮತ್ತೆ ಅಳುತ್ತ, ''ದೇವಸಮೂಹವನ್ನೂ ಲೆಕ್ಕಿಸದ ದೈತ್ಯರನ್ನೂ ಗಣಿಸದ ಎಷ್ಟುಸಮವಿಕ್ರಮರಾದರಿವರಿಗೆ ಇಂದು ಏನು ಪಾಡು ಬಂದಿದೆಯಲ್ಲ, ಮಹಾದೇವಾ!' ಎಂದು ಅವರ ದುರವಸ್ಥೆಯನ್ನು ಕಂಡು ಕಣ್ಣುಗಳಲ್ಲಿ ನೀರು ತಂದುಕೊಂಡ. ''ನನ್ನ ಅಣ್ಣನ ದುಷ್ಟಪುತ್ರನಾದ ಇಂದ್ರಜಿತುವು ತನ್ನ ಮಾಯೆಯಿಂದ ಸರ್ಪಾಸ್ತ್ರವನ್ನು ಪ್ರಯೋಗಿಸಿದ್ದರಿಂದ ಇವರು ಅದರ ಬಂಧನಕ್ಕೊಳಗಾಗಿದ್ದಾರೆ. ನನಗೆ 'ನ್ನಾರು ಗತಿ ನನಗೆ ರಾಜ್ಯಸಿರಿಯನ್ನು ತಂದೀಯುವುದಾಗಿ ಹೇಳಿದ ಈ ಸಿಖ ನನ್ನ ರಾಜ್ಯದ ಆಸೆ ಹಾಗೆಯೇ ಕೊನೆಗಂಡಿತು, ನನ್ನ ದೌರ್ಭಾಗ್ಯದ ಪರಿ ಎಂತಹುದು, ದೇವರೇ! ನನ್ನ ಕಾರಣದಿಂದಾಗಿ ರಘುವೀರನಿಗೆ ಆಪತ್ತು ಅಡಸಿತು. ಆದರೆ ನನಗೆ ಲಂಕಾಧಿಪತ್ಯವು ದೊರೆಯಲಿಲ್ಲ ಎಂಬ ಅನುತಾಪ ಕೊಂಚವೂ ಇಲ್ಲ, ಅಣ್ಣನ ದೌರ್ಜನ್ಯವನ್ನು ತಾಳಲಾರದೆ, ಅವನನ್ನು ಧಿಕ್ಕರಿಸಿ ಧರ್ಮಸ್ವರೂಪಿಯ ಸಾನಿಧ್ಯದಲ್ಲಿ ನೆಮ್ಮದಿಯಿಂದ ಬದುಕಬೇಕೆಂಬ ಆಸೆಯಿಂದ ಬಂದರೆ ಇನಕುಲೇಶನಿಗೇ ಈಗ ಈ ಆಪತ್ತು ಒದಗಿ ಬಂದಿರುವುದಲ್ಲ! ಎಂದು ಗುರುಹಿರಿಯರನ್ನು ಧಿಕ್ಕರಿಸಿ ನರನನ್ನು ಆಶ್ರಯಿಸಿ ಬಂದು ಅಳಲುತ್ತಿರುವ ವಿಭೀಷಣನ ಪರಿಯನ್ನು ಕಂಡು ಸುಗ್ರೀವನು ಅವನನ್ನು ಪ್ರೀತಿಯಿಂದ ಆಲಂಗಿಸಿಕೊಂಡು ವಿನಯಮಾಧುರ್ಯಗಳಿಂದ ಕೂಡಿ, ''ಧರ್ಮಜ್ಞನಾದ ವಿಭೀ ಣನೇ ನಿನಗೆ ಲಂಕೆಯ ಪತ್ಯವು ದೊರೆಯುವುದರಲ್ಲಿ ಎಳ್ಳನಿತೂ ಸಂದೇಹವಿಲ್ಲ. ಎದೆಗುಂದಬೇಡ. ರಾಜಕುಮಾರರಿಬ್ಬರೂ ಮಾರಣಾಂತಿಕವಾದ ರೀತಿಯ ಬಾಧೆಗೆ ಒಳಪಟ್ಟಿಲ್ಲ. ಮೂರ್ಛೆ ಹೋಗಿದ್ದಾರೆ, ಅಷ್ಟೆ. ಇಬ್ಬರೂ ಎಚ್ಚೆತ್ತು ದಶಶಿರನ ಕುಲವನ್ನೆಲ್ಲ ಸವರಿ ಹಾಕಿ ನಿನಗೆ ಸಾಮ್ರಾಜ್ಯ ಸಂಪದವನ್ನು ಕೊಡಿಸುವುದರಲ್ಲಿ ಅನುಮಾನ ಬೇಡ'' ಎಂದು ಅವನನ್ನು ಉಪಚರಿಸಿದ. ಪಕ್ಕದಲ್ಲಿದ್ದ ಸುಷೇಣನು ಸುಗ್ರೀವನನ್ನು ಸದ್ದಕ್ಷಿಯಿಂದ ನೋಡಿ ಕನಿಸಿನಿಂದ, ''ಮಾವ, ಕಪಿಗಳನ್ನು ರಾಜಪುತ್ರರ ಜತೆಗೆ ಕರೆದುಕೊಂಡು ನೀವೀಗಲೇ ಕಿಷ್ಕಿಂಧೆಗೆ ಮರಳಿ ಅಕುದಿಂದಂ, ನಾನು ಹೋಗಿ ದಶಾಸನನ್ನು ಕೊಂದು, ಜಾನಕಿಯನ್ನು ಕರೆತರುತ್ತೇನೆ, ಹೋದ ಸಿರಿಯನ್ನು ಮರಳಿ ತರುತ್ತೇನೆ ಹೀಗೆ ಶೌರ್ಯದ ಮಾತುಗಳನ್ನಾ ಡಿದುದ್ದು ಕೇಳಿದ ಹಷೇಣನು, ''ಇಂತಹ ಮಾತುಗಳಿಂದ ಏನು ಪ್ರಯೋಜನ ಮಾಡಬೇಕಾದುದನ್ನು ಚಿಂತಿಸಿ ಅದಕ್ಕನುಗುಣವಾದ ರೀತಿಯಲ್ಲಿ ನಡೆಯಬೇಕು. ಹಿಂದೆ ದೇವಾಸುರಯುದ್ಧದ ಕಾಲದಲ್ಲಿಯೂ ಹೀಗೆಯೇ ಆಯಿತು, ದೇವತೆಗಳು ಅಸ್ತವಿದ್ಯಾನೈಪುಣ್ಯವನ್ನು ಹೊಂದಿದ್ದರೂ. ರಕ್ಷಸರು ಮಾಬಲವನ್ನು ಹೊಂದಿ ಕ್ರೂರಕರ್ಮಗಳಿಂದ ಇಂದ್ರ ಬ್ರಹ್ಮ ಇವರನ್ನುಳಿದಂತೆ ಮಿಕ್ಕ ಸುರರ ಜೀವಗಳನ್ನು ಹಾರಿಸಿದರು.

ಆಗ ಬೃಹಸ್ಪತಿಯು ತನ್ನ ಮಂತ್ರತಂತ್ರಗಳಿಂದ ಕೂಡಿ ಪ್ರಬಲವಾದ ಔಷಧಿಗಳಿಂದ ದೇವತೆಗಳನ್ನೆಲ್ಲ ಕಾಪಾಡಿದ .ಆ ಔಷಧಿಗಳನ್ನು ಹಾಲ್ಗಡಲಿನ ಮಧ್ಯದಲ್ಲಿರುವ ಚಂದ್ರದ್ರೋಣ ಪರ್ವತದಲ್ಲಿಟ್ಟಿದ್ದಾರೆ. ಆ ಮೂಲಿಕೆಗಳನ್ನು ತರಲು ಸಂಪಾತಿ ಪನಸ ಮುಂತಾದವರು ಬೇಗ ಹೋಗಿ ಅವುಗಳನ್ನು ತರಲಿ ಅವರಿಗೆ ಆ ಔಷಧಿಗಳು ಗೊತ್ತು ಅಮಿತ ತೇಜೋಭರಿತವಾದ ಸಂಜೀವಕರಣಿ, ಎಶಲ್ಯಕರಣಿ ಎಂಬ ಈ ಎರಡನ್ನು ತಂದರೆ ಕಾರ್ಯವು ನೆರವೇರುತ್ತದೆ ಎಂದು ಪರಿಹಾರವನ್ನು ಸೂಚಿಸಿದ.

ಮುಂದುವರೆಯುವುದು



# ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

10

## ಕೊನೆಯ ಕ್ಷಣದ ಗಾಬರಿಯನ್ನು ಗೆಲ್ಲುವ ಕಲೆ

**ಕೊನೆಯ ಘಳಿಗೆಯಲ್ಲಿ ಹೊಸ ವಿಷಯ ಮುಟ್ಟಬೇಡಿ, ಗೊಂದಲವೇ ಹೆಚ್ಚು. ಈಗಾಗಲೇ ಓದಿದ ಸೂತ್ರ, ದಿನಾಂಕ, ಹೆಸರುಗಳ ಚಿಕ್ಕ ಚೀಟಿ ಮಾತ್ರ ನೋಡಿ. ದಪ್ಪ ಪಾಠ ಬಿಡಿ, ಮನಸ್ಸಿಗೆ ವಿಶ್ರಾಂತಿ ಕೊಡಿ. ಕೊನೆಯ ಐದು ನಿಮಿಷದ ಓದು ಫಲಿತಾಂಶ ಬದಲಿಸದು, ಆದರೆ ಆತಂಕ ನಿಮ್ಮ ಅಂಕವನ್ನು ಕಸಿಯುತ್ತದೆ.**

ಪರೀಕ್ಷೆಗೆ ಹೊರಟ ಬಸ್ಸಿನಲ್ಲೂ ಪುಸ್ತಕ ತಿರುವುವುದು, ಕೊಠಡಿ ಸೇರಿದ ಕೂಡಲೇ ಎಲ್ಲವೂ ಮರೆತಂತೆ ತೋರುವುದು – ಇದೇ ಕೊನೆಯ ಕ್ಷಣದ ಗಾಬರಿ. ಈ ತರಾತುರಿಯ ಓದಿನಿಂದ ಫಲವಿಲ್ಲ, ಬದಲಿಗೆ ಮೆದುಳು ಇನ್ನಷ್ಟು ಗೊಂದಲಕ್ಕೀಡಾಗುತ್ತದೆ.

ಏನೋ ಬಿಟ್ಟುಹೋಯಿತು ಎಂಬ ಭಯದಿಂದ ಕೈ ನಡುಗುತ್ತದೆ. ಸಿದ್ಧತೆ ಇದ್ದರೂ ಬರೆಯಲಾಗುವುದಿಲ್ಲ. ಕೊಠಡಿಗೆ ಹೋದಮೇಲೆ ಮೂರು ಆಳ ಉಸಿರು ತೆಗೆದುಕೊಳ್ಳಿ. ನಾನು ಸಿದ್ಧನಿದ್ದೇನೆ ಎಂದು ನಿಮಗೆ ನೀವೇ ಹೇಳಿಕೊಳ್ಳಿ. ಪ್ರಶ್ನೆಪತ್ರಿಕೆ ಬಂದೊಡನೆ ಆತುರ ಬೇಡ, ಎಲ್ಲಾ ಪ್ರಶ್ನೆಗಳನ್ನು ಒಮ್ಮೆ ಓದಿ. ಸುಲಭವಾದವುಗಳಿಂದ ಆರಂಭಿಸಿ, ಆತ್ಮವಿಶ್ವಾಸ ಹೆಚ್ಚುತ್ತದೆ.

ಕಠಿಣ ಪ್ರಶ್ನೆ ಕಂಡು ಬೆದರದೆ ಕೊನೆಗೆ ಇಡಿ. ನೆನಪಿಡಿ, ಪರೀಕ್ಷೆ ಯುದ್ಧವಲ್ಲ, ಜ್ಞಾನ ತೋರಿಸುವ ಅವಕಾಶ. ಕೊನೆಯ ಕ್ಷಣದ ಓಟ ಬಿಟ್ಟು ಶಾಂತವಾಗಿ ಕುಳಿತರೆ ಅರ್ಧ ಕೆಲಸ ಮುಗಿದಂತೆ. ಗಾಬರಿ ಬಿಟ್ಟು ಧೈರ್ಯದಿಂದ ಬರೆದರೆ ಓದಿದ್ದೆಲ್ಲ ನೆನಪಿಗೆ ಬರುತ್ತದೆ. ಶಾಂತ ಮನಸ್ಸೇ ಅತ್ಯುತ್ತಮ ಪೆನ್ನು.



# ಗ್ರೀನ್ ಟೀಯಲ್ಲಿನ ಕ್ಯಾಟೆಚಿನ್ಸ್, ಪಾಲಿಫಿನಾಲ್ಸ್ ರಕ್ತದಲ್ಲಿನ ಶುಗರ್ ಲೆವಲ್ ನಿಯಂತ್ರಿಸುತ್ತದೆಯೇ?: ವೈದ್ಯರು ತಿಳಿಸುವುದೇನು

ಮಧುಮೇಹ ಸ್ಥಿತಿಯು ರಕ್ತದಲ್ಲಿನ ಸಕ್ಕರೆ ಮಟ್ಟವು ಅಸಹಜವಾಗಿ ಹೆಚ್ಚಾಗುವುದರಿಂದ ಉಂಟಾಗುತ್ತದೆ. ರಕ್ತದಲ್ಲಿನ ಶುಗರ್ ಲೆವಲ್ ಹೆಚ್ಚಾಗುವುದರಿಂದ ಕಾಲಕ್ರಮೇಣ ಮೂತ್ರಪಿಂಡಗಳು, ಹೃದಯ ಹಾಗೂ ಯಕೃತ್ತಿನಂತಹ ವಿವಿಧ ಅಂಗಗಳಿಗೆ ಹಾನಿಯಾಗುವ ಸಾಧ್ಯತೆಯಿರುತ್ತದೆ. ಮಧುಮೇಹಿಗಳು ತಮ್ಮ ಆಹಾರ ಕ್ರಮ ಹಾಗೂ ದೈನಂದಿನ ಅಭ್ಯಾಸಗಳ ಕುರಿತು ಹೆಚ್ಚಿನ ಗಮನ ಹರಿಸಬೇಕು ಎಂದು ವೈದ್ಯರು ಸಲಹೆ ನೀಡುತ್ತಾರೆ.

ಮಧುಮೇಹ ನಿಯಂತ್ರಿಸಲು ಹಲವು ಜನರು ಗ್ರೀನ್ ಟೀ ಕುಡಿಯುತ್ತಾರೆ. ಗ್ರೀನ್ ಟೀಯಲ್ಲಿ ಕ್ಯಾಟೆಚಿನ್‌ಗಳೆಂಬ ಆಂಟಿಆಕ್ಸಿಡೆಂಟ್‌ಗಳು ಇರುತ್ತವೆ. ದೇಹದಲ್ಲಿನ ಉರಿಯೂತ ಹಾಗೂ ಚಯಾಪಚಯ ಕ್ರಿಯೆಗೆ ಸಂಬಂಧಿಸಿದ ಪ್ರಕ್ರಿಯೆಗಳಿಗೆ ತುಂಬಾ ಉಪಯುಕ್ತವಾಗಿದೆ. ಮಧುಮೇಹಿಗಳು ಗ್ರೀನ್ ಟೀ ಕುಡಿಯುವುದು ಉತ್ತಮವೇ ಗ್ರೀನ್ ಟೀ ಸೇವಿಸುವುದರಿಂದ ರಕ್ತದಲ್ಲಿನ ಶುಗರ್ ಲೆವಲ್ ಕಡಿಮೆಯಾಗುತ್ತದೆಯೇ ಎಂಬುದನ್ನು ತಿಳಿಯೋಣ.

ಗ್ರೀನ್ ಟೀ ಕ್ಯಾಮೆಲಿಯಾ ಸಿನೆನ್ಸಿಸ್ ಸಸ್ಯದ ಎಲೆಗಳಿಂದ ತಯಾರಿಸಲಾಗುತ್ತದೆ. ಕನಿಷ್ಠ ಸಂಸ್ಕರಣೆಗೆ ಒಳಗಾಗುವುದರಿಂದ ಇದು ನೈಸರ್ಗಿಕ ಪಾಲಿಫಿನಾಲ್‌ಗಳನ್ನು ಉಳಿಸಿಕೊಳ್ಳುತ್ತದೆ. ಗ್ರೀನ್ ಟೀಯಲ್ಲಿ ದೇಹಕ್ಕೆ ವಿವಿಧ ರೀತಿಯಲ್ಲಿ ಪ್ರಯೋಜನ ನೀಡಬಲ್ಲ ಅನೇಕ ಸಂಯುಕ್ತಗಳಿವೆ ಎಂದು ಹಲವು ಅಧ್ಯಯನಗಳು ಸ್ಪಷ್ಟಪಡಿಸಿವೆ.

ಗ್ರೀನ್ ಟೀಯಲ್ಲಿರುವ ಕ್ಯಾಟೆಚಿನ್ ಆಂಟಿಆಕ್ಸಿಡೆಂಟ್‌ಗಳು ದೇಹದಲ್ಲಿನ ಆಕ್ಸಿಡೇಟಿವ್ ಒತ್ತಡ ಕಡಿಮೆ ಮಾಡುವಲ್ಲಿ ಪಾತ್ರವಹಿಸುತ್ತವೆ. ಗ್ರೀನ್ ಟೀಯಲ್ಲಿರುವ ಅಂಶಗಳು ಇನ್ಸುಲಿನ್ ಸಂವೇದನೆಗೆ ಸಂಬಂಧಿಸಿದಂತೆ ಹೆಚ್ಚು ಪ್ರಯೋಜನಗಳನ್ನು ನೀಡುತ್ತವೆ ಎಂದು ಸಂಶೋಧನೆಗಳು ತಿಳಿಸುತ್ತವೆ. ಹಲವು ಸಂಶೋಧನೆಗಳು ತಿಳಿಸುವ ಪ್ರಕಾರ, ಪ್ರತಿದಿನ ಎರಡು ಇಲ್ಲವೇ ಮೂರು ಕಪ್ ಗ್ರೀನ್ ಟೀ ಸೇವಿಸುವ ವ್ಯಕ್ತಿಗಳು ಟೈಪ್-2 ಮಧುಮೇಹ ಬರುವ ಅಪಾಯ ಶೇ.19ರಷ್ಟು ಕಡಿಮೆ ಮಾಡಿಕೊಳ್ಳಬಹುದು. ಗ್ರೀನ್ ಟೀ ನಿಯಮಿತ ಸೇವನೆಯು ಉಪವಾಸದ ಸಮಯದಲ್ಲಿ ರಕ್ತದಲ್ಲಿನ ಶುಗರ್ ಲೆವಲ್ ಅನ್ನು ಕಡಿಮೆ ಮಾಡಲು ತುಂಬಾ ಸಹಾಯ ಮಾಡುತ್ತದೆ. ಈ ಕಣ್ಣಿನ ಸಮಸ್ಯೆಗಳು, ಹೃದಯದ ತೊಂದರೆಗಳು ಹಾಗೂ ನರಗಳ ಹಾನಿಯಂತಹ ಮಧುಮೇಹಕ್ಕೆ ಸಂಬಂಧಿತ ತೊಡಕು ತಡೆಯಲು ತುಂಬಾ ಪ್ರಯೋಜನವನ್ನು ನೀಡುತ್ತದೆ. ಆರೋಗ್ಯಕರ ದೇಹದ ತೂಕ ಕಾಪಾಡಿಕೊಳ್ಳುವುದು ಮಧುಮೇಹ ನಿಯಂತ್ರಣಕ್ಕೆ ನಿರ್ಣಾಯಕ ಪಾತ್ರ ವಹಿಸುತ್ತದೆ.

ಗ್ರೀನ್ ಟೀ ಚಯಾಪಚಯ ಕ್ರಿಯೆ ವೃದ್ಧಿಸುವ ಮೂಲಕ ತೂಕ ಇಳಿಕೆಗೆ ಹೆಚ್ಚು ಸಹಾಯ ಮಾಡುತ್ತದೆ. ಮಧುಮೇಹಿಗಳು ಹೃದಯರೋಗದ ಹೆಚ್ಚಿನ ಅಪಾಯ ಎದುರಿಸುತ್ತಾರೆ. ಗ್ರೀನ್ ಟೀ ಸೇವನೆಯು ಕೊಲೆಸ್ಟ್ರಾಲ್ ಮಟ್ಟ ನಿಯಂತ್ರಿಸಲು, ರಕ್ತದೊತ್ತಡ ಸಮತೋಲನದಲ್ಲಿ ಇರಿಸಲು ತುಂಬಾ ಸಹಾಯ ಮಾಡುತ್ತದೆ ಎಂದು ಅಧ್ಯಯನಗಳು ತಿಳಿಸಿವೆ.

ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುವ ಮೂಲಕ ಉತ್ತಮ ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸಲು ತುಂಬಾ ಸಹಾಯ ಮಾಡುತ್ತದೆ. ಹೃದಯರೋಗದ ಅಪಾಯ ಕಡಿಮೆ ಮಾಡುತ್ತದೆ. ಗ್ರೀನ್ ಟೀ ಸೇವನೆಯು ಹೃದಯರೋಗದ ಅಪಾಯ ಶೇ.31ರಷ್ಟು ಕಡಿಮೆ ಮಾಡುತ್ತದೆ. ಮಧುಮೇಹಿಗಳು ಹೃದಯರೋಗದ ಹೆಚ್ಚಿನ ಅಪಾಯ ಎದುರಿಸುತ್ತಾರೆ. ಗ್ರೀನ್ ಟೀ ಸೇವನೆಯು ಕೊಲೆಸ್ಟ್ರಾಲ್ ಮಟ್ಟ ನಿಯಂತ್ರಿಸಲು, ರಕ್ತದೊತ್ತಡ ಸಮತೋಲನದಲ್ಲಿ ಇರಿಸಲು ತುಂಬಾ ಸಹಾಯ ಮಾಡುತ್ತದೆ ಎಂದು ಅಧ್ಯಯನಗಳು ತಿಳಿಸಿವೆ. ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುವ ಮೂಲಕ ಉತ್ತಮ ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸಲು ತುಂಬಾ ಸಹಾಯ ಮಾಡುತ್ತದೆ. ಹೃದಯರೋಗದ ಅಪಾಯ ಕಡಿಮೆ ಮಾಡುತ್ತದೆ.





# ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

**ಯಾರಲ್ಲಿಯೂ ಮೇಲು-ಕೀಳು ಎಂಬ ವ್ಯತ್ಯಾಸ ತೋರದೇ ಎಲ್ಲರನ್ನೂ ಸಮಾನರಾಗಿ ಕಂಡು ಪ್ರೀತಿ ತೋರಬೇಕು. ಭಗವಂತನನ್ನು ಶ್ರದ್ಧೆ ಮತ್ತು ಶ್ರದ್ಧಾಭಕ್ತಿಯಿಂದ ಪೂಜಿಸಬೇಕು. ದಿನದಲ್ಲಿ ಕೆಲಕಾಲವಾದರೂ ಕೆಲವು ಧರ್ಮಗ್ರಂಥಗಳ ಹಾಗೂ ಮಾನವ ಪರಿಶುದ್ಧವಾಗಿ ಪರಿವರ್ತನೆಯಾಗುವ ಗ್ರಂಥಗಳ ಅಧ್ಯಯನದಲ್ಲಿ ತೊಡಗಬೇಕು. ಶುದ್ಧವಾದ ವಿಚಾರಗಳನ್ನು, ಆಲೋಚನೆಗಳನ್ನು ಬೆಳೆಸಿಕೊಳ್ಳಬೇಕು. ವೈಚಾರಿಕ,ವೈಜ್ಞಾನಿಕ ಹಾಗೂ ಸೈದ್ಧಾಂತಿಕ ಗುಣಗಳನ್ನು ಬೆಳೆಸಿಕೊಂಡು ಸತ್ಯವನ್ನು ಅರಿಯಬೇಕು ಹಾಗೂ ದಿನನಿತ್ಯ ಸಾತ್ವಿಕಆಹಾರವನ್ನು ಸೇವಿಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು.ಇತರರ ನಡವಳಿಕೆಯಲ್ಲಿ ತಪ್ಪುಗಳನ್ನು ಹುಡುಕಬಾರದು. ಮೊದಲು ನಮ್ಮಲ್ಲಿರುವ ದೋಷಗಳನ್ನು ತಿದ್ದಿಕೊಳ್ಳಬೇಕು. ಲೋಕದಲ್ಲಿ ಯಾರೂ ಸಹ ಪರಿಪೂರ್ಣರೂ ಇಲ್ಲ,ಪರಿಶುದ್ಧರೂ ಇಲ್ಲ. ದೇವರಿಗೆ ತನ್ನನ್ನು ಪೂರ್ಣವಾಗಿ ಅರ್ಪಣೆ ಮಾಡಿಕೊಳ್ಳುವವನೇ ನಿಜವಾದ ಭಕ್ತ. ಪರೋಪಕಾರ, ಪರಸೇವೆಯ ನಿಜವಾದ ಧಾರ್ಮಿಕತೆ ಎಂದು ಧರ್ಮಬೋಧಕರು ಬೋಧಿಸಿದರು.**

## ಮಾನವನ ಲೆಕ್ಕದಲ್ಲಿ ಮೇಲು-ಕೀಳು ಎಂಬ ಭೇದಭಾವ ಆದರೆ ದೇವರ ಲೆಕ್ಕದಲ್ಲಿ ಎಲ್ಲರೂ ಸಹ ಸರಿಸಮಾನರು

ಮೂರಕ್ಷರ ಇರುವ ಮಾನವ ತನ್ನ ತಪ್ಪುಗಳನ್ನು ಮರೆಮಾಚಲು ಮೂರಕ್ಷರ ಇರುವ ದೇವರನ್ನ ಸದಾ ಪ್ರಶ್ನೆ ಮಾಡುವ ಸ್ಥಿತಿಗೆ ಬಂದು ನಿಂತಿದ್ದಾನೆ.ಅಲ್ಲಿಗೆ ಮಾನವನಲ್ಲಿ ಆ ದೇವರೂ ಸಹ ಯಾವ ಲೆಕ್ಕಕ್ಕೂ ಇಲ್ಲ ಕಾರಣ ದೇವರಿಗೆ ಸಾವಿಲ್ಲ ,ದೇವರಿಗೆ ದೇಹವಿಲ್ಲ, ದೇವರಿಗೆ ವರ್ಣವಿಲ್ಲ ಹಾಗೂ ದೇವರಿಗೆ ರೂಪವಿಲ್ಲ. ದೇವರು ನಿರಾಕಾರ, ಅದೊಂದು ತರಹ ಶಕ್ತಿ, ಪವಾಡ,ವಿಸ್ಮಯ, ಅಗೋಚರ,ಸರ್ವವ್ಯಾಪಿ, ಸರ್ವಶಕ್ತ. ಒಮ್ಮೆ ಕನಕದಾಸರು ಮಾನವ ಜನಾಂಗಕ್ಕೆ ಸಾರಿರುವ ಸಂದೇಶಗಳ ಬಗ್ಗೆ ನಾವುಗಳು ತಿಳಿಯುವುದಾದರೆ; ಕುಲ-ಕುಲವೆಂದು ಹೊಡೆದಾಡುವಿರಿ, ಕುಲದ ನೆಲೆಯನೇನಾದರೂ ಬಲ್ಲಿರಾ? ಎಂದು ಕುಲದಲ್ಲಿ ಮೇಲು-ಕೀಳೆಂಬ ವ್ಯತ್ಯಾಸವನ್ನು ಮಾಡುವ ಸಮಾಜವನ್ನು ಪ್ರಶ್ನಿಸಿದ್ದಾರೆ. ಹಾಗೂ ದಾನ-ಧರ್ಮವಮಾಡಿ ಸುಖಿಯಾಗು ಮನವೇ! ಹೀನ ವೃತ್ತಿಯಲ್ಲಿ ನೀ ಕೆಡಬೇಡ ಮನವೇ! ಎಂದು ಒತ್ತಿ-ಒತ್ತಿ ಸಾರಿದ್ದಾರೆ. ಮಾನವರೆಲ್ಲರೂ ಭಗವಂತನ ಮಕ್ಕಳು. ಮಾನವರು ಪರಸ್ಪರ ಪ್ರೀತಿ,ಸ್ನೇಹ ಭಾವಗಳನ್ನು ಮೈಗೂಡಿಸಿಕೊಂಡು ಬಾಳಬೇಕು. ಸತ್ಯಸಂಧರಾಗಿರಬೇಕು ಜೀವನದಲ್ಲಿ ತೃಪ್ತಿ- ಸಮಾಧಾನಗಳನ್ನು ಹೊಂದಿರಬೇಕು. ವಿಷಯ ಭೋಗಗಳಿಂದ ವಿಮುಖರಾಗಿ ಸಂಯಮವನ್ನು ಪಾಲಿಸಬೇಕು. ಅಹಂಕಾರವೇ ಮಾನವನ ನಾಶಕ್ಕೆ ಕಾರಣವಾದ್ದರಿಂದ ಅದನ್ನ ಸಂಪೂರ್ಣವಾಗಿ ತ್ಯಜಿಸಬೇಕು.ಯಾರು ಯಾರನ್ನೂ ಸಹ ಕಡೆಗಣಿಸಬಾರದು. ಉದಾಹರಣೆಗೆ ಕಬ್ಬಿಣದ ನಾಶಕ್ಕೆ ಅದಕ್ಕೆ ಹಿಡಿಯುವ ತುಕ್ಕೇ ಮೂಲ ಕಾರಣ, ಅದೇ ರೀತಿ ಮನುಷ್ಯನ ನಾಶಕ್ಕೆ ಆತನ ಮನಸ್ಸೇ ಮೂಲ ಕಾರಣ. ನಮ್ಮ ಪವಿತ್ರ ದೇಹದಲ್ಲಿ ಶಾಶ್ವತವಾಗಿ ಮನೆಮಾಡಿಕೊಂಡಿರುವ ಅರಿಷಡ್ವರ್ಗಗಳಾದ ಕಾಮ,ಕ್ರೋಧ,ಲೋಭ, ಮದ,ಮತ್ಸರ ಇವುಗಳ ವಿರುದ್ಧ ಹೋರಾಟ ಮಾಡಿ ಜಯಿಸಬೇಕು. ಅಂದರೆ ಮದ,ಮತ್ಸರ, ಕ್ರೋಧಗಳನ್ನು ಒಳಗೆ ತುಂಬಿಟ್ಟುಕೊಂಡು ಐಹಿಕ ಸುಖಕ್ಕಾಗಿ ಹಾತೊರೆಯುತ್ತಾ ಬಹಿರಂಗದಲ್ಲಿ ವ್ರತ- ನೇಮಗಳನ್ನು ಆಚರಿಸುವ ಡಾಂಬಿಕರನ್ನು ಪುರಂದರದಾಸರು ತೆಗಳಿದ್ದಾರೆ.

ಅಸತ್ಯದಲ್ಲಿ ಆಚರಿಸುವ ಕರ್ಮಗಳೆಲ್ಲಾ ವ್ಯರ್ಥವೆಂದು ಹೇಳಿ ಸತ್ಯವೇ ಸ್ನಾನ, ಉಪವಾಸ,ಜಪ,ತಪ, ನೇಮ ಎಂದು ತಿಳಿಸಿದ್ದಾರೆ. ಆಚಾರವಿಲ್ಲದ ನಾಲಿಗೆಗೆ ತನ್ನ ನೀಚ ಬುದ್ಧಿಯ ಬಿಡುವಂತೆ ಹೇಳಿದ್ದಾರೆ. ಧರ್ಮದ ಸ್ವರೂಪವನ್ನು ತಿಳಿಸುತ್ತಾ ವಿಷವಿಕ್ಕಿದವನಿಗೆ ಷಡ್ರಸವನ್ನುಣಿಸಬೇಕು, ದ್ವೇಷಿಸುವವರನ್ನು ಪೋಷಿಸಬೇಕು, ನಿಂದಕರನ್ನು ವಂದಿಸಬೇಕು. ಕಲ್ಲಾಗಿರಬೇಕು ಕಠಿಣ ಭವತೊರೆಯೊಳಗೆ ಈಸಬೇಕು ಇದ್ದು ಜಯಿಸಬೇಕು, ಇಂಥ ನೂರಾರು ನುಡಿಗಳು ಪುರಂದರದಾಸರು ಜಗತ್ತಿಗೆ ನೀಡಿರುವ ಸಾರ್ವತ್ರಿಕ ಸಂದೇಶಗಳಾಗಿವೆ. ಸರ್ವಜ್ಞನ ಜಾತಿ ಮಾನವ ಜಾತಿ, ಅವನ ಮತ ದೇವ ಮತ, ಅವನ ಕಾಲ ಸರ್ವಕಾಲ ಎಂಬುದು ಸೂಕ್ತವಾಗಿದೆ. ಸರ್ವಜ್ಞ ಜಾತಿ, ಮತ, ವರ್ಗ,ವರ್ಣ,ಭಾಷೆ, ಪ್ರಾಂತ್ಯ ಎಂಬೆಲ್ಲಾ ವ್ಯತ್ಯಾಸಗಳನ್ನು ತೊರೆದು ರಾಗ-ದ್ವೇಷಗಳಿಗೆ ಒಳಗಾಗದೇ ತಾನು ಕಂಡ ಜೀವನ ಸತ್ಯವನ್ನು ನಿರ್ಭಯವಾಗಿ ತಿಳಿಸಿದ್ದಾನೆ.

ಮನುಷ್ಯ ಮೊದಲು ಮಾತನಾಡುವುದನ್ನು ಕಲಿಯಬೇಕು. ನಾವಾಡುವ ಮಾತು ಅನ್ಯರಿಗೆ ನೋವನ್ನುಂಟು ಮಾಡಬಾರದು. ಮಾತುಗಳು ಜೀವವಿರೋಧಿಯಾಗದೇ ಜೀವ ಪರವಾಗಿರಬೇಕು ಎಂಬುದು ಸರ್ವಜ್ಞನ ಆಶಯವಾಗಿದೆ. ಬಡವ-ಬಲ್ಲಿದ, ಮೇಲು-ಕೀಳು,ಕೆಳಜಾತಿ- ಮೇಲ್ಜಾತಿ ಎಂಬ ಭೇದಭಾವ ವಿಂಗಡಣೆಯನ್ನು ಮಾಡಿಕೊಳ್ಳುವವನೇ ಈ ಮಾನವ ಆದರೆ ದೇವರಲ್ಲ. ಮಾನವರಾದ ನಾವುಗಳು ಯಾವುದೇ ವ್ಯತ್ಯಾಸ ಮತ್ತು ಭೇದಭಾವ ಹಾಗೂ ಭಿನ್ನಾಭಿಪ್ರಾಯವಿಲ್ಲದ ರೀತಿ ಹಾಗೂ ಜಾತಿ,ಕುಲ, ಮತ,ಧರ್ಮ ಮೀರಿ ಸಮಾಜದಲ್ಲಿ ಬದುಕುವುದೇ ನಿಜವಾದ ಬದುಕು.

# ನವರಾತ್ರಿ ಮೈಸೂರ ದಸರಾ

**ನವರಾತ್ರಿ
ಮೈಸೂರ ದಸರಾ
ಎಷ್ಟೊಂದು ಸುಂದರ
ನವರಾತ್ರಿ ಉತ್ಸವ
ಹಬ್ಬದ ಸಡಗರ
ಎಲ್ಲೆಲ್ಲೂ ಸಂಭ್ರಮ
ನವ ಅವಾತರಗಳು
ಶೈಲಪುತ್ರಿ ದುರ್ಗೆ
ಬ್ರಹ್ಮಚಾರಿಣಿ ದುರ್ಗೆ
ಚಂದ್ರಘಂಟಾ ದುರ್ಗೆ
ಕೂಷ್ಮಾಂಡದೇವಿ ದುರ್ಗೆ
ಸ್ಕಂದಾ ಮಾತಾ ದುರ್ಗೆ
ಕಾತ್ಯಾಯಿನಿ ದುರ್ಗೆ
ಕಾಳರಾತ್ರಿ ಮಹಾಮಾಯೇ
ಮಹಾ ಗೌರಿ ತಾಯಿ
ಸಿದ್ಧಿಧಾತ್ರಿ ತಾಯಿ
ದೇವಿಯ ಅವತಾರಗಳು
ನವರಾತ್ರಿಯ ದಿನಗಳು
ಆಯುಧ ಪೂಜೆಗಳು
ವಿಜಯದಶಮಿ ಹಬ್ಬದ
ಶುಭಾಶಯಗಳು.**





- ವಿ.ಎಂ.ಎಸ್.
ಗೋಪಿ ಲೇಖಕರು
ಬೆಂಗಳೂರು.

## ಮಕ್ಕಳ ಟಿಫಿನ್ ಬಾಕ್ಸ್‌ಗೆ ಉಬ್ಬು ರೊಟ್ಟಿ ಬೆಸ್ಟ್ ತಿಂಡಿ!

ಕರ್ನಾಟಕದ ಮಲೆನಾಡು ಮತ್ತು ಕೊಡಗು ಪ್ರದೇಶಗಳಲ್ಲಿ ಬೆಳಿಗ್ಗೆ ತಿನ್ನಲು ಉಬ್ಬು ಅಕ್ಕಿ ರೊಟ್ಟಿ ಮಾಡುತ್ತಾರೆ. ಇದನ್ನು ಸಾಮಾನ್ಯ ಅಕ್ಕಿ ರೊಟ್ಟಿಗಿಂತ ಸ್ವಲ್ಪ ಬೇರೆ ರೀತಿಯಲ್ಲಿ ಮಾಡುತ್ತಾರೆ. ಅಕ್ಕಿ ಹಿಟ್ಟನ್ನು ಬಿಸಿ ನೀರಿನಲ್ಲಿ ಕಲಸಿ, ತೆಳುವಾಗಿ ತಟ್ಟಿ ಬೇಯಿಸುತ್ತಾರೆ. ಬೆಂಕಿಯ ಮೇಲೆ ಇಟ್ಟಾಗ ಇದು ಚೆನ್ನಾಗಿ ಉಬ್ಬುವುದರಿಂದ ಇದಕ್ಕೆ 'ಉಬ್ಬು ರೊಟ್ಟಿ' ಎಂದು ಹೆಸರು ಬಂದಿದೆ. ಮಲೆನಾಡಿನ ತಂಪು ಹವಾಮಾನ ಮತ್ತು ಸಾಂಪ್ರದಾಯಿಕ ಅಡುಗೆಗೆ ಇದು ಚೆನ್ನಾಗಿ ಹೊಂದುತ್ತದೆ.ಸಾಮಾನ್ಯ ಅಕ್ಕಿ ರೊಟ್ಟಿಗೆ ಈರುಳ್ಳಿ, ಹಸಿಮೆಣಸು, ಕೊತ್ತಂಬರಿ ಸೊಪ್ಪು ಮತ್ತು ತರಕಾರಿಗಳನ್ನು ಸೇರಿಸಿ ಕೈಯಿಂದ ತಟ್ಟಿ ಮಾಡುತ್ತಾರೆ. ಆದರೆ ಉಬ್ಬು ರೊಟ್ಟಿಗೆ ಬಹುತೇಕ ಅಕ್ಕಿ ಹಿಟ್ಟು, ಉಪ್ಪು ಮತ್ತು ಸ್ವಲ್ಪ ಎಣ್ಣೆ ಮಾತ್ರ ಬೇಕಾಗುತ್ತದೆ. ಹಿಟ್ಟನ್ನು ಬಿಸಿ ನೀರಿನಲ್ಲಿ ಚೆನ್ನಾಗಿ ಕಲಸಿ ಮೃದುವಾಗಿ ಮಾಡಿದರೆ ರೊಟ್ಟಿ ಮೆತ್ತಗೆ ಆಗಿ, ಉಬ್ಬಿ ಬರುತ್ತದೆ.



# ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಮಹಾತ್ಮರ ಅತ್ಯಂತ ಉಪಯುಕ್ತ ಮಹತ್ತರವಾದ ಸಂದೇಶಗಳು

ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ಕೊಡಿಸದಿದ್ದರೆ ಆ ಮಕ್ಕಳನ್ನು ನೀವು ಕಳೆದುಕೊಂಡಂತೆಯೇ!

– ಜಾನ್ ಎಫ್ ಕೆನಡಿ

ಪ್ರೀತಿ ಮಾಡುವವರನ್ನು ಪ್ರೀತಿಸುವುದಕ್ಕಿಂತ, ದ್ವೇಷಿಸುವವರನ್ನು ಪ್ರೀತಿ ಮಾಡುವುದು ದೊಡ್ಡ ಗುಣ.

–ಮಹಾತ್ಮ ಗಾಂಧೀಜಿ

ಬಲವಾದ ನೂರು ಕೈಗಳಿಗಿಂತ, ಚುರುಕಾದ ಒಂದು ಮೆದುಳು ಶ್ರೇಷ್ಠ.

–ಥಾಮಸ್ ಅಲ್ವಾ ಎಡಿಸನ್.

ಪರರನ್ನು ಗೌರವಿಸುವುದನ್ನು ಕಲಿಯದಿದ್ದರೆ ನಾವೆಂದಿಗೂ ದೊಡ್ಡವರಾಗುವುದಿಲ್ಲ.

– ಸರ್ದಾರ್ ವಲ್ಲಭ ಬಾಯ್ ಪಟೇಲ್

ಯಾರೂ ಕೂಡ ಹುಟ್ಟುವಾಗ ನಾಯಕರಾಗುವುದಿಲ್ಲ, ಮುಂದಿನ ಪರಿಸರ, ಪ್ರೋತ್ಸಾಹ, ಉತ್ತೇಜನದ ಮೇಲೆ ನಾಯಕರುಗಳಾಗಿ ಪರಿಣಿಸುತ್ತಾರೆ.

– ಪಂಡಿತ್ ಜವಾಹರ್ ಲಾಲ್ ನೆಹರು.

ಪ್ರತಿಯೊಬ್ಬರ ಜೀವನ ಅಲ್ಪ ಕಾಲದ್ದು, ಅದು ಅರ್ಥಪೂರ್ಣವಾಗುವಂತೆ ಬದುಕಬೇಕು.

– ಡಾಕ್ಟರ್ ವಿಲಿಯಂ ಜಾನ್ಸನ್

ನಿನ್ನವರನ್ನು ಪ್ರೀತಿಸುವಂತೆ, ನೆರೆಹೊರೆಯವರನ್ನು ಪ್ರೀತಿಸು.

– ಏಸುಕ್ರಿಸ್ತ

ಯಾರಿಗೂ ತಿಳಿಯದಂತೆ ಒಳ್ಳೆಯದನ್ನು ಮಾಡು, ಯಾರಿಗಾದರೂ ಹೇಳಿಕೊಂಡರೆ ಅಥವಾ ಗೊತ್ತಾದರೆ ಅದಕ್ಕಾಗಿ ನಾಚಿಕೆ ಪಡು.

–ಅಲೆಕ್ಸಾಂಡರ್ ಪೋಪ್

ಕೆಟ್ಟವರನ್ನು ಹುಡುಕಲು ಹೊರಟೆ, ಯಾರೂ ಸಿಗಲಿಲ್ಲ. ನಂತರ ನನ್ನ ಹೃದಯದಲ್ಲಿ ತಡಕಾಡಿದೆ ಆದರೆ ನನ್ನಂತಹ ಕೆಟ್ಟವನು ಯಾರೂ ಇಲ್ಲ ಎಂದು ಗೊತ್ತಾಯಿತು.

– ಸಂತ ಕಬೀರ

ನೀನು ಕ್ರೈಸ್ತನಾಗಿದ್ದರೆ ಉತ್ತಮ ಕ್ರಿಶ್ಚಿಯನ್ ಆಗು, ನೀನು ಇಸ್ಲಾಂ ಧರ್ಮಕ್ಕೆ ಸೇರಿದವನಾಗಿದ್ದರೆ ಉತ್ತಮ ಮುಸಲ್ಮಾನನಾಗು, ಹಿಂದೂವಾಗಿದ್ದರೆ ಉತ್ತಮ ಹಿಂದುವಾಗು.

– ಸ್ವಾಮಿ ವಿವೇಕಾನಂದ

ನಿಮ್ಮ ಸಮಸ್ಯೆಗೆ ನೀವೇ ಪರಿಹಾರ ಕಂಡುಕೊಳ್ಳಿ, ಅದಕ್ಕಾಗಿ ಬೇರೆಯವರನ್ನ ಅವಲಂಬಿಸಬೇಡಿ. ಕಾರಣ ಸಮಸ್ಯೆ ನಿಮ್ಮದೇ!

– ಭಗವಾನ್ ಬುದ್ಧ

ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಆತನು ಬಳಸುವ ಪದ ಬಳಕೆಯಲ್ಲಿ ಆತನ ವ್ಯಕ್ತಿತ್ವ ಸಂಸ್ಕಾರ, ಸಂಸ್ಕೃತಿ ಏನೆಂಬುದು ಗೊತ್ತಾಗುತ್ತದೆ.

– ಅನಾಮಿಕ

ಒಬ್ಬ ವ್ಯಕ್ತಿ ತಾನು ಬಳಸುವ ಪದ ಬಳಕೆಯಲ್ಲಿ ಇನ್ನೊಬ್ಬರ ನೋವಿಗೆ ಕಾರಣರಾದರೆ ಕೊನೆಗೆ ನೋವು ಕೊಟ್ಟವರೇ ನೋವಿನಿಂದ ನರಳಾಡುತ್ತಾರೆ.

ಒಂದು ವೇಳೆ ಪ್ರತಿರೋಧ ಒಡ್ಡಿದರೆ ಆತನ ಸಮವೇ ಹೋಲಬಲ್ಲರು ಅಲ್ಲಿಗೆ ಇಬ್ಬರೂ ಸಮ. – ಅನಾಮಿಕ

ಇಬ್ಬರನ್ನು ಮನವೊಲಿಸಲು ನನ್ನಿಂದಾಗಲಿಲ್ಲ. (ಪಾಕಿಸ್ತಾನ ಅಧ್ಯಕ್ಷ ಮಹಮ್ಮದ್ ಜಿನ್ನಾ ಮತ್ತು ಮಗ ಹರಿಲಾಲ್ ಗಾಂಧಿ) – ಮಹಾತ್ಮ ಗಾಂಧೀಜಿ

ತನ್ನ ಕರ್ತವ್ಯದಲ್ಲಿ ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರವಾಗಿ ಕಾಣುವುದಿಲ್ಲ. – ಗಾಂಧೀಜಿ

ಸೇಡು ತೀರಿಸಿಕೊಳ್ಳಲು ಇಚ್ಚಿಸುವೆಯಾದರೆ ನಿನ್ನ ಎದುರಾಳಿಯನ್ನ ಅಲಕ್ಷ್ಯ ಮಾಡು ಅದೇ ಅತ್ಯುನ್ನತವಾದ ಮಾರ್ಗ.

– ಜಾರ್ಜ್ ಬರ್ನಾಡ್ ಶಾ

ಬೇರೊಬ್ಬರ ವರ್ತನೆ ಮನಸ್ಸಿಗೆ ನೋವುಂಟು ಮಾಡಿದರೆ ಅದೊಂದು ಕೊಡುಗೆ ಎಂದು ಸ್ವೀಕರಿಸಬೇಕು ಏಕೆಂದರೆ ಆ ನೋವು ನಮಗೆ ಸ್ವಾವಲಂಬನೆಯನ್ನು ಕಲಿಸುತ್ತದೆ.

– ಜಾನ್ ರಸ್ಕಿನ್

ಆಟ ಯಾರು ಆರಂಭಿಸಿದರು ಎಂಬುದು ಮುಖ್ಯ ಅಲ್ಲ, ಆಟವನ್ನು ಯಾರು ಸಮರ್ಥವಾಗಿ ಪೂರ್ಣಗೊಳಿಸಿದರೆಂಬುದೇ ಮುಖ್ಯ.– ಜಾನ್ ಉಡನ್

ಅಧಿಕಾರದ ಅತಿಯಾದ ವ್ಯಾಮೋಹ ಮನುಷ್ಯನನ್ನು ಅತಿಯಾದ ಭ್ರಷ್ಟನನ್ನಾಗಿಸುತ್ತದೆ.

– ಜಾನ್ ಆಕ್ಟನ್

ತಾಳ್ಮೆ ಇರುವ ಅವರಿಗೆ ಮಾತ್ರ, ಅವರು ಯೋಚಿಸಿದ ಕೆಲಸ ಮಾಡಲು ಸಾಧ್ಯ.

– ಬೆಂಜಮಿನ್ ಫ್ರಾಂಕ್ಲಿನ್.

ಭಾರತ ತ್ಯಾಗ ಭೂಮಿ, ಧರ್ಮಭೂಮಿ, ಮಾತೃಭೂಮಿ, ಕರ್ಮ ಭೂಮಿ, ವೀರಭೂಮಿ, ಶಾಂತಿ ಭೂಮಿ, ಪುಣ್ಯಭೂಮಿ, ಯಾಗ ಭೂಮಿ, ಯಜ್ಞ ಭೂಮಿ, ಮೋಕ್ಷ ಭೂಮಿ.

ಅನಾಮಿಕ

ದೇವರು ವರನೂ ಕೊಡಲ್ಲ ಮತ್ತು ಶಾಪವೂ ಕೊಡಲ್ಲ. ಮನೆ ಕುರುಕ್ಷೇತ್ರವಾಗಬಾರದು ಧರ್ಮ ಕ್ಷೇತ್ರವಾಗಬೇಕು.

ಕುವೆಂಪು

ಇಂದು ನಾವು ಪಕ್ಷಿಗಳಂತೆ ಆಕಾಶದಲ್ಲಿ ಹಾರುವುದನ್ನು ಕಲಿತಿದ್ದೇವೆ, ನೀರಿನೊಳಗೆ ಮೀನಿನಂತೆ ಈಜುವುದನ್ನು ಕಲಿತಿದ್ದೇವೆ ಆದರೆ ಮನುಷ್ಯ ಜೀವಿಗಳಾಗಿ ಭೂಮಿಯಲ್ಲಿ ಬದುಕುವುದನ್ನು ಮಾತ್ರ ಕಲಿತಿಲ್ಲ.

ಜಾರ್ಜ್ ಬರ್ನಾಡ್ ಶಾ

ಹೂವು ನುಂಗಿ ಕಾಳು ಕಟ್ಟುವ ಹಂತದಲ್ಲಿ ಹದ ಮಳೆಯೊಂದು ಸುರಿದರೆ ಆಹಾರ ಧಾನ್ಯ ಮತ್ತು ಮೇವು ಕೊರತೆ ಕೊಂಚ ನೀಗುವ ಸಾಧ್ಯತೆ ಇದೆ

# ವರುಣಾಗಮನಕ್ಕೆ ಕಾಯುತ್ತಿದೆ ಹುಲುಸಾದ ರಾಗಿ

**ಉದಯವಾಹಿನಿ, ದಾವಣಗೆರೆ**

ತೀವ್ರ ಮಳೆ ಕೊರತೆಯ ನಡುವೆಯೂ ಹುಲುಸಾಗಿ ಬೆಳೆದಿರುವ ಬರ ನಿರೋಧಕ ಬೆಳೆಯಾದ ರಾಗಿಯು ಕನಿಷ್ಠ ಮಳೆಗಾಗಿ ಕಾಯುತ್ತಿದೆ. ಹೂವು ನುಂಗಿ ಕಾಳು ಕಟ್ಟುವ ಹಂತದಲ್ಲಿ ಹದ ಮಳೆಯೊಂದು ಸುರಿದರೆ ಆಹಾರ ಧಾನ್ಯ ಮತ್ತು ಮೇವು ಕೊರತೆ ಕೊಂಚ ನೀಗುವ ಸಾಧ್ಯತೆ ಇದೆ.

ಪ್ರತಿ ವರ್ಷದ ಮುಂಗಾರು ಹಂಪ್ರತಿ ವರ್ಷದ ಮುಂಗಾರು ಹಂಗಾಮಿಗೆ ಜಿಲ್ಲೆಯಲ್ಲಿ ಸರಾಸರಿ 7,000 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆ ಆಗುತ್ತಿತ್ತು. ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿಯದಿರುವುದರಿಂದ ಬರ ನಿರೋಧಕ ಬೆಳೆಗಳ ಬಿತ್ತನೆಗೆ ಕೃಷಿ ಇಲಾಖೆ ಸಲಹೆ ನೀಡಿತ್ತು, ಭತ್ತ ಹಾಗೂ ಮೆಕ್ಕೆಜೋಳಕ್ಕೆ ಪರ್ಯಾಯವಾಗಿ ರೈತರು 37, XXl ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆ ಮಾಡಿದ್ದಾರೆ.

1.ತೇವಾಂಶ ಆಧರಿಸಿ ಬಿತ್ತನೆ ನಿರ್ಧರಿಸಿ
2.ನಾಲೆಗಳಿಗೆ ನೀರು ಹರಿಯುವುದಿಲ್ಲ
3. ವರುಣ ಅವಕೃಪೆ ಅರಿತ ರೈತರು

ಜೂನ್ ಮತ್ತು ಜುಲೈ ತಿಂಗಳಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ನಡೆಯುತ್ತದೆ. ಸಕಾಲಕ್ಕೆ ಮಳೆ ಸುರಿಯದಿರುವ ಕಾರಣಕ್ಕೆ ಬಿತ್ತನೆಗೂ ಹಿನ್ನಡೆ ಉಂಟಾಯಿತು. ಬರ ಪರಿಸ್ಥಿತಿ ತಲೆದೋರುವ ಸಾಧ್ಯತೆ ಇರುವುದರಿಂದ ಅರೆ ನೀರಾವರಿ ಹಾಗೂ ಅಲ್ಪಾವಧಿ ಬೆಳೆಗಳನ್ನು ಬೆಳೆಯುವಂತೆ ಕೃಷಿ ಇಲಾಖೆ ಸಲಹೆ ನೀಡಿತ್ತು. 20 ರೈತ ಸಂಪರ್ಕ ಕೇಂದ್ರಗಳ ವ್ಯಾಪ್ತಿಯಲ್ಲಿ ಈ ಕುರಿತ ಪ್ರಚಾರ ಆಂದೋಲನವನ್ನು ಕೈಗೊಂಡಿತ್ತು, ವರುಣನ ಅವಕೃಪೆಯನ್ನು ಅರಿತ ರೈತರು, ಕೃಷಿ ಅಧಿಕಾರಿಗಳ ಸಲಹೆಗಳನ್ನು ಸ್ವೀಕರಿಸಿದ್ದರು.

ಬರ ನಿರೋಧಕ ಬೆಳೆಗಳಿಗೂ ಹೂವು ಮತ್ತು ಕಾಳುಕಟ್ಟುವ ಹಂತದಲ್ಲಿ ಮಳೆ ಅಗತ್ಯ, ಹುಲುಸಾಗಿ ಬೆಳೆದ ರಾಗಿ ತೆನೆಯಾಗಿದ್ದು, ಕಾಳು ಕಟ್ಟುತ್ತಿದೆ. ಈ ಹಂತದಲ್ಲಿ ಮಳೆಯಾದರೆ ರಾಗಿಯ ಉತ್ತಮ ಇಳುವರಿ ಬರಲಿದೆ.



ಉದಯವಾಹಿನಿ ಚಿತ್ರ

### ಇಳುವರಿ ಸಿಗುವ ನಿರೀಕ್ಷೆ

**ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬಿಜ ರಸಗೊಬ್ಬರ ದಾಸ್ತಾನು ಇದೆ. ಸಪ್ಟೆಂಬರ್ ಅಂತ್ಯಕ್ಕೆ ಮಳೆಯಾಗಿದ್ದರೆ ಅಕ್ಟೋಬರ್ ಮೊದಲ ವಾರದಲ್ಲಿ ಬಿತ್ತನೆ ನಡೆಯುತ್ತಿತ್ತು' ಎಂದು ವಿವರಿಸಿದರು.ಕೃಷಿ ಇಲಾಖೆಯ ಸಲಹೆ ಮೇರೆಗೆ ಮೂರುವರೆ ಎಕರೆಯಲ್ಲಿ ರಾಗಿ ಬಿತ್ತನೆ ಮಾಡಿದ್ದೇನೆ. ಕಾಳು ಕಟ್ಟುವ ಹಂತದಲ್ಲಿ ಹದ ಮಳೆ ಸುರಿದರೆ ಉತ್ತಮ ಇಳುವರಿ ಸಿಗುವ ನಿರೀಕ್ಷೆ ಇದೆ.**

**ಹಲವು ದಿನ ಒಣ ಹವೆ ಇದ್ದ ಕಾರಣಕ್ಕೆ ರಾಗಿ ಕೂಡ ಒಣಗಿದಂತೆ ಕಾಣುತ್ತಿತ್ತು. ಅ.16ರಿಂದ ಉತ್ತಮ ಹಿಂಗಾರಿನ ಮುನ್ಸೂಚನೆ ಇದೆ. ಸಣ್ಣ ಮಳೆ ಸುರಿದರೂ ರಾಗಿ ಕೈಸೇರುವುದು ಖಚಿತ.**
– ಜಿಯಾವುಲ್ಲಾ ಕೆ., ಜಂಟಿ ನಿರ್ದೇಶಕ

---

**ಕೃಷಿ ಇಲಾಖೆಯ ಸಲಹೆ ಮೇರೆಗೆ ಮೂರುವರೆ ಎಕರೆಯಲ್ಲಿ ರಾಗಿ ಬಿತ್ತನೆ ಮಾಡಿದ್ದೇನೆ. ಕಾಳು ಕಟ್ಟುವ ಹಂತದಲ್ಲಿ ಹದ ಮಳೆ ಸುರಿದರೆ ಉತ್ತಮ ಇಳುವರಿ ಸಿಗುವ ನಿರೀಕ್ಷೆ ಇದೆ.**
– ಶಿವಾನಂದ, ರೈತ

ರಾಗಿ ಬೆಳೆ ಉಳಿಸಿಕೊಳ್ಳಲು ರೈತರು ಕೊಳವೆಬಾವಿ ನೀರು ಹರಿಸುತ್ತಿದ್ದಾರೆ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ

ಉತ್ತಮವಾಗಿ ಬೆಳೆದ ರಾಗಿ ಪ್ರತಿ ಎಕರೆಗೆ ಸರಾಸರಿ 10 ಕ್ವಿಂಟಲ್ ಇಳುವರಿ ನೀಡುತ್ತದೆ. ಪ್ರತಿ ಕ್ವಿಂಟಲ್ ರಾಗಿಗೆ 73,500000 5,9000 do do dd ನಿಗದಿಪಡಿಸಲಾಗಿದೆ. ಪ್ರತಿ ಎಕರೆಗೆ 10,000 ಮೌಲ್ಯದ ಮೇವು ಕೂಡ ಲಭ್ಯವಾಗುತ್ತದೆ 25,200

ಹಿಂಗಾರು ಹಂಗಾಮಿನ ಬಿತ್ತನೆಗೆ ಮುಂದಾಗಿರುವ ರೈತರು ಭೂಮಿಯ ತೇವಾಂಶ ಹಾಗೂ ಮಳೆ ಆಧರಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ ಎಂದು ಕೃಷಿ ಸಲಾಖೆಯ ಜಂಟಿ ನಿರ್ದೇಶಕ ಜಿಯಾವುಲ್ಲಾ ಕೆ. ಸಲಹೆ ನೀಡಿದರು. 'ಜಿಲ್ಲೆಯಲ್ಲಿ 20,000 ಹೆಕ್ಟೇರ್ ಪ್ರದೇಶದಲ್ಲಿ ಹಿಂಗಾರು ಬಿತ್ತನೆ ನಿರೀಕ್ಷೆ ಇದೆ. ನ್ಯಾಮತಿ ಹಾಗೂ ಜಗಳೂರು ತಾಲ್ಲೂಕಿನ ರೈತರು ಕಡಲೆ ಹಾಗೂ ಜೋಳ ಬಿತ್ತನೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ.

## 1 ವರ್ಷ ಗ್ಯಾರಂಟಿ ಯೋಜನೆ ನಿಲ್ಲಿಸಿ, ಹಣವನ್ನು ರೈತರಿಗೆ ನೀಡಿ

**ಉದಯವಾಹಿನಿ, ಹುಬ್ಬಳ್ಳಿ**

ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದ್ದು, ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಒಂದು ವರ್ಷದ ಅವಧಿಗೆ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸಿ, ಆ ಹಣವನ್ನು ಸಂಕಷ್ಟದಲ್ಲಿರುವ ರೈತರಿಗೆ ವರ್ಗಾಯಿಸಬೇಕು ಎಂದು ಶಿರಹಟ್ಟಿ ಫಕೀರೇಶ್ವರ ಮಠದ ದಿಂಗಾಲೇಶ್ವರ ಸ್ವಾಮೀಜಿಗಳು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ಹೆಚ್ಚಿಸುವಂತೆ ಆಗ್ರಹಿಸಿ ನಡೆಯುತ್ತಿರುವ ಹೋರಾಟಕ್ಕೆ ವಿವಿಧ ಧರ್ಮಗಳ ಧಾರ್ಮಿಕ ಮುಖಂಡರು ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು. ಇದೇ ವೇಳೆ ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ್ ಜೋಶಿ ವಿರುದ್ಧ ವಾಗ್ದಾಳಿ ನಡೆಸಿದ ಶ್ರೀಗಳು, ಸಭೆಗಾಗಿ ರೈತ ಮುಖಂಡರನ್ನು ದೆಹಲಿಗೆ ಕರೆಸಿಕೊಂಡು, ಅವರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸದೆ ಅವಮಾನಿಸಿದ್ದಾರೆ ಎಂದು ಆರೋಪಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ರೈತರ ಸಮಸ್ಯೆಗಳ ಬಗ್ಗೆ ಮೌನ ವಹಿಸಿದ್ದು, ಅವುಗಳನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಟೀಕಿಸಿದರು. ಬಳಿಕ ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಪರಿಶೀಲಿಸಲು ತಜ್ಞರ ಸಮಿತಿ ರಚಿಸುವ ಪ್ರಸ್ತಾವನೆಗೂ ಆಕ್ಷೇಪ ವ್ಯಕ್ತಪಡಿಸಿದ ಅವರು, ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನೇ ಇನ್ನೂ ಜಾರಿಗೆ ತಂದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

## ಯಲಬುರ್ಗಾ ಆಂಬುಲೆನ್ಸ್‌ನಲ್ಲಿ ಮಹಿಳೆಗೆ ಹೆರಿಗೆ

**ಉದಯವಾಹಿನಿ, ಯಲಬುರ್ಗಾ**

ಹೆರಿಗೆ ನೋವಿನಿಂದ ಬಳಲುತ್ತಿದ್ದ ಮಹಿಳೆಯೊಬ್ಬರನ್ನು 108 ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿಯೇ ಗಂಡು ಮಗುವಿಗೆ ಜನ್ಮ ನೀಡಿದ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ತಾಲ್ಲೂಕಿನ ಮಲಕಸಮುದ್ರ ಗ್ರಾಮದ ಮಲ್ಲವ್ವ ಗಂಡ ಭೀಮಪ್ಪ ಅವರಿಗೆ ಹೆರಿಗೆ ನೋವು ಕಾಣಿಸಿಕೊಂಡಿದ್ದು, ತಕ್ಷಣ ಕುಟುಂಬದವರು ತಾಲ್ಲೂಕ ಪಟ್ಟಣ ಆಸ್ಪತ್ರೆಗೆ ಬಂದರು ನಂತರ ಬಿಪಿ 180/100 ಇದ್ದುದರಿಂದ ಕುಟುಂಬದವರು ತುಂಬಾ ಆತಂಕಕ್ಕೆ ಒಳಗಾಗಿದ್ದರು ಯಾವುದೇ ತೊಂದರೆ ಆಗದೆ ಅಂಬುಲೆನ್ಸ್ ನಲ್ಲಿ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ತೆರಳುವ ಮಾರ್ಗದ ದದೇಗಲ್ಲ ಮಧ್ಯೆ ಹೋಗುವ ಸಮಯದಲ್ಲಿ ಹೆರಿಗೆ ನೋವು ತೀವ್ರವಾಗಿ ಕಾಣಿಸಿಕೊಂಡಿದೆ. ಅಂಬುಲೆನ್ಸ್ ಸಿಬ್ಬಂದಿ ಇ ಎಂ ಟಿ ಶಿವರಾಜ ಛಲವಾದಿ ಅವರು ಸುರಕ್ಷಿತವಾಗಿ ಹೆರಿಗೆ ಮಾಡಿಸಿದ್ದಾರೆ. ಚಾಲಕ ಪೈಲೆಟ್ ಸಂಗಪ್ಪ ಕಾರ್ಯಕ್ಕೆ ಕುಟುಂಬದವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಉದಯವಾಹಿನಿ ಚಿತ್ರ

## ಹೆದ್ದಾರಿ ತಡೆ ಕೈಬಿಟ್ಟು, ಸಚಿವ ಪ್ರಹ್ಲಾದ್ ಜೋಶಿ ನಿವಾಸದತ್ತ ಹೆಜ್ಜೆ ಹಾಕಿದ ರೈತರು

**ಉದಯವಾಹಿನಿ, ಹುಬ್ಬಳ್ಳಿ**

ಉತ್ತರ ಕರ್ನಾಟಕದಲ್ಲಿ ಕಳೆದ ಎರಡು ದಿನಗಳಿಂದ ತೀವ್ರಗೊಂಡಿದ್ದ ಕಬ್ಬು ಬೆಳೆಗಾರರ ಹೋರಾಟ ಈಗ ಹೊಸ ತಿರುವು ಪಡೆದುಕೊಂಡಿದೆ. ಹುಬ್ಬಳ್ಳಿ–ಬೆಳಗಾವಿ ಹೆದ್ದಾರಿ ತಡೆದು ಪ್ರತಿಭಟಿಸುತ್ತಿದ್ದ ರೈತರು, ಈಗ ಹೆದ್ದಾರಿ ತಡೆಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿದ್ದಾರೆ. ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ಆಗುತ್ತಿರುವ ತೊಂದರೆಯನ್ನು ಮನಗಂಡು ಈ ನಿರ್ಧಾರ ಕೈಗೊಂಡಿರುವ ರೈತರು, ತಮ್ಮ ಹೋರಾಟದ ಮುಂದಿನ ಭಾಗವಾಗಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಹುಬ್ಬಳ್ಳಿ ನಿವಾಸಕ್ಕೆ ಮುತ್ತಿಗೆ ಹಾಕಲು ಬೃಹತ್ ಪಾದಯಾತ್ರೆ ಆರಂಭಿಸಿದ್ದಾರೆ. ಇದೇ ವೇಳೆ ತಮ್ಮ ಬೇಡಿಕೆ ಈಡೇರಿಸದಿದ್ದರೆ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅಧಿಕಾರಿಗಳಿಗೆ ನೀಡಿದ್ದ ಐದು ಗಂಟೆಗಳ ಗಡುವು ಮುಗಿದರೂ ಯಾವುದೇ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ಹೆದ್ದಾರಿಗಳಿಂದ ಪ್ರತಿಭಟನೆಯನ್ನು ಕೇಂದ್ರ ಸಚಿವರ ನಿವಾಸದತ್ತ ಸ್ಥಳಾಂತರಿಸಲು ರೈತರು ನಿರ್ಧರಿಸಿದ್ದಾರೆ.



ಉದಯವಾಹಿನಿ ಚಿತ್ರ

ಧಾರವಾಡದಲ್ಲಿ ಕಳೆದ 32 ಗಂಟೆಗಳಿಂದ ಹುಬ್ಬಳ್ಳಿ–ಬೆಳಗಾವಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಸುತ್ತಿದ್ದ ರೈತರೂ ರಸ್ತೆ ತಡೆಯನ್ನು ಅಂತ್ಯಗೊಳಿಸಿದ್ದಾರೆ. ವಿವಿಧ ಪ್ರದೇಶಗಳ ರೈತರು ಸ್ಥಳಕ್ಕೆ ತಲುಪುವವರೆಗೆ ರಸ್ತೆ ಬದಿಯ ಟೆಂಟ್‌ನಲ್ಲಿ ಹೋರಾಟ ಮುಂದುವರಿಸಲು ನಿರ್ಧರಿಸಿದ್ದಾರೆ. ಒಂದೆರಡು ದಿನಗಳಲ್ಲಿ ಇತರ ರೈತರು ಬಂದ ಬಳಿಕ ಪಾದಯಾತ್ರೆಯಲ್ಲಿ ಸೇರಿಕೊಂಡು ಪ್ರಹ್ಲಾದ್ ಜೋಶಿ ಅವರ ನಿವಾಸದತ್ತ ತೆರಳಲಿದ್ದಾರೆ.

ಸಾಮಾನ್ಯ ಜನರಿಗೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಹೆದ್ದಾರಿ ತಡೆ ಹೋರಾಟವನ್ನು ಹಿಂಪಡೆಯಲಾಗಿದೆ ಎಂದು ರೈತ ಮುಖಂಡರು ತಿಳಿಸಿದ್ದಾರೆ.

## ಸರ್ಕಾರದ ಧೋರಣೆ ಖಂಡಿಸಿ ಎಸ್ ಯುಸಿಐನಿಂದ ನಗರದಲ್ಲಿ ಪ್ರತಿಭಟನೆ

**ಉದಯವಾಹಿನಿ, ಬಳ್ಳಾರಿ**

ಎಸ್.ಐ.ಆರ್ ರದ್ದತಿಗಾಗಿ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ನಡೆಸುತ್ತಿರವ ಹೋರಾಟವನನ್ನು ಹತ್ತಿಕ್ಕುವ ಕೇಂದ್ರದ ಬಿಜೆಪಿ ಸರ್ಕಾರದ ಧೋರಣೆ ಇಂದು ನಗರದ ಡಿಸಿ ಕಚೇರಿ ಮುಂದೆ . ಎಸ್. ಯು.ಸಿ.ಐ(ಸಿ) ಕಮ್ಯುನಿಸ್ಟ್ ಪಕ್ಷದಿಂದ ಪ್ರತಿಭಟನಾ ಧರಣಿ ನಡೆಸಲಾಯ್ತು.

ನಗರದ ಗಾಂಧಿಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ಮಾಡಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಎಸ್.ಯು.ಸಿ.ಐನ ಡಾ. ಪ್ರಮೋದ್. ಎನ್, "ದೇಶಾದ್ಯಂತ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಹೆಸರಿನಲ್ಲಿ 13 ಕೋಟಿಗೂ ಅಧಿಕ ಮತದಾರರ ಹೆಸರುಗಳನ್ನು ಮತ ಪಟ್ಟಿಯಿಂದ ಅಳಿಸಲಾಗಿದೆ. ಎಲ್ಲಾ ಪ್ರಮುಖ ವಿಷಯಗಳಲ್ಲಿ ಮುಖ್ಯ ಚುನಾವಣಾ ಆಯುಕ್ತರು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡಿದ್ದಾರೆ.ಎಸ್. ಐ. ಆರ್ ನಿಂದ ಬಿಜೆಪಿ ಪಕ್ಷಕ್ಕೆ ಉಪಯೋಗವಾಗದೆ ಇನ್ನಾರಿಗೆ ಉಪಯೋಗವಾಗಲು ಸಾಧ್ಯ ಎಂದು ಪ್ರಶ್ನಿಸಿದರು.

ಜಿಲ್ಲಾ ಸಮಿತಿ ಸದಸ್ಯೆ ಡಿ. ನಾಗಲಕ್ಷ್ಮಿ. ಬಿಜಾಪುರದಲ್ಲಿ 8 ಜನರ ಸುಳ್ಳು ಮರಣ ಪ್ರಮಾಣ ಪತ್ರ ನೀಡಿ, ಅವರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗಿದೆ. ಇದರ ಬಗ್ಗೆ ಈಗ ವಿಚಾರಣೆ ನಡೆಸಲಾಗುತ್ತಿದೆ. ಆಳಂದದಲ್ಲಿ 6018 ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯಲು ಫಾರ್ಮ್ 7 ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಪರೀಶಿಲನೆ ನಂತರ ಕೇವಲ 24 ಜನರು ಮಾತ್ರ ಅನರ್ಹ ಅಂತ ಸಾಬೀತಾಯಿತು. ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಅರ್ಹ ಮತದಾರರನ್ನು ಹೊರಗಿಟ್ಟು ಚುನಾವಣೆ ನಡೆಸಲಾಗಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಟ್ರಿಬುನಲ್ ರಚಿಸಿದ್ದು, ಕಳೆದ 6 ತಿಂಗಳಲ್ಲಿ 1 ಲಕ್ಷ ಮತದಾರರ ನೈಜತೆಯನ್ನು ಅದು ಪರಿಶೀಲಿಸಿತು.




ಉದಯವಾಹಿನಿ ಚಿತ್ರ

### ದೊಡ್ಡ ಷಡ್ಯಂತ್ರ ಇಡೀ ದೇಶಾದ್ಯಂತ ನಡೆಯುತ್ತಿದೆ

**1 ಲಕ್ಷದಲ್ಲಿ 93,000 ಅರ್ಹ ಮತದಾರರೆಂದು ಸಾಬೀತಾಯಿತು. ಅರ್ಹ ಮತದಾರರನ್ನು ಅನರ್ಹ ಮಾಡುವ ದೊಡ್ಡ ಷಡ್ಯಂತ್ರ ಇಡೀ ದೇಶಾದ್ಯಂತ ನಡೆಯುತ್ತಿದೆ. ಬಿಜೆಪಿ ಪಕ್ಷದ ವಿರೋಧಿ ಮತಗಳನ್ನ ಕೊನೆಗಾಣಿಸುವುದೇ ಎಸ್. ಐ. ಆರ್ ನ ಉದ್ದೇಶವಾಗಿದೆ ಎಂದು ಆರೋಪಿಸಿದರು.**

## ಹಾಸನಾಂಬೆ ಹೂವಿನ ಅಲಂಕಾರಕ್ಕೆ 90 ಲಕ್ಷ; ವೆಚ್ಚ ಕೇಳಿ ಬೆಚ್ಚಿ ಬಿದ್ದ HD ರೇವಣ್ಣ!

**ಉದಯವಾಹಿನಿ, ಹಾಸನ**

ಶಾಂತಿಗ್ರಾಮ ಮತ್ತು ಸುತ್ತಲಿನ ಪ್ರದೇಶಗಳ ಕೆರೆಗಳಿಗೆ ನೀರು ತುಂಬಿಸುವ ಉದ್ದೇಶದಿಂದ ಕೈಗೆತ್ತಿಕೊಂಡಿರುವ ನೀರಾವರಿ ಯೋಜನೆಗಳು 8 ವರ್ಷಗಳಾದರೂ ಪೂರ್ಣಗೊಂಡಿಲ್ಲ ಎಂದು ಶಾಸಕ ಎಚ್.ಡಿ. ರೇವಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಲವು ವರ್ಷಗಳಾದರೂ, ರೈತರಿಗೆ ನಿರೀಕ್ಷಿತ ಪ್ರಯೋಜನ ದೊರೆಯುತ್ತಿಲ್ಲ. ಯೋಜನೆಯಡಿ ಮೂಲಸೌಕರ್ಯ ಸಿದ್ಧವಾಗಿದ್ದರೂ, ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯವಿರುವ 1.06 ಕೋಟಿ ಪಾವತಿಸದೇ ಇರುವುದರಿಂದ ನೀರು ಹರಿಸಲು ಸಾಧ್ಯವಾಗುತ್ತಿಲ್ಲ. ಕೂಡಲೇ ಹಣ ಬಿಡುಗಡೆ ಮಾಡಿ ಕೆರೆಗಳಿಗೆ ನೀರು ಹರಿಸಬೇಕು' ಎಂದು ಆಗ್ರಹಿಸಿದರು.



ಉದಯವಾಹಿನಿ ಚಿತ್ರ

ಶಾಂತಿಗ್ರಾಮ ಮತ್ತು ಸುತ್ತಲಿನ ಪ್ರದೇಶಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಸುಮಾರು 370 ಕೋಟಿ ವೆಚ್ಚದ ಪ್ರಸ್ತಾವ ಹಾಗೂ ಕಾಮಗಾರಿಗಳು ಇವೆ. ಯೋಜನೆಯ ಮೊದಲ ಹಂತದಲ್ಲಿ 160 ಕೆರೆಗಳು ಮತ್ತು 10 ಕಟ್ಟೆಗಳಿಗೆ ನೀರು ತುಂಬಿಸುವ ಗುರಿ ಹೊಂದಲಾಗಿತ್ತು. ಎರಡನೇ ಹಂತದಲ್ಲಿಯೂ ಹೆಚ್ಚುವರಿ ಕೆರೆಗಳಿಗೆ ನೀರು ಒದಗಿಸುವ ಉದ್ದೇಶವಿದೆ. ಆದರೆ, ಕಾಮಗಾರಿ ಪೂರ್ಣಗೊಂಡಿದ್ದರೂ ಹಲವು ವರ್ಷಗಳಿಂದ ಯೋಜನೆಯ ಸಂಪೂರ್ಣ ಪ್ರಯೋಜನ ರೈತರಿಗೆ ದೊರೆಯುತ್ತಿಲ್ಲ ಎಂದು ಹೇಳಿದರು.

ಎರಡು ವರ್ಷಗಳಿಂದ ಈ ವಿಚಾರವಾಗಿ ನಿರಂತರವಾಗಿ ಕಚೇರಿಗಳಿಗೆ ಅಲೆದಾಡಿ, ಕಾಮಗಾರಿ ಪೂರ್ಣಗೊಳಿಸಲು ಪ್ರಯತ್ನಿಸಿದ್ದೇನೆ. ಇದೀಗ ಯೋಜನೆ ಕಾರ್ಯಾರಂಭಕ್ಕೆ ಸಿದ್ಧವಾಗಿದ್ದರೂ, ಹಣ ಪಾವತಿಯ ವಿಳಂಬದಿಂದ ರೈತರಿಗೆ ನೀರು ಸಿಗದಂತಾಗಿದೆ. ಈ ಸಂಬಂಧ ಮತ್ತೊಮ್ಮೆ ಪತ್ರ ಬರೆಯುತ್ತಿದ್ದು, ಒಂದು ವಾರದೊಳಗೆ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಲಾಗುವುದು ಎಂದು ಹೇಳಿದರು.

'ನಮ್ಮ ಅಂಗನವಾಡಿ–ನಮ್ಮ ಜವಾಬ್ದಾರಿ' ಎಂಬ ಆಶಯವು ಪ್ರತಿಯೊಬ್ಬರಲ್ಲೂ ಸಾಮಾಜಿಕ ಹೊಣೆಗಾರಿಕೆಯ ಅರಿವು ಮೂಡಿಸಬೇಕು

# ಅಪೌಷ್ಟಿಕತೆ ಮುಕ್ತ ಸಮಾಜ ನಿರ್ಮಾಣಕ್ಕೆ ಜನಸಹಭಾಗಿತ್ವ ಅಗತ್ಯ

**ಉದಯವಾಹಿನಿ, ಕಲಬುರಗಿ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಐಪಿಇ ಗ್ಲೋಬಲ್ ಸಂಸ್ಥೆಯ ಸಹಯೋಗದಲ್ಲಿ 9ನೇ ರಾಷ್ಟ್ರೀಯ ಪೋಷಣ್ ಮಾಸಾಚರಣೆಯ ಅಂಗವಾಗಿ "ನಮ್ಮ ಅಂಗನವಾಡಿ–ನಮ್ಮ ಜವಾಬ್ದಾರಿ" ಅಭಿಯಾನದಡಿ ಪೌಷ್ಟಿಕತೆ ಮತ್ತು ಆರೋಗ್ಯದ ಕುರಿತು ಜನಜಾಗೃತಿ ಮೂಡಿಸಲು ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ 'ಪೋಷಣ್ ರನ್' ಕಾರ್ಯಕ್ರಮ ಆಯೋಜಿಸಲಾಯಿತು.

ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರು ಚಾಲನೆ ನೀಡಿ ಮಾತನಾಡಿ, ಅವರು "ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿದಾಗ ಮಾತ್ರ ಅವುಗಳ ಉದ್ದೇಶ ಸಾರ್ಥಕವಾಗುತ್ತದೆ.

'ನಮ್ಮ ಅಂಗನವಾಡಿ–ನಮ್ಮ ಜವಾಬ್ದಾರಿ' ಎಂಬ ಆಶಯವು ಪ್ರತಿಯೊಬ್ಬರಲ್ಲೂ ಸಾಮಾಜಿಕ ಹೊಣೆಗಾರಿಕೆಯ ಅರಿವು ಮೂಡಿಸಬೇಕು. ಅಂಗನವಾಡಿಗಳು ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಭದ್ರ ಬುನಾದಿಯಾಗಿದ್ದು, ಅವುಗಳ ಅಭಿವೃದ್ಧಿ ಮತ್ತು ಸೇವೆಗಳ ಸದ್ಬಳಕೆಗೆ ಸಮುದಾಯದ ಸಕ್ರಿಯ ಸಹಕಾರ ಅಗತ್ಯ. ಪ್ರತಿಯೊಂದು ಮಗುವಿಗೂ ಪೌಷ್ಟಿಕ ಆಹಾರ, ಉತ್ತಮ ಆರೋಗ್ಯ ಮತ್ತು ಸಮರ್ಪಕ ಆರೈಕೆ ದೊರೆತಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಿಸಲು ಸಾಧ್ಯ" ಎಂದು ತಿಳಿಸಿದರು.

ಪೋಷಣ್ ಅಭಿಯಾನದ ಉದ್ದೇಶವನ್ನು ವಿವರಿಸಿದ ಅವರು, "ಅಪೌಷ್ಟಿಕತೆ ಮುಕ್ತ ಸಮಾಜ ನಿರ್ಮಾಣವು ಕೇವಲ ಸರ್ಕಾರದ ಕಾರ್ಯಕ್ರಮಗಳಿಂದ ಸಾಧ್ಯವಿಲ್ಲ; ಅದಕ್ಕೆ ಜನರ ಸಹಭಾಗಿತ್ವವೂ ಮುಖ್ಯ. ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವುದು, ಸಮತೋಲಿತ ಆಹಾರ ಸೇವನೆ, ವೈಯಕ್ತಿಕ ಸ್ವಚ್ಛತೆ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಕುರಿತು ಪ್ರತಿಯೊಂದು ಕುಟುಂಬದಲ್ಲೂ ಜಾಗೃತಿ ಮೂಡಿಸಬೇಕು. ಪೌಷ್ಟಿಕತೆಯ ಅರಿವು ಜನಾಂದೋಲನವಾಗಿ ರೂಪುಗೊಂಡಾಗ ಮಾತ್ರ ಆರೋಗ್ಯವಂತ ಪೀಳಿಗೆಯನ್ನು ನಿರ್ಮಿಸಲು ಸಾಧ್ಯ" ಎಂದು ಹೇಳಿದರು.

1.ಅಪೌಷ್ಟಿಕತೆ ಮುಕ್ತ ಸಮಾಜ ನಿರ್ಮಾಣ
2.ಪೌಷ್ಟಿಕತೆ ಆರೋಗ್ಯದ ಕುರಿತು ಜನಜಾಗೃತಿ
3.ನಮ್ಮ ಅಂಗನವಾಡಿ–ನಮ್ಮ ಜವಾಬ್ದಾರಿ



ಉದಯವಾಹಿನಿ ಚಿತ್ರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ್ ಅವರು ಮಾತನಾಡಿ, "ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆ, ಅಪೌಷ್ಟಿಕತೆಯ ನಿವಾರಣೆ ಹಾಗೂ ಪೌಷ್ಟಿಕ ಆಹಾರದ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸುವುದು ಪೋಷಣ್ ಮಾಸಾಚರಣೆಯ ಪ್ರಮುಖ ಉದ್ದೇಶವಾಗಿದೆ.

ಕಾರ್ಯಕ್ರಮದ ಅಂಗವಾಗಿ ಪೌಷ್ಟಿಕತೆಯ ಮಹತ್ವ ಸಾರುವ ಉದ್ದೇಶದಿಂದ ಓಟದ ಸ್ಪರ್ಧೆ ಯಲ್ಲಿ ಹಿರಿಯ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು, ಆಶಾ ಕಾರ್ಯಕರ್ತೆಯರಿಗೆ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿಜೇತರಿಗೆ ಅಭಿನಂದನಾ ಪ್ರಮಾಣಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶರಣಪ್ಪ ಅವರು 'ಪೋಷಣ್ ರನ್' ಕಾರ್ಯಕ್ರಮದ ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ನಿರೂಪಣಾಧಿಕಾರಿ ಮುರುಗೇಶ ಗುಣಾರಿ, ಆಯುಷ್ ಇಲಾಖೆಯ ಅಧಿಕಾರಿ ರವೀಂದ್ರ ಸಿ. ಹೂಗಾರ್, ಐಪಿಇ ಗ್ಲೋಬಲ್ ಸಂಸ್ಥೆಯ ರಾಜ್ಯ ವ್ಯವಸ್ಥಾಪಕ ಆಡಿವಪ್ಪ ಗೌಡ ಹಾದಿಮನಿ, ಜಿಲ್ಲಾ ಬೆಂಬಲ ವ್ಯವಸ್ಥಾಪಕ ಯಲ್ಲಪ್ಪ ಕುಂಚಾವರ, ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮೇಲ್ವಿಚಾರಕಿಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ತಾಯಿಯ ಆರೋಗ್ಯದಿಂದಲೇ ಮಗುವಿನ ಆರೋಗ್ಯಕರ ಬೆಳವಣಿಗೆಗೆ ಭದ್ರ ಬುನಾದಿ ನಿರ್ಮಾಣವಾಗುತ್ತದೆ. ಹೀಗಾಗಿ ಗರ್ಭಾವಸ್ಥೆಯಿಂದಲೇ ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ ಮತ್ತು ಸೂಕ್ತ ಆರೈಕೆಗೆ ಆದ್ಯತೆ ನೀಡಬೇಕು.**
– ರಾಯಪ್ಪ, ಜಿಲ್ಲಾಧಿಕಾರಿ

### ಸೌಲಭ್ಯಗಳ ಸದ್ಬಳಕೆ ಮಾಡಿಕೊಳ್ಳಿ

**ಅರ್ಹರು ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಮಕ್ಕಳ ಪೌಷ್ಟಿಕತೆ, ತಾಯಿ–ಮಗುವಿನ ಆರೋಗ್ಯ ಹಾಗೂ ಅಂಗನವಾಡಿಗಳ ಅಭಿವೃದ್ಧಿ ಸರ್ಕಾರದ ಇಲಾಖೆಗಳಷ್ಟೇ ಅಲ್ಲ, ಇಡೀ ಸಮಾಜದ ಹೊಣೆಗಾರಿಕೆಯಾಗಿದೆ ಎಂದು ಡಿಸಿ ಹೇಳಿದರು.**

# ಮಿನಿ ನ್ಯೂಸ್

## ನವರಾತ್ರಿ ನಿಮಿತ್ತ ಮದ್ಯ ಮಾರಾಟ ನಿಷೇಧ

**ಉದಯವಾಹಿನಿ, ಮಂಗಳೂರು**

ದಕ್ಷಿಣ ಕನ್ನಡ ಜಿಲ್ಲಾದ್ಯಂತ ನವರಾತ್ರಿ ಹಬ್ಬದ ಪ್ರಯುಕ್ತ ಶಾರದಾ ಮಹೋತ್ಸವ ಕಾರ್ಯಕ್ರಮ ಹಾಗೂ ಮೆರವಣಿಗೆ ನಡೆಯುವ ಸಮಯದಲ್ಲಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಗೂ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವ ಅಗತ್ಯತೆಯನ್ನು ಮನಗಂಡು ಮುಂಜಾಗ್ರತಾ ಕ್ರಮವಾಗಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಅಗತ್ಯವಿರುವುದರಿಂದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿನ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕ ವ್ಯಾಪ್ತಿಯಲ್ಲಿ ಶೋಭಾಯಾತ್ರೆ/ ಮೆರವಣಿಗೆ ದಿನದಂದು ಆಯಾ ಪ್ರದೇಶ ವ್ಯಾಪ್ತಿಯಲ್ಲಿ ಸಂಜೆ 4 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಬಾರ್ ಮತ್ತು ವೈನ್ ಶಾಪ್ಗಳು ಸೇರಿದಂತೆ ಎಲ್ಲಾ ಪ್ರಕಾರದ ಮದ್ಯದಂಗಡಿಗಳಲ್ಲಿ ಯಾವುದೇ ರೀತಿಯ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ ಆದೇಶಿಸಿದ್ದಾರೆ.

## 16ರಿಂದ 20ರವರೆಗೆ ಮಳೆಯಾಗುವ ಮುನ್ಸೂಚನೆ

**ಉದಯವಾಹಿನಿ, ಮಂಗಳೂರು**

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿದಂತೆ ಕರಾವಳಿ ಕರ್ನಾಟಕದಾದ್ಯಂತ ಅಕ್ಟೋಬರ್ 16ರಿಂದ 20ರವರೆಗೆ ಮಳೆಯಾಗಲಿದೆ ಎಂದು ರಾಜ್ಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹವಾಮಾನ ವರದಿಯ ಪ್ರಕಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ, ವಿಜಯನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅಕ್ಟೋಬರ್ 15ರಿಂದ 20ರ ನಡುವೆ ಅಲ್ಲಲ್ಲಿ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ಇದಲ್ಲದೆ, ಬಾಗಲಕೋಟೆ, ವಿಜಯಪುರ, ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ಹಲವು ಭಾಗಗಳಲ್ಲಿ ಅಕ್ಟೋಬರ್ 16ರಿಂದ 20ರವರೆಗೆ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

## ಪೌರಕಾರ್ಮಿಕರಿಗೆ ದಸರೆಗೆ ಹೊಸ ಬಟ್ಟೆ ವಿತರಣೆ

**ಉದಯವಾಹಿನಿ, ಬಳ್ಳಾರಿ**

ನಗರದ ತಾಳೂರು ರಸ್ತೆಯಲ್ಲಿ ದಸರಾ ಹಬ್ಬದ ಪ್ರಯುಕ್ತ, 24ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯ ಹಾಗೂ ಪಾಲಿಕೆಯ ವಿರೋಧ ಪಕ್ಷದ ನಾಯಕ ಟಿ. ಶ್ರೀನಿವಾಸ್ ಮೋತ್ಕರ್ ನೇತೃತ್ವದಲ್ಲಿ ಪೌರಕಾರ್ಮಿಕರಿಗೆ ಬಟ್ಟೆ ವಿತರಣೆ ಕಾರ್ಯಕ್ರಮ ನಡೆಯಿತು. ಬಟ್ಟೆ ವಿತರಿಸಿ ಮಾತನಾಡಿದ ನಗರದ ಮಾಜಿ ಶಾಸಕ ಜಿ.ಸೋಮಶೇಖರ ರೆಡ್ಡಿ, ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಅತ್ಯಂತ ಮಹತ್ವದ್ದು. ಅವರ ನಿಸ್ವಾರ್ಥ ಸೇವೆಯನ್ನು ಗೌರವಿಸುವ ಇಂತಹ ಮಾನವೀಯ ಕಾರ್ಯಗಳು ನಿಜಕ್ಕೂ ಶ್ಲಾಘನೀಯ ಎಂದರು. ಶ್ರೀನಿವಾಸ ಮೋತ್ಕರ್ ಮಾತನಾಡಿ, ನಮ್ಮನಗರದ , ವಾರ್ಡಿನ ಜನ ಆರೋಗ್ಯದಿಂದ ಇರಬೇಕಾದರೆ ಪೌರ ಕಾರ್ಮಿಕರ ಸೇವೆ ಅನನ್ಯವಾದುದು. ಅದಕ್ಕಾಗಿ ದಸರಾ ಹಬ್ಬವನ್ನು ಅವರು ಹೊಸ ಬಟ್ಟೆ ಧರಿಸುವ ಮೂಲಕ ಆಚರಿಸಲಿ ಎಂದು ಹಾರೈಸಿದರು.

## ಅ.19, 26ಕ್ಕೆ ಸಾರ್ವಜನಿಕರ ವೀಕ್ಷಣೆಗೆ ಅವಕಾಶ

**ಉದಯವಾಹಿನಿ, ಮಂಗಳೂರು**

ದಸರಾ ರಜೆ ಇರುವ ಪ್ರಯುಕ್ತ ಅಕ್ಟೋಬರ್ 19 ಮತ್ತು 26 ರ ಸೋಮವಾರಗಳಂದು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಎಲ್ಲಾ ವಿಭಾಗಗಳಾದ ಪ್ರಾದೇಶಿಕ ವಿಜ್ಞಾನ ಕೇಂದ್ರ, ತಾರಾಲಯ, ಮೃಗಾಲಯ, ಲೇಕ್ ಗಾರ್ಡನ್, ಬೊಟಾನಿಕಲ್ ಮ್ಯೂಸಿಯಂ ಮತ್ತು ಸಂಸ್ಕೃತಿ ಗ್ರಾಮವು ಸಾರ್ವಜನಿಕರ ವೀಕ್ಷಣೆಗೆ ಇತರೆ ಎಲ್ಲಾ ದಿನಗಳಂತೆ ತೆರೆದಿರುತ್ತದೆ ಎಂದು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

## 30 ವಾಹನಗಳ ಮೇಲೆ ಕೇಸ್ ದಾಖಲು

**ಉದಯವಾಹಿನಿ, ಮಂಗಳೂರು**

ಮಂಗಳೂರು ಪ್ರಾದೇಶಿಕ ಸಾರಿಗೆ ಕಚೇರಿಯ ವತಿಯಿಂದ ಶಾಲಾ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಖಾಸಗಿ ವಾಹನಗಳಲ್ಲಿ ನಿಯಮಬಾಹಿರವಾಗಿ ಶಾಲಾ ಮಕ್ಕಳನ್ನು ಸಾಗಿಸುತ್ತಿರುವ ವಾಹನಗಳ ವಿರುದ್ಧ ವಿಶೇಷ ತಪಾಸಣೆ ನಡೆಸಿ ಪ್ರಕರಣ ದಾಖಲಿಸಲಾಗಿದೆ. ಈ ಕಾರ್ಯಾಚರಣೆಯ ಸಂದರ್ಭದಲ್ಲಿ ನಿಯಮಬಾಹಿರವಾಗಿ ಶಾಲಾ ಮಕ್ಕಳನ್ನು ಸಾಗಿಸುತ್ತಿದ್ದ ಸುಮಾರು 30 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಸಂಬಂಧಪಟ್ಟ ವಾಹನಗಳ ಮಾಲೀಕರಿಗೆ ವಾಹನಗಳ ನೋಂದಣಿಯನ್ನು ಅಮಾನತುಗೊಳಿಸಬಾರದು ಎಂಬುದಕ್ಕೆ ಕಾರಣಗಳನ್ನು ತಿಳಿಸುವಂತೆ ನೋಟಿಸ್ಗಳನ್ನು ಜಾರಿಗೊಳಿಸಲಾಗಿದೆ. ಶಾಲಾ ಮಕ್ಕಳ ಸುರಕ್ಷತೆ ಸಾರಿಗೆ ಇಲಾಖೆಯ ಪ್ರಮುಖ ಆದ್ಯತೆಯಾಗಿದ್ದು, ನಿಯಮಬಾಹಿರವಾಗಿ ಮಕ್ಕಳನ್ನು ಸಾಗಿಸುವ ವಾಹನಗಳ ವಿರುದ್ಧ ಮುಂದಿನ ದಿನಗಳಲ್ಲಿಯೂ ತಪಾಸಣೆ ಹಾಗೂ ಜಾರಿ ಕಾರ್ಯಾಚರಣೆ ಮುಂದುವರಿಸಲಾಗುತ್ತದೆ ಎಂದು ಮಂಗಳೂರು ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜೀನಾಮೆಗೆ ಆಗ್ರಹಿಸಿ ಇಂದು ಪ್ರತಿಭಟನಾ ಧರಣಿ

**ಉದಯವಾಹಿನಿ, ಬಳ್ಳಾರಿ**

ಕರ್ನಾಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಾ ಡಿಜಿ ಸಾಗರ್ ಬಣದಿಂದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ ಅವರನ್ನು ವಜಗೊಳಿಸಬೇಕು. ಮತ್ತು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕು ಎಂದು ನಾಳೆ ಬಳ್ಳಾರಿ ನಗರದಲ್ಲಿ ರಾಜ್ಯ ಸಂಘಟನಾ ಸಂಚಾಲಕರಾದ ಎ.ಮಾನಯ್ಯ ಅವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಸಂಘಟನೆಯ ಮುಖಂಡ ಹೆಚ್ ಶಂಕರ್ ತಿಳಿಸಿದ್ದಾರೆ ಎಸ್.ಐ.ಆರ್. ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಮುಂಬರುವ ಚುನಾವಣೆಗಳನ್ನು ತಡೆಹಿಡಿ ಯಬೇಕು. 2023 ಚುನಾವಣಾ ಆಯೋಗದ ನೇಮಕಾತಿ ಕಾಯ್ದೆಯನ್ನು ರದ್ದುಗೊಳಿಸಬೇಕು ಹಾಗೂ ಸ್ವತಂತ್ರ ಮತ್ತು ವಿಶ್ವಾಸಾರ್ಹ ಆಯ್ಕೆ ಪ್ರಕ್ರಿಯೆಯನ್ನು ರೂಪಿಸಬೇಕೆಂದು ಒತ್ತಾಯಿಸಿ ಪ್ರತಿಭಟನಾ ಧರಣಿ ನಡೆಸಲಿದೆ. ಶುಕ್ರವಾರ ಬೆಳಿಗ್ಗೆ 11 ರಿಂದ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಧರಣಿ ಸತ್ಯಾಗ್ರಹ ನಡೆಸಲಿದ್ದು ಸಂಘಟನೆಯ ಮುಖಂಡರು, ಕಾರ್ಯಕರ್ತರು ಪಾಲ್ಗೊಳ್ಳಲು ಕೋರಿದ್ದಾರೆ.



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 10:30 ರಿಂದ 12:00 |
| ಗುಳಿಕ ಕಾಲ | ಬೆಳಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಬೆಳಗ್ಗೆ | 03:00 ರಿಂದ 04:30 |

**ಮೇಷ** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಕೌಟುಂಬಿಕ ಒತ್ತಡ ನಿಮ್ಮ ಗಮನ ಬೇರೆಡೆಗೆ ಸೆಳೆಯದಿರಲಿ. ಕೆಟ್ಟ ಸಮಯ ನಮಗೆ ಹೆಚ್ಚನ್ನು ನೀಡುತ್ತವೆ.

**ವೃಷಭ** ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಿಂಜರಿಯದಿರಿ. ಆತ್ಮವಿಶ್ವಾಸದ ನಿಮ್ಮನ್ನು ಆವರಿಸಲು ಬಿಡಬೇಡಿ, ಏಕೆಂದರೆ ಅದು ಕೇವಲ ನಿಮ್ಮ ಸಮಸ್ಯೆಯನ್ನು ಮಾತ್ರ ಸಂಕೀರ್ಣಗೊಳಿಸುತ್ತದೆ ಮತ್ತು ನಿಮ್ಮ ಪ್ರಗತಿಯನ್ನು ಹಾಳುಗೆಡವಬಲ್ಲದು.

**ಮಿಥುನ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಇಂದು ಹೂಡಿಕೆಗಳನ್ನು ಮಾಡಬಾರದು. ಮಕ್ಕಳು ನಿಮಗೆ ಮನೆಕೆಲಸಗಳನ್ನು ಮಾಡಲು ಸಹಾಯ ಮಾಡುತ್ತಾರೆ.

**ಕರ್ಕಾಟಕ** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ಅನೇಕ ಸಮಸೆಗಳನ್ನು ದೂರ ಮಾಡಬಹುದು.

**ಸಿಂಹ** ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ಹೆಚ್ಚು ಖರೀದಿಸಲು ಧಾವಿಸುವ ಮೊದಲು ನೀವು ಈಗಾಗಲೇ ಹೊಂದಿರುವುದನ್ನು ಬಳಸಿ. ನೀವು ನಂಬುವ ಯಾರಾದರೂ ನಿಮಗೆ ಸಂಪೂರ್ಣ ನಿಜ ಹೇಳದಿರಬಹುದು.

**ಕನ್ಯಾ** ಆರೋಗ್ಯ ವಿಷಯಗಳಲ್ಲಿ ನಿಮ್ಮ ಬಗ್ಗೆ ನೀವೇ ನಿರ್ಲಕ್ಷ್ಯ ಮಾಡದಂತೆ ಎಚ್ಚರಿಕೆ ವಹಿಸಿ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು.

**ತುಲಾ** ಒಂದು ಲಾಭಕರ ದಿನ ಮತ್ತು ನೀವು ದೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಮನೆಯ ಸೌಂದರ್ಯದ ಜತೆಗೆ ಮಕ್ಕಳ ಅಗತ್ಯಗಳನ್ನೂ ನೋಡಿಕೊಳ್ಳಿ.

**ವೃಶ್ಚಿಕ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ದಿ ಜೀವನದ ಹೆಬ್ಬಾಗಿಲಾಗಿದೆ.

**ಧನಸ್ಸು** ನಿಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಅಂಗವೈಕಲ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಕೇವಲ ಸಕಾರಾತ್ಮಕ ಆಲೋಚನೆಗಳ ಜೊತೆ ಮಾತ್ರ ನೀವು ಈ ಸಮಸ್ಯೆಯ ವಿರುದ್ಧ ಹೋರಾಡಬೇಕು. ನಿಮ್ಮ ಹಣದ ಚೀಲವನ್ನು ಎಚ್ಚರಿಕೆಯಿಂದಿಡಿ.

**ಮಕರ** ಗರ್ಭಿಣಿಯರಿಗೆ ಉತ್ತಮ ದಿನವಲ್ಲ. ನೀವು ನಡೆಯುವಾಗ ಹೆಚ್ಚು ಜಾಗರೂಕರಾಗಿರಬೇಕು. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಕುಂಭ** ನೀವು ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ.

**ಮೀನ** ನೀವು ಮಾನಸಿಕ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು. ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು

### ಜಿಲ್ಲೆಯಲ್ಲಿ ಒಟ್ಟು 1.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗಿದೆ – ತೋಟಗಳನ್ನು ಉಳಿಸಿಕೊಳ್ಳುವುದೇ ಸವಾಲಿನ ಕೆಲಸವಾಗಿದೆ

# ನೀರಿನ ಕೊರತೆ ಮಧ್ಯೆ ಏರುತ್ತಿರುವ ತಾಪಮಾನ, ಪಾತಾಳ ಕಂಡ ಅಡಿಕೆ

**ಉದಯವಾಹಿನಿ, ದಾವಣಗೆರೆ**

ತಾಪಮಾನ ಏರಿಕೆಯಿಂದ ಹೆಚ್ಚು ಇಳುವರಿ ಬರುತ್ತಿದ್ದ ಅಡಿಕೆಗೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಸಾಲದೆಂಬಂತೆ ಅಡಿಕೆ ದರ ಕೂಡ ಪಾತಾಳ ಕಂಡಿರುವುದು ನಮ್ಮನ್ನು ಮತ್ತಷ್ಟು ಆತಂಕಕ್ಕೆ ದೂಡಿದಂತಾಗಿದೆ ಎನ್ನುತ್ತಿದ್ದಾರೆ ಅಡಿಕೆ ಬೆಳೆಯುತ್ತಿರುವ ರೈತರು.

ಈ ಬಾರಿ ಮಳೆಯ ತೀವ್ರ ಕೊರತೆ ಹಿನ್ನೆಲೆ ತೋಟಗಳಿಗೆ ನೀರಿಲ್ಲದಂತಾಗಿದೆ. ಬಿಸಿಲಿನ ಪ್ರಖರತೆಯಿಂದ ಅಡಿಕೆ ತೋಟಗಳು ದಿನದಿಂದ ದಿನಕ್ಕೆ ಒಣಗುತ್ತಿವೆ. ಹಾಗಾಗಿ ಈ ಬಾರಿ ತೋಟಗಳನ್ನು ಉಳಿಸಿಕೊಳ್ಳುವುದೇ ಸವಾಲಿನ ಕೆಲಸವಾಗಿದೆ.

1. ನೋವು ಹೇಳಿಕೊಳ್ಳುತ್ತಿರುವ ಬೆಳೆಗಾರರು
2. ಅಡಿಕೆ ಕುಸಿತಕ್ಕೆ ಕಂಗಾಲದ ಅನ್ನದಾತ
3. ಅಡಿಕೆಗೆ ಕೊಳೆ ರೋಗ ಕಾಟ ಹೆಚ್ಚಾಗಿದೆ

ಸಾಮಾನ್ಯವಾಗಿ ಆಗಸ್ಟ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ 30ರಿಂದ 40 ದಿನಗಳಿಗೊಮ್ಮೆ ಅಡಿಕೆ ಕೊಯ್ಲು ನಡೆಯುತ್ತದೆ. ಪ್ರತೀ ವರ್ಷ 4 ಬಾರಿ ಕೊಯ್ಲು ನಡೆಯುತ್ತಿತ್ತು. ಈ ಬಾರಿ ಬರಗಾಲ ಆವರಿಸಿದ್ದರಿಂದ ಅಡಿಕೆ ಇಳುವರಿಯಲ್ಲಿ ಭಾರಿ ಪ್ರಮಾಣದಲ್ಲಿ ಕುಸಿತ ಕಂಡಿದೆ. ಪರಿಣಾಮ 2ರಿಂದ 3 ಬಾರಿ ಮಾತ್ರ ಕೊಯ್ಲು ಮಾಡಬಹುದು ಎನ್ನುವ ಮೂಲಕ ಅಡಿಕೆ ಬೆಳೆಗಾರರು ತಮ್ಮ ಆತಂಕ ತೋಡಿಕೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 1.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗಿದೆ. ಈ ಪೈಕಿ 75 ರಿಂದ 80 ಸಾವಿರ ಹೆಕ್ಟೇರ್‌ನಲ್ಲಿನ ಅಡಿಕೆ ಇಳುವರಿ ಬರುತ್ತಿದೆ.



ಉದಯವಾಹಿನಿ ಚಿತ್ರ

ಉಳಿದ 35 ಸಾವಿರ ಹೆಕ್ಟೇರ್ ಪ್ರದೇಶದ ಅಡಿಕೆ ಬೆಳೆ ಇನ್ನೂ 5 ವರ್ಷಕ್ಕಿಂತ ಚಿಕ್ಕದಿದೆ. ಜಿಲ್ಲೆಯ ಆರು ತಾಲ್ಲೂಕಗಳ ಪೈಕಿ ಚನ್ನಗಿರಿಯಲ್ಲೇ ಅತಿ ಹೆಚ್ಚು ಅಡಿಕೆ ಬೆಳೆಯಲಾಗುತ್ತದೆ.

**ತೀವ್ರ ಬಿಸಿಲಿನ ಹೊಡೆತ:** ತೀವ್ರ ಬಿಸಿಲಿನ ಹೊಡೆತಕ್ಕೆ ಈಗಾಗಲೇ ಅಡಿಕೆ ಗಿಡಗಳಲ್ಲಿ ಹರಳು ಉದುರಲು ಆರಂಭವಾಗಿದೆ. ಜೂನ್–ಜುಲೈ ತಿಂಗಳಿಂದಲೂ ಇದು ಸಾಮಾನ್ಯವಾಗಿದೆ. ಕೆಲ ಭಾಗಗಳಲ್ಲಿ ಕೆಂಪುಚುಕ್ಕಿ ರೋಗವೂ ಕಾಡುತ್ತಿದೆ. ಒಂದು ಹೆಕ್ಟೇರ್‌ಗೆ ಕನಿಷ್ಠ 12 ರಿಂದ 13 ಕ್ವಿಂಟಲ್ ಒಣ ಅಡಿಕೆ ಸಿಗಬೇಕಿತ್ತು. ದುರಂತವೆಂದರೆ ಈ ಬಾರಿ 3ರಿಂದ 4 ಕ್ವಿಂಟಲ್ ಮಾತ್ರ ರೈತರ ಕೈ ಸೇರಬಹುದು. ಹಳ್ಳ–ಕೊಳ್ಳಗಳು, ಕೆರೆಗಳು ಬತ್ತಿವೆ. ಪರಿಣಾಮ ಜಿಲ್ಲೆಯಲ್ಲಿ ಏಳು ಮೀಟರ್ ಅಂತರ್ಜಲ ಮಟ್ಟ ಕುಸಿತವಾಗಿದೆ. ಕೊಳವೆಬಾವಿಗಳಲ್ಲಿ ನೀರು ಬರುತ್ತಿಲ್ಲ. ಮುಂದಿನ ದಿನಗಳಲ್ಲಿ ತೋಟಗಳನ್ನು ಉಳಿಸಿಕೊಳ್ಳುವುದು ಕಷ್ಟದ ಕೆಲಸವಾಗಲಿದೆ ಎನ್ನುತ್ತಿದ್ದಾರೆ ಅಡಿಕೆ ಬೆಳೆಗಾರರು.

**ಅಡಿಕೆ ದರ ಕುಸಿತಕ್ಕೆ ಕಂಗಾಲದ ಅನ್ನದಾತ:** ರೈತ ಮೋಹನ್ ನಾಯ್ಕ್ ಮಾತನಾಡಿ, "ಈ ಬಾರಿ ಮಳೆ ಇಲ್ಲದೆ ರೈತರು ಕಂಗಾಲಾಗಿದ್ದಾರೆ. ಕೆರೆ – ಕಟ್ಟೆಗಳಲ್ಲಿ ನೀರಿಲ್ಲ. ನೀರು ಹರಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಬಿಸಿಲಿನ ತಾಪಕ್ಕೆ ಅಡಿಕೆ ಗಿಡಗಳಲ್ಲಿ ಹರಳು ಉದುರುತ್ತಿದೆ. 1000–1200 ಅಡಿ ಆಳದ ಬೋರ್‌ವೆಲ್‌ಗಳಲ್ಲಿಯೂ ನೀರಿಲ್ಲ. ಅಡಿಕೆ ದರ ಕೂಡ ಸಾವಿರಾರು ರೂಪಾಯಿ ಕುಸಿದಿದೆ. ಹಸಿ ಅಡಿಕೆ 7000–7500 ದರ ಇತ್ತು. ಇದೀಗ 6000–6200 ದರ ಆಗಿದೆ. ಒಣ ಅಡಿಕೆ 50–60 ಸಾವಿರ ಇತ್ತು. ಇದೀಗ 40–42 ಸಾವಿರಕ್ಕೆ ಬಂದಿದೆ. ರೈತರ ಪರಿಸ್ಥಿತಿ ಕೆಟ್ಟದಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್‌ಎಸ್ ಮಲ್ಲಿಕಾರ್ಜುನ್ ಅವರು ನಮ್ಮ ಕಡೆ ಗಮನ ಹರಿಸಬೇಕು" ಎಂದು ಮನವಿ ಮಾಡಿದ್ದಾರೆ.

> ಬರಪೀಡಿತ ತಾಲ್ಲೂಕಾದ ಜಗಳೂರು ತಾಲ್ಲೂಕಿನಲ್ಲಿ ಒಂದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಪ್ಲಾಂಟಿಂಗ್ ಮಾಡಲಾಗಿದೆ. ಜಗಳೂರು ಸೇರಿ ಜಿಲ್ಲೆಯ ಎಲ್ಲ ತಾಲೂಕುಗಳಿಗೂ ಅಡಿಕೆ ಬೆಳೆ ವಿಸ್ತರಣೆಗೊಂಡಿದೆ.
> – ರಾಘವೇಂದ್ರ ಪ್ರಸಾದ್, ತೋಟಗಾರಿಕೆ ನಿರ್ದೇಶಕ

**ಅಡಿಕೆ ನಾಲ್ಕು ಕೊಯ್ಲು ನಡೆಸುವುದು ಅಸಾಧ್ಯ**

ಈಗಾಗಲೇ ಕೆಲವು ಕಡೆ ಅಡಿಕೆ ಕೊಯ್ಲು ಮುಗಿಯುತ್ತಾ ಬಂದಿದ್ದು, ಇಳುವರಿ ಕಡಿಮೆಯಾಗಿ ತೂಕಕ್ಕೂ ಕುತ್ತು ಬಂದಿದೆ. ಈ ಬರಗಾಲದಲ್ಲಿ ಅಡಿಕೆ ಬೆಳೆಗಾರರು ನಾಲ್ಕು ಕೊಯ್ಲು ನಡೆಸುವುದು ಅಸಾಧ್ಯವಾದ ಮಾತಾಗಿದೆ ಎಂದು ರಾಘವೇಂದ್ರ ಪ್ರಸಾದ್ ತಿಳಿಸಿದ್ದಾರೆ.

## ಸುಪ್ರಿಂ ಆದೇಶದಂತೆ ಬಗರ್ ಹುಕುಂ ಅರ್ಜಿಗಳ ಮರು ಪರಿಶೀಲನೆಗೆ ಒತ್ತಾಯ



ಉದಯವಾಹಿನಿ ಚಿತ್ರ

**ಉದಯವಾಹಿನಿ, ಸೊರಬ**

ರಾಜ್ಯ ಸರ್ಕಾರ ಕೂಡಲೇ ಬಗರ್ ಹುಕುಂ ರೈತರ ಪರ ನಿಂತು ನ್ಯಾಯ ಒದಗಿಸಬೇಕಿದೆ ಎಂದು ಬಿಜೆಪಿ ಮುಖಂಡ ಎಚ್.ಈ ಜ್ಞಾನೇಶ್ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಬಿಜೆಪಿ ಮಂಡಲ ವತಿಯಿಂದ ನಡೆದ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ತಾಲ್ಲೂಕಿನ ಜನರು ಅನೇಕ ವರ್ಷಗಳಿಂದ ಅರಣ್ಯ ಒಡನಾಟದಲ್ಲಿ ಬೆಳೆದು ಬಂದವರು. ಸಾವಿರಾರು ಎಕರೆ ಪ್ರದೇಶದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಸಾಗುವಳಿ ಮಾಡಿದ ಬಗರ್ ಹುಕುಂ ಜಾಗದಲ್ಲಿ ತೋಟಗಾರಿಕೆ ಸೇರಿದಂತೆ ಇತರೆ ಬೆಳೆ ಬೆಳೆದು ಬದುಕು ಕಟ್ಟಿಕೊಂಡಿದ್ದಾರೆ. ಆದರೆ ಈ ಹಿಂದೆ ತಾಲ್ಲೂಕಿನ ರೈತರು ನೀಡಿದ 19,000 ಅರ್ಜಿಗಳು ವಜಾಗೊಂಡಿದ್ದವು. ಇದೀಗ ಸುಪ್ರೀಂ ಕೋರ್ಟ್ ಅಂತಹ ಅರ್ಜಿಗಳನ್ನು ಮರು ಪರಿಶೀಲನೆ ನಡೆಸುವಂತೆ ನಿರ್ದೇಶನ ನೀಡಿದೆ. ಈಗಲಾದರೂ ರಾಜ್ಯ ಸರ್ಕಾರ ಸಂಬಂಧಪಟ್ಟ ಇಲಾಖೆಗೆ ಸೂಚನೆ ನೀಡಿ ಕ್ರಮ ಕೈಗೊಳ್ಳಬೇಕಿದೆ ಎಂದರು.

ಬಗರ್ ಹುಕುಂ ವಿಚಾರದಲ್ಲಿ ರಾಜಕೀಯ ಮಾಡದೆ ಪಕ್ಷಾತೀತವಾಗಿ ರೈತರ ಪರ ನಿಲ್ಲಬೇಕಿದೆ. ಈ ಹಿಂದೆ ಬಗರ್ ಹುಕುಂ ರೈತರ ಪರರ ಪಾದಯಾತ್ರೆ ಮಾಡಿದ ಜಿಲ್ಲಾ ಸಚಿವರು ಹಕ್ಕುಪತ್ರ ನೀಡುವಲ್ಲಿ ವಿಫಲರಾಗಿದ್ದಾರೆ. ರಾಜ್ಯ ಸರ್ಕಾರ ರಾಜಕಾರಣ ಮಾಡುತ್ತಾ ಬಂದಿದೆ' ಎಂದು ಆರೋಪಿಸಿದರು.

## ರೈತರ ಸಮಸ್ಯೆಗಳನ್ನು ಪ್ರಸ್ತಾಪಿಸಿದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ

**ಉದಯವಾಹಿನಿ, ಬೀದರ್**

ಜಿಲ್ಲೆಯ ರೈತರು ಎದುರಿಸುತ್ತಿರುವ ವಿದ್ಯುತ್ ಸಮಸ್ಯೆಗಳು, ಕೃಷಿ ನಷ್ಟ ಹಾಗೂ ಪರಿಹಾರ ವಿತರಣೆಯಲ್ಲಿನ ವಿಳಂಬದ ಕುರಿತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಸಾರ್ವಜನಿಕ ವಿಚಾರಣೆಯಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಪ್ರಮುಖ ಬೇಡಿಕೆಗಳನ್ನು ಮಂಡಿಸಿದರು. ಬೀದರ್ ಜೆಸ್ಕಾಂ ಕಚೇರಿ ಸಭಾಂಗಣದಲ್ಲಿ KERC ಅಧ್ಯಕ್ಷರಾದ ಶ್ರೀ ಪಿ. ರವಿಕುಮಾರ್ ಅವರ ನೇತೃತ್ವದಲ್ಲಿ ನಡೆದ ಕರ್ನಾಟಕ ವಿದ್ಯುತ್ ಸರಬರಾಜು ನಿಯಮಾವಳಿಗಳು, 2026ರ ಕರಡು ಕುರಿತ ಸಾರ್ವಜನಿಕ ವಿಚಾರಣೆಯಲ್ಲಿ ಪಾಲ್ಗೊಂಡ ಶಾಸಕರು, ಗ್ರಾಮೀಣ ಪ್ರದೇಶಗಳ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವ ಹಾಗೂ ರೈತರ ಅಗತ್ಯಗಳಿಗೆ ಆದ್ಯತೆ ನೀಡುವ ಕುರಿತು ಗಮನ ಸೆಳೆದರು.

ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿದಿನ ಕನಿಷ್ಠ 7 ಗಂಟೆಗಳ ಕಾಲ ವಿದ್ಯುತ್ ಪೂರೈಕೆ, ಕೆಟ್ಟುಹೋದ ವಿದ್ಯುತ್ ಪರಿವರ್ತಕಗಳ ತ್ವರಿತ ದುರಸ್ತಿ ಮತ್ತು ವಿದ್ಯುತ್ ವ್ಯತ್ಯಯದಿಂದ ಕೃಷಿ ಚಟುವಟಿಕೆಗಳಿಗೆ ಉಂಟಾಗುವ ತೊಂದರೆಗಳನ್ನು ನಿವಾರಿಸುವಂತೆ ಅವರು ಆಗ್ರಹಿಸಿದರು. ಇದೇ ಸಂದರ್ಭದಲ್ಲಿ, ಬೆಂಕಿಯಿಂದ ಸುಟ್ಟುಹೋದ ಕಬ್ಬಿನ ಬೆಳೆಯಿಂದ ನಷ್ಟ ಅನುಭವಿಸಿದ ಅರ್ಹ ರೈತರಿಗೆ ಪರಿಹಾರ ಬಿಡುಗಡೆ ಹಾಗೂ ಪಶುಗಳ ಸಾವಿನಿಂದ ನಷ್ಟಕ್ಕೊಳಗಾದ ರೈತರಿಗೆ ನಿಯಮಾನುಸಾರ ಪರಿಹಾರ ಒದಗಿಸುವ ವಿಷಯವನ್ನೂ ಪ್ರಸ್ತಾಪಿಸಿದರು. ವಿದ್ಯುತ್ ಪರಿವರ್ತಕಗಳು ಕೆಟ್ಟುಹೋದ ಸಂದರ್ಭದಲ್ಲಿ ರೈತರು ಎದುರಿಸುವ ತೊಂದರೆಗಳನ್ನು ನಿವಾರಿಸಲು, 63 ಏಗಿಂ ಮತ್ತು 100 ಏಗಿಂ ಸಾಮರ್ಥ್ಯದ ವಿದ್ಯುತ್ ಪರಿವರ್ತಕಗಳ ದುರಸ್ತಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಶೀಘ್ರ ಮರುಸ್ಥಾಪನೆ ಮಾಡುವಂತೆ ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

## ನಿಡಗುಂದಾ ಜಿಪಂ: ತುಳಜಮ್ಮ ದಿ.ಸಿದ್ದಣ್ಣ ಗುತ್ತೇದಾರ ಪ್ರಬಲ ಆಕಾಂಕ್ಷಿ

**ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ನಿಡಗುಂದಾ ಜಿಲ್ಲಾ ಪಂಚಾಯತ್ ಮತಕ್ಷೇತ್ರವು ಪರಿಶಿಷ್ಟ ಜಾತಿ ಮಹಿಳಾ ಮೀಸಲಾತಿಯಾಗಿ ಘೋಷಣೆಯಾಗಿದ್ದು ಈ ಕ್ಷೇತ್ರಕ್ಕೆ ರುದ್ನೂರು ಗ್ರಾಮದ ತುಳಜಮ್ಮ ದಿ.ಸಿದ್ದಣ್ಣ ಗುತ್ತೇದಾರ ಅವರು ಪ್ರಬಲ ಆಕಾಂಕ್ಷಿಯಾಗಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಎಸ್ಸಿ ಘಟಕದ ಅಧ್ಯಕ್ಷ ಸಂತೋಷ ಗುತ್ತೇದಾರ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು,ತುಳಜಮ್ಮ ಅವರು ಕಳೆದ ಎರಡು ದಶಕಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತೆಯಾಗಿ ಗುರುತಿಸಿಕೊಂಡಿದ್ದಾರೆ. ಪಕ್ಷದ ಸಿದ್ಧಾಂತ,ತತ್ವಗಳಿಗೆ ಬದ್ಧರಾಗಿ ಪಕ್ಷ ನೀಡಿದ ಪ್ರತಿಯೊಂದು ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ.ಗ್ರಾಮ ಪಂಚಾಯತ್ ಮಟ್ಟದಿಂದ ಹಿಡಿದು ತಾಲ್ಲೂಕು ಮಟ್ಟದವರೆಗೆ ಜಿಲ್ಲಾ ಮಟ್ಟದವರೆಗೆ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ನಿಡಗುಂದಾ ಜಿ.ಪಂ.ವ್ಯಾಪ್ತಿಯ ರುದ್ನೂರು,ನಿಡಗುಂದಾ,ಹೂವಿನಹಳ್ಳಿ,ಜೆಟ್ಟೂರ, ಪೋತಂಗಲ್,ಹಲವು ಗ್ರಾಮಗಳ ಮತದಾರರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ತುಳಜಮ್ಮ ಅವರು ಚುನಾವಣೆಗೆ ಸ್ಪರ್ಧಿಸಬೇಕು ಎಂದು ಒತ್ತಡ ಹೇರುತ್ತಿದ್ದಾರೆ,ಸಾಮಾಜಿಕ ಸೇವೆ,ಬಡವರ,ದಲಿತರ,ಹಿಂದುಳಿದ ವರ್ಗಗಳ ಮತದಾರರ ಪರವಾಗಿ ಅವರಿಗಿರುವ ಕಾಳಜಿ,ಸರಳ ಸಜ್ಜನಿಕೆಯ ವ್ಯಕ್ತಿತ್ವದಿಂದಾಗಿ ಜನರಲ್ಲಿ ಅಪಾರ ವಿಶ್ವಾಸಗಳಿಸಿದ್ದಾರೆ. ಹೈಕಮಾಂಡ್ ತುಳಜಮ್ಮ ಅವರ ಪಕ್ಷನಿಷ್ಠೆಯನ್ನು ಗುರುತಿಸಿ ನಿಡಗುಂದಾ ಜಿಲ್ಲಾ ಪಂಚಾಯತ್ ಟಿಕೆಟ್ ನೀಡಿದರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಬಾವುಟ ಹಾರಿಸುವುದು ಶತಃಸಿದ್ಧ ಗೆಲುವು ಖಚಿತ ಎಂದು ಸಂತೋಷ ಗುತ್ತೇದಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ಬಾರಿ ಮಹಿಳಾ ಮೀಸಲಾತಿ ಇರುವುದರಿಂದ ಸಮರ್ಥ,ಅನುಭವಿ ಮತ್ತು ಜನಪರ ಮಹಿಳಾ ನಾಯಕಿಯ ಅಗತ್ಯವಿದ್ದು ತುಳಜಮ್ಮ ಗುತ್ತೇದಾರ ಅವರೇ ಸೂಕ್ತ ಅಭ್ಯರ್ಥಿ ಎಂದು ಕ್ಷೇತ್ರದ ಜನತೆ ಅಭಿಪ್ರಾಯಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

## ಅನ್ನದಾತರ ಪ್ರತಿಭಟನೆಗೆ ಮುಖಂಡ ನಾಗೇಶ ಬೆಂಬಲ



ಉದಯವಾಹಿನಿ ಚಿತ್ರ

**ಉದಯವಾಹಿನಿ, ಕಲಬುರ್ಗಿ**

ಕಬ್ಬು ಬೆಳೆಗಾರರ ದೀರ್ಘಕಾಲದ ಬೇಡಿಕೆಯಾದ ಪ್ರತಿ ಟನ್‌ಗೆ ಕನಿಷ್ಠ 5,500 ವೈಜ್ಞಾನಿಕ ಬೆಂಬಲ ಬೆಲೆ ನಿಗದಿಪಡಿಸಬೇಕೆಂದು ಆಗ್ರಹಿಸಿ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ರೈತ ವಿರೋಧಿ ಧೋರಣೆ ವಿರುದ್ಧ ಕಲಬುರ್ಗಿ ಜಿಲ್ಲೆಯ ಹೆದ್ದಾರಿ ತಡೆದು ರೈತರು ನಡೆಸುತ್ತಿರುವ ಬೃಹತ್ ಪ್ರತಿಭಟನೆಗೆ ರೈತ ಯುವ ಮುಖಂಡರಾದ ನಾಗೇಶ ಪೂಜಾರಿ ಅವರು ಧ್ವನಿಗೂಡಿಸಿ ಸಂಪೂರ್ಣವಾಗಿ ಬೆಂಬಲ ಘೋಷಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಇಂದು ರಸಗೊಬ್ಬರ, ಕೀಟನಾಶಕ, ವಿದ್ಯುತ್, ಕೂಲಿ ಹಾಗೂ ಸಾಗಾಣಿಕೆ ವೆಚ್ಚಗಳು ಗಗನಕ್ಕೇರಿವೆ. ಕಬ್ಬು ಬೆಳೆಯಲು ರೈತರು ಎಕರೆಗೆ ಲಕ್ಷಾಂತರ ರೂಪಾಯಿ ಬಂಡವಾಳ ಹೂಡುತ್ತಿದ್ದಾರೆ. ಆದರೆ ಸರ್ಕಾರಗಳು ನಿಗದಿಪಡಿಸುತ್ತಿರುವ ದರದಿಂದ ರೈತರು ತೀವ್ರ ಆರ್ಥಿಕ ನಷ್ಟ ಅನುಭವಿಸಿ ಸಾಲದ ಸುಳಿಗೆ ಸಿಲುಕುತ್ತಿದ್ದಾರೆ. ರೈತರ ಬೆವರಿನ ಫಲಕ್ಕೆ ಸೂಕ್ತ ನ್ಯಾಯ ಸಿಗಬೇಕಾದರೆ ಪ್ರತಿ ಟನ್‌ಗೆ ಕನಿಷ್ಠ 5,500 ನಿಗದಿಪಡಿಸುವುದು ಅನಿವಾರ್ಯವಾಗಿದೆ ಎಂದು ಅವರು ಒತ್ತಾಯಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯನ್ನು ತೀವ್ರವಾಗಿ ಖಂಡಿಸಿದ ಅವರು, ಸರ್ಕಾರಗಳು ಕೇವಲ ಭರವಸೆಗಳನ್ನು ನೀಡುತ್ತಾ ರೈತರಿಗೆ ದಿಕ್ಕನ್ನು ತಪ್ಪಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.

## ಆಹಾರ ತಿನಿಸುಗಳ ಗುಣಮಟ್ಟದ ಬಗ್ಗೆ ಪರಿಶೀಲನೆ

**ಉದಯವಾಹಿನಿ, ಭದ್ರಾವತಿ**

ಇಲ್ಲಿನ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಸಮೀಪವಿರುವ ವಿವಿಧ ಹೋಟೆಲ್‌ಗಳಿಗೆ ಉಪವಿಭಾಗಾಧಿಕಾರಿ ಡಾ. ಎಚ್.ಪಿ.ಎಸ್ ಮೈತ್ರಿ ನೇತೃತ್ವದ ಅಧಿಕಾರಿಗಳ ತಂಡ ಬುಧವಾರ ದಿಢೀರ್ ಭೇಟಿ ನೀಡಿ, ಅಲ್ಲಿರುವ ಆಹಾರ ತಿನಿಸುಗಳ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸಿತು. ಹಲವು ಹೋಟೇಲ್‌ಗಳಲ್ಲಿ ಮಾರಲು ಇಟ್ಟಿದ್ದ ಆಹಾರ ತಿನಿಸುಗಳ ಪ್ಯಾಕೆಟ್‌ಗಳ ಮೇಲೆ ದರ ಮತ್ತು ಅವಧಿಯನ್ನು ನಮೂದಿಸದಿರುವುದು ಕಂಡುಬಂದಿತು. ಪೂರಿ, ಉದ್ದಿನ ವಡೆ, ಮೆಣಸಿನಕಾಯಿ ಬೋಂಡಾ, ಚಕ್ಕುಲಿ ಮೊದಲಾದ ತಿನಿಸು ಹಾಗೂ ಹೆಚ್ಚಿದ ತರಕಾರಿಗಳನ್ನು ತೆರೆದ ಸ್ಥಳದಲ್ಲಿ ಇರಿಸಿರುವುದು ಕಂಡು ಬಂದಿತು. ಮಾಂಸಾಹಾರಿ ಹೋಟೆಲ್‌ಗಳಲ್ಲಿ ಕೃತಕ ರಾಸಾಯನಿಕ ಬಣ್ಣ ಬಳಕೆ ಕಂಡುಬಂಡ ಕಾರಣ, ಮಾದರಿಗಳನ್ನು ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಿಕೊಡಲಾಯಿತು. ಹೋಟೆಲ್‌ಗಳಲ್ಲಿ ಪಾತ್ರೆ ತೊಳೆಯುವ ಸ್ಥಳ ಹಾಗೂ ಅಡುಗೆ ಬೇಯಿಸುವ ಒಲೆ ಇರುವ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಮಾಲೀಕರಿಗೆ ತಾಕೀತು ಮಾಡಲಾಯಿತು. ಹೋಟೆಲ್ ಪಕ್ಕವಿರುವ ಬೀಡಾ ಅಂಗಡಿಯಲ್ಲಿ ಬೀಡಾ ತಯಾರಿಕೆಗೆ ಬಳಸುವ ಪದಾರ್ಥಗಳ ಗುಣಮಟ್ಟದ ಪರಿಶೀಲನೆಯೂ ನಡೆಯಿತು. ಸಮೀಪದ ಬೇಕರಿಗಳಿಗೆ ಭೇಟಿ ನೀಡಿದ ತಂಡ, ಅಲ್ಲಿ ಕೆಲವು ಅವಧಿ ಮೀರಿದ ಹಾಗೂ ಬಳಕೆಗೆ ಯೋಗ್ಯವಲ್ಲದ ವಸ್ತುಗಳು ಇರುವುದನ್ನು ಪತ್ತೆ ಹಚ್ಚಿ, ಅವುಗಳ ಮಾದರಿಗಳನ್ನು ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳುಹಿಸಿತು. ತಹಶೀಲ್ದಾರ್ ಪ್ರದೀಪ್ ದೇವಗಿರಿ, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳಾದ ಮನೋಜ್ ಬಿ.ಎಂ., ಉಮೇಶ್ ಉಪಸ್ಥಿತರಿದ್ದರು.

## ಮೀಸಲಾತಿ ಉಳಿಸಿಕೊಳ್ಳಲು ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಆಗ್ರಹ

**ಉದಯವಾಹಿನಿ, ಆಳಂದ**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳವನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ, ಪರಿಶಿಷ್ಟ ಸಮುದಾಯಗಳ ಹಕ್ಕುಗಳನ್ನು ರಕ್ಷಿಸುವಲ್ಲಿ ಕಾಂಗ್ರೆಸ್ ಸರ್ಕಾರದ ನಡೆ ಪ್ರಶ್ನಾರ್ಹವಾಗಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.

ಪಟ್ಟಣದಲ್ಲಿ ಶಿಕ್ಷಕರ ವಿಧಾನ ಪರಿಷತ್ ಚುನಾವಣೆಯ ಬಿಜೆಪಿ ಅಭ್ಯರ್ಥಿಯ ಪರ ಪ್ರಚಾರದ ನಿಮಿತ್ತ ಮತಯಾಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವೇ ಉತ್ತರಿಸಬೇಕು ಎಂದು ಹೇಳಿದರು.

ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ. 15ರಿಂದ ಶೇ. 17ಕ್ಕೆ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ. 3ರಿಂದ ಶೇ. 7ಕ್ಕೆ ಹೆಚ್ಚಿಸಿತ್ತು. ಇದರಿಂದ ರಾಜ್ಯದಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ. 50ರಿಂದ ಶೇ. 56ಕ್ಕೆ ಏರಿಕೆಯಾಗಿತ್ತು. ಆದರೆ, ಈ ಹೆಚ್ಚಳಕ್ಕೆ ಸಂಬಂಧಿಸಿದ 2022ರ ಕಾಯಿದೆಯ ಪ್ರಮುಖ ನಿಬಂಧನೆಗಳನ್ನು ಕರ್ನಾಟಕ ಹೈಕೋರ್ಟ್ ಅಕ್ಟೋಬರ್ 12ರಂದು ಅಸಂವಿಧಾನಿಕ ಎಂದು ಘೋಷಿಸಿ ರದ್ದುಗೊಳಿಸಿದೆ. ಒಟ್ಟು ಮೀಸಲಾತಿ ಪ್ರಮಾಣ ಶೇ. 50ರ ಮಿತಿಯನ್ನು ಮೀರಿರುವುದು ಹಾಗೂ ಸಂಬಂಧಿತ ಸಾಂವಿಧಾನಿಕ ಪ್ರಕ್ರಿಯೆಗಳನ್ನು ಪಾಲಿಸದಿರುವುದು ನ್ಯಾಯಾಲಯದ ತೀರ್ಪಿನ ಪ್ರಮುಖ ಅಂಶಗಳಾಗಿವೆ. ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಹೆಚ್ಚಿಸಲಾಗಿದ್ದ ಮೀಸಲಾತಿಯನ್ನು ನ್ಯಾಯಾಲಯದಲ್ಲಿ ಸಮರ್ಥಿಸಿಕೊಳ್ಳುವಲ್ಲಿ ಪ್ರಸ್ತುತ ಕಾಂಗ್ರೆಸ್ ಸರ್ಕಾರದ ಕ್ರಮಗಳ ಬಗ್ಗೆ ಛಲವಾದಿ ನಾರಾಯಣಸ್ವಾಮಿ ಅವರು ಪ್ರಶ್ನೆ ಎತ್ತಿದ್ದಾರೆ.



ಉದಯವಾಹಿನಿ ಚಿತ್ರ

## ಸ್ವಾತಂತ್ರ್ಯ ಹೋರಾಟದ ಧ್ರುವತಾರೆ ಗಾಂಧಿ

**ಉದಯವಾಹಿನಿ, ತ್ಯಾಗರ್ತಿ**

ಮಹಾತ್ಮ ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ಧ್ರುವ ತಾರೆಯಾಗಿ ಭಾರತೀಯರ ಹೃದಯದಲ್ಲಿ ನೆಲೆಸಿದ್ದಾರೆ' ಎಂದು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ವೂಡೇ ಪಿ.ಕೃಷ್ಣ ಹೇಳಿದರು. ಆನಂದಪುರ ಸಮೀಪದ ಯಡೇಹಳ್ಳಿಯ ಜ್ಞಾನ ಸಹ್ಯಾದ್ರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ರಾಜ್ಯಮಟ್ಟದ ಗಾಂಧಿ ತತ್ವ ಪ್ರಣೀತ' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

'ಗಾಂಧೀಜಿ ಸತ್ಯ, ನ್ಯಾಯ, ಸರಳ ಜೀವನ ಹಾಗೂ ದೇಶಭಕ್ತಿಯಿಂದ ಕೋಟ್ಯಂತರ ಭಾರತೀಯರ ಮನಸ್ಸನ್ನು ಸೆಳೆದರು. ಬ್ರಿಟಿಷರ ವಿರುದ್ಧ ಜನರನ್ನು ಸಂಘಟಿಸಲು ದೇಶದಾದ್ಯಂತ ಸಂಚರಿಸಿದ ಸ್ವದೇಶಿ ಆಂದೋಲನ, ಗ್ರಾಮೀಣ ಬದುಕು, ಅಸಹಕಾರ ಚಳವಳಿ, ಸ್ವಾವಲಂಬಿ ಜೀವನದ ಬಗ್ಗೆ ಪ್ರಭಾವ ಬೀರಿದ ಮಹಾನ್ ಶಕ್ತಿಶಾಲಿ ವ್ಯಕ್ತಿಯಾಗಿದ್ದರು' ಎಂದು ಹೇಳಿದರು. ಗಾಂಧೀಜಿಯವರ ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ ಮತ್ತು ಪ್ರೀತಿಯ ಮೌಲ್ಯಗಳು ಈಗಿನ ಸಮಾಜದಲ್ಲಿ ಕ್ಷೀಣಿಸುತ್ತಿದ್ದು, ಯುವಜನತೆಯಲ್ಲಿ ಗಾಂಧಿ ಸಿದ್ಧಾಂತಗಳನ್ನು ಬಿತ್ತಿ ಬೆಳೆಸುವ ಅಗತ್ಯವಿದೆ' ಎಂದು ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಗಣೇಶ್ ಆರ್ ತಿಳಿಸಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗುಡ್ಡಪ್ಪ ಜೋಗಿ ಅವರು ಗಾಂಧಿ ಜಾನಪದ ಕಣ್ಣಲ್ಲಿ' ಎಂಬ ಗೀತ ನಮನ ಕಾರ್ಯಕ್ರಮ ನಡೆಸಿಕೊಟ್ಟರು. ಜ್ಞಾನ ಸಹ್ಯಾದ್ರಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಸುರೇಶ್ ಆರ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಯುವ ಅಧಿಕಾರಿ ಹಾಗೂ ಸಹಾಯಕ ನಿರ್ದೇಶಕರಾದ ಐಶ್ವರ್ಯ ಶ್ರೀನಿವಾಸ್, ಕ್ಷೇತ್ರ ಪ್ರಚಾರ ಸಹಾಯಕರಾದ ಲಕ್ಷ್ಮಿಕಾಂತ ಸಿ.ವಿ., ಕಾರ್ಯನಿರ್ವಾಹಕ ಅಧಿಕಾರಿ ಶಿವಪ್ರಸಾದ್ ಪಟ್ಟಣಗೆರೆ, ಪುರುಷೋತ್ತಮ್ ಎಸ್. ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.




ಉದಯವಾಹಿನಿ ಚಿತ್ರ

### ಕೇವಲ 2 ವರ್ಷ 9 ತಿಂಗಳ ವಯಸ್ಸಿನಲ್ಲಿ 5 ಸಂಸ್ಕೃತ ಶ್ಲೋಕಗಳನ್ನು, 4 ಭಕ್ತಿಗೀತೆಗಳನ್ನು ಸ್ಪಷ್ಟವಾಗಿ ಈ ಬಾಲಕಿ ಗಾಯನ ಮಾಡುತ್ತಾಳೆ

# ಮೂರು ವರ್ಷ ತುಂಬುವ ಮೊದಲೇ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್

**ಉದಯವಾಹಿನಿ, ಬಂಟ್ವಾಳ**

"ಮುದ್ದು ರಾಮನ ಬಂಟ ಹನುಮಂತನೆ" ಎಂದು ಈ ಪುಟಾಣಿ ಹಾಡಿದರೆ, ಸುತ್ತ ಕೇಳುಗರು ಭಕ್ತಿಯಿಂದ ದೇವರಿಗೆ ನಮಿಸುತ್ತಾರೆ. ರಾಮನ ಭಜನೆ, ದೇವಿಯ ಸ್ತುತಿ, ಕಟೀಲು ತಾಯಿಯ ಸ್ಮರಣೆಯನ್ನು ಮಾಡುವ ಈ ಪುಟಾಣಿಗೆ ಹಲವು ಶ್ಲೋಕಗಳು ಕಂಠಪಾಠ. ಕೇವಲ ಎರಡು ವರ್ಷ ಒಂಭತ್ತು ತಿಂಗಳ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ದೈಪಲ ನಿವಾಸಿ ಯಾದವ ಕುಲಾಲ್ ಮತ್ತು ವಿಜಯಲಕ್ಷ್ಮೀ ದಂಪತಿಯ ಪುತ್ರಿ ಪ್ರಾಧ್ಯಾ ವೈ. ಕುಲಾಲ್ ಇದೀಗ ಪುಟ್ಟ ವಯಸ್ಸಿಗೇ ದೊಡ್ಡ ಸಾಧನೆ ಮಾಡಿದ್ದಾಳೆ.

1. ಬಾಲಕಿ ಪ್ರಾಧ್ಯಾ ಕುಲಾಲ್‌ಗೆ ಗರಿ
2. ಅಷ್ಟು ಚಿಕ್ಕ ವಯಸ್ಸಿಗೆ ಭಜನೆ
3. ಈ ಬೆಳವಣಿಗೆಗೆ ಮುಖ್ಯ ಕಾರಣ

ಈಕೆಯ ಶ್ಲೋಕ, ಭಕ್ತಿಗೀತೆ ಗಾಯನ ವೈಭವ ಇದೀಗ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ. ಸ್ಪಷ್ಟವಾಗಿ ಮಾತುಗಳೇ ಹೊರಡದ ಈ ಕಿರಿಯ ವಯಸ್ಸಿನಲ್ಲಿ ಸಂಸ್ಕೃತ ಶ್ಲೋಕಗಳು ಹಾಗೂ ಕನ್ನಡ, ತುಳು ಭಕ್ತಿಗೀತೆಗಳನ್ನು ಕಂಠಪಾಠ ಮಾಡಿ ಸುಶ್ರಾವ್ಯವಾಗಿ ಹಾಡುವ ಮೂಲಕ ಪ್ರಾಧ್ಯಾ ವೈ. ಕುಲಾಲ್ ಪ್ರತಿಷ್ಠಿತ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ (ಐಬಿಆರ್) ಗೌರವಕ್ಕೆ ಪಾತ್ರಳಾಗಿದ್ದಾಳೆ.

**ಭಜನೆ, ಧಾರ್ಮಿಕ ಪರಿಸರ ಪ್ರೇರಣೆ:** ಈ ಕುರಿತು ಮಾತನಾಡಿದ ಪ್ರಾಧ್ಯಾಳ ತಾಯಿ ವಿಜಯಲಕ್ಷ್ಮೀ ತಮ್ಮ ಮಗಳ ಅಸಾಧಾರಣ ಪ್ರತಿಭೆಯ ಕುರಿತು ವಿವರಿಸಿ, "ನಮ್ಮ ಮನೆಯಲ್ಲಿ ಪ್ರತಿದಿನ ಶ್ಲೋಕ ಪಠಣ ಹಾಗೂ ಶುಕ್ರವಾರದಂದು ಭಜನೆ ಮಾಡುತ್ತೇವೆ. ಪ್ರಾಧ್ಯಾಳ ಅಕ್ಕ ಸಾನಿಧ್ಯ 7ನೇ ತರಗತಿ ವಿದ್ಯಾರ್ಥಿನಿಯಾಗಿದ್ದು, ನಿತ್ಯವೂ ಶ್ಲೋಕಗಳನ್ನು ಹೇಳುವುದನ್ನು ಈಕೆ ಗಮನಿಸುತ್ತಿದ್ದಳು. ಜತೆಗೆ, ದೈಪಲದ ಸ್ಥಳೀಯ ಶ್ರೀರಾಮ ಭಜನಾ ಮಂದಿರದಲ್ಲಿ ಬುಧವಾರ ನಡೆಯುವ ಭಜನೆಗಳಿಗೆ ಮಗಳನ್ನು ಕರೆದುಕೊಂಡು ಹೋಗುತ್ತಿದ್ದೆವು. ಕೇವಲ ಒಂದೂವರೆ ವರ್ಷದ ಪ್ರಾಯದಲ್ಲೇ ಅವಳು ತನ್ನಷ್ಟಕ್ಕೇ ತಾನೇ ರಾಗಬದ್ಧವಾಗಿ ಭಜನೆಗಳನ್ನು ಗುನುಗಲು ಆರಂಭಿಸಿದಳು. ಅವಳ ಈ ಅಪೂರ್ವ ನೆನಪಿನ ಶಕ್ತಿಯನ್ನು ಗುರುತಿಸಿದ ಕುಟುಂಬಸ್ಥರು ಹಾಗೂ ಹಿತೈಷಿಗಳು ಪ್ರೋತ್ಸಾಹಿಸಿದ್ದರಿಂದ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಅರ್ಜಿ ಸಲ್ಲಿಸಿದೆವು" ಎಂದು ಹೇಳಿದ್ದಾರೆ.

"ಮಗಳು ಅಷ್ಟು ಚಿಕ್ಕ ವಯಸ್ಸಿಗೆ ಭಜನೆ, ಶ್ಲೋಕಗಳನ್ನು ಕೇಳಿದ ತಕ್ಷಣವೇ ಕಂಠಪಾಠ ಮಾಡಿಕೊಳ್ಳುತ್ತಿದ್ದಳು. ಮನೆಯಲ್ಲಿ ಅಕ್ಕ ಶ್ಲೋಕ ಹೇಳುವಾಗ ಹಾಗೂ ದೇವಸ್ಥಾನದ ಭಜನೆಗಳನ್ನು ಕೇಳಿ ತಾನಾಗಿಯೇ ಹಾಡಲು ಕಲಿತಳು. ಅವಳಲ್ಲಿದ್ದ ಈ ವಿಶೇಷ ನೆನಪಿನ ಶಕ್ತಿಯನ್ನು ನೋಡಿ ಎಲ್ಲರೂ ಪ್ರೋತ್ಸಾಹಿಸಿದರು. ನಮ್ಮ ಮಗಳು ಇಷ್ಟು ಚಿಕ್ಕ ಪ್ರಾಯದಲ್ಲೇ ನಮ್ಮ ಊರಿಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿರುವುದು ನಮಗೆ ಅತೀವ ಸಂತಸ ಮತ್ತು ಹೆಮ್ಮೆ ತಂದಿದೆ" ಎಂದು ಪ್ರಾಧ್ಯಾಳ ತಾಯಿ ವಿಜಯಲಕ್ಷ್ಮೀ ಸಂತಸ ವ್ಯಕ್ತಪಡಿಸಿದ್ದಾರೆ.




ಉದಯವಾಹಿನಿ ಚಿತ್ರ

> ಯಾವುದೇ ಒತ್ತಡವಿಲ್ಲದೆ ಆಕೆಯ ಸ್ವಂತ ಆಸಕ್ತಿಯಿಂದಲೇ ಇಷ್ಟೆಲ್ಲಾ ಶ್ಲೋಕ, ಹಾಡುಗಳನ್ನು ಕಲಿತಿದ್ದಾಳೆ. ಆಕೆಯ ಈ ಸಾಧನೆಗೆ ರಾಷ್ಟ್ರಮಟ್ಟದ ಮನ್ನಣೆ ದೊರೆತಿರುವುದು ನಮ್ಮ ಕುಟುಂಬಕ್ಕೆ ಧನ್ಯತಾಭಾವ ಮೂಡಿಸಿದೆ.
> – ಯಾದವ ಕುಲಾಲ್ , ತಂದೆ

**ಪುಟ್ಟ ಪ್ರಾಯದಲ್ಲೇ ವ್ಯಾಪಕ ಮೆಚ್ಚುಗೆ**

ಪುಟ್ಟ ಪ್ರಾಯದಲ್ಲೇ ಭಕ್ತಿ ಮತ್ತು ಆಧ್ಯಾತ್ಮಿಕ ಸಂಸ್ಕಾರವನ್ನು ರೂಢಿಸಿಕೊಂಡು, ತೊದಲು ನುಡಿಯಲ್ಲೇ ದೇವರ ಸ್ತುತಿಗಳನ್ನು ಪಠಿಸುತ್ತಿರುವ ಈ ಬಾಲ ಪ್ರತಿಭೆ ಪ್ರಾಧ್ಯಾಳಿಗೆ ಸಾರ್ವಜನಿಕ ವಲಯದಿಂದ ವ್ಯಾಪಕ ಮೆಚ್ಚುಗೆಯೂ ವ್ಯಕ್ತವಾಗುತ್ತಿದೆ.

### ಶಿಕಾಗೋ ಪ್ರದೇಶದ ಪ್ರಸಿದ್ಧ ಹಿಂದೂ ದೇವಾಲಯದಲ್ಲಿ ನಡೆದ ಘಟನೆ– ಕೊನೆ ಕ್ಷಣದಲ್ಲಿ ಗನ್ ಜಾಮ್, ಸಂಚು ರೂಪಿಸಿದ್ದ 19 ವರ್ಷದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ

# ಭಾರತೀಯರ ಸಾಮೂಹಿಕ ಹತ್ಯೆಗೆ ಸಂಚು: ರೈಫಲ್ ಹಿಡಿದು ಅಮೆರಿಕದ ಹಿಂದೂ ದೇವಸ್ಥಾನಕ್ಕೆ ನುಗ್ಗಿದ್ದ ಶೂಟರ್

**ವಾಷಿಂಗ್ಟನ್:** ಅಮೆರಿಕದಲ್ಲಿ ಭಾರತೀಯ ಮೂಲದ ಜನರನ್ನು ಗುರಿಯಾಗಿಸಿಕೊಂಡು ಸಾಮೂಹಿಕ ಗುಂಡಿನ ದಾಳಿ ನಡೆಸಲು ಸಂಚು ರೂಪಿಸಿದ್ದ 19 ವರ್ಷದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ಶಿಕಾಗೋ ಪ್ರದೇಶದ ಪ್ರಸಿದ್ಧ ಹಿಂದೂ ದೇವಾಲಯವೊಂದನ್ನು ಗುರಿಯಾಗಿಸಿಕೊಂಡು ದಾಳಿಗೆ ಮುಂದಾಗಿದ್ದ ಈತನ ರೈಫಲ್ ಕೊನೆಯ ಕ್ಷಣದಲ್ಲಿ ಕೈಕೊಟ್ಟಿದ್ದರಿಂದ ನೂರಾರು ಜನರ ಪ್ರಾಣ ಉಳಿದಂತಾಗಿದೆ.

1. ಕೊನೆಯ ಕ್ಷಣದಲ್ಲಿ ಕೈಕೊಟ್ಟ ರೈಫಲ್
2. ನೂರಾರು ಜನರ ಪ್ರಾಣ ಉಳಿದಂತಾಗಿದೆ
3. ಹಿಂದೂ ಸ್ಥಳ ಗುರಿಯಾಗಿಸಿ ಕೊಂಡಿದ್ದ ಆರೋಪಿ

ಇಲಿನಾಯ್ಸ್‌ನ ಅರೋರಾ ಪ್ರದೇಶದಲ್ಲಿರುವ ಹಿಂದೂ ಆರಾಧನಾ ಸ್ಥಳವನ್ನು ಗುರಿಯಾಗಿಸಿಕೊಂಡಿದ್ದ ಆರೋಪಿ, ಭಾರತೀಯ ಮೂಲದ ಜನರ ವಿರುದ್ಧ ಹಿಂಸಾಚಾರಕ್ಕೆ ಪ್ರಚೋದಿಸುವ ವಿಚಾರಗಳನ್ನು ಒಳಗೊಂಡ ಪ್ರಣಾಳಿಕೆಯನ್ನು ಹೊಂದಿದ್ದ ಎನ್ನಲಾಗಿದೆ.

ತನಿಖೆಯ ವೇಳೆ ರೈಫಲ್, ಗುಂಡು ತುಂಬಿದ ಮ್ಯಾಗಜೀನ್‌ಗಳು ಹಾಗೂ ದಾಳಿಗೆ ಬಳಸಬಹುದಾದ ಇತರ ಉಪಕರಣಗಳು ಆತನ ಮನೆಯಲ್ಲಿ ಪತ್ತೆಯಾಗಿವೆ. ಆರೋಪಿ ದಾಳಿ ನಡೆಸಲು ಉದ್ದೇಶಿಸಿದ್ದ ನಿಖರ ಸ್ಥಳದ ಕುರಿತು ತನಿಖೆ ಮುಂದುವರಿದಿದ್ದು, ಘಟನೆಯ ಹಿಂದೆ ಇದ್ದ ಉದ್ದೇಶ ಮತ್ತು ಸಂಚಿನ ಸಂಪೂರ್ಣ ವಿವರಗಳನ್ನು ಪತ್ತೆಹಚ್ಚಲು ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಪಲಾಟೈನ್ ನಿವಾಸಿ ಅಲೆಕ್ಸಾಂಡ್ರೋಸ್ ಪಪೊರಾಕಿಸ್ ಬಂಧಿತ ಆರೋಪಿ. ಅಮೆರಿಕದಲ್ಲಿ ನವರಾತ್ರಿ ಸೇರಿದಂತೆ ಹಿಂದೂಗಳ ಹಬ್ಬದ ಋತು ಆರಂಭವಾಗಿರುವ ಸಂದರ್ಭದಲ್ಲಿ ಈ ಘಟನೆ ಬೆಳಕಿಗೆ ಬಂದಿದೆ. ಇದಕ್ಕೂ ಎರಡು ವಾರಗಳ ಹಿಂದೆ ಓಹಿಯೋದ ರಿಚ್ಮಂಡ್ ಹೈಟ್ಸ್‌ನಲ್ಲಿರುವ ಶ್ರೀ ಸ್ವಾಮಿನಾರಾಯಣ ವಡ್ತಾಲ್ ಧಾಮ್ ಹಿಂದೂ ಮಂದಿರವನ್ನು ಧ್ವಂಸಗೊಳಿಸಲಾಗಿತ್ತು.

ಬುಧವಾರ ರೋಲಿಂಗ್ ಮೆಡೋಸ್‌ನ ಕುಕ್ ಕೌಂಟಿ ಮೂರನೇ ಮುನ್ಸಿಪಲ್ ಜಿಲ್ಲಾ ನ್ಯಾಯಾಲಯಕ್ಕೆ ಪಪೊರಾಕಿಸ್‌ನನ್ನು ಹಾಜರುಪಡಿಸಲಾಗಿದ್ದು, ನ್ಯಾಯಾಧೀಶರು ಆತನನ್ನು ನ್ಯಾಯಾಂಗ ಬಂಧನದಲ್ಲಿಡಲು ಆದೇಶಿಸಿದ್ದಾರೆ. ಮುಂದಿನ ವಿಚಾರಣೆ ಅಕ್ಟೋಬರ್ 30ರಂದು ನಡೆಯಲಿದೆ.





### ತನಿಖಾಧಿಕಾರಿಗಳಿಂದ ಮಾಹಿತಿ

**ಆರೋಪಿ ಸಾಮೂಹಿಕ ಗುಂಡಿನ ದಾಳಿ ನಡೆಸುವ ಯೋಜನೆಯನ್ನು ವಿವರಿಸುವ ದಾಖಲೆಯೊಂದನ್ನು ದೂರುದಾರನೊಂದಿಗೆ ಹಂಚಿಕೊಂಡಿದ್ದ ಎನ್ನಲಾಗಿದೆ. ಇದರೊಂದಿಗೆ ರೈಫಲ್, ರೈಫಲ್ ಮ್ಯಾಗಜೀನ್‌ಗಳು, ದೇಹದ ರಕ್ಷಣಾ ಕವಚ ಹಾಗೂ ಇತರ ಯುದ್ಧತಂತ್ರದ ಉಪಕರಣಗಳ ಚಿತ್ರಗಳನ್ನೂ ಕಳುಹಿಸಿದ್ದ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.**

ಪಲಾಟೈನ್‌ನ ಟ್ಯಾಕೋ ಬೆಲ್‌ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದ ಪಪೊರಾಕಿಸ್ ಸಾಮೂಹಿಕ ಗುಂಡಿನ ದಾಳಿಗೆ ಸಂಚು ರೂಪಿಸುತ್ತಿದ್ದಾನೆ ಎಂದು ವ್ಯಕ್ತಿಯೊಬ್ಬರು ದೂರು ನೀಡಿದ ಬಳಿಕ ಪೊಲೀಸರು ತನಿಖೆ ಆರಂಭಿಸಿದ್ದರು.

ತನಿಖೆಯ ವೇಳೆ ಸಂಗ್ರಹಿಸಿದ ಮಾಹಿತಿಯ ಆಧಾರದಲ್ಲಿ, ಅಕ್ಟೋಬರ್ 11ರ ಭಾನುವಾರ ಅರೋರಾ ಪ್ರದೇಶದಲ್ಲಿರುವ ಹಿಂದೂ ದೇವಾಲಯವೊಂದನ್ನು ಗುರಿಯಾಗಿಸಿಕೊಂಡು ಆರೋಪಿ ದಾಳಿ ನಡೆಸಲು ಯೋಜಿಸಿದ್ದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಆದರೆ, ಆತ ದಾಳಿ ನಡೆಸಲು ಉದ್ದೇಶಿಸಿದ್ದ ನಿಖರ ಸ್ಥಳದ ಕುರಿತು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ನಡುವೆ ದಾಳಿಗೆ ಸಂಚು ರೂಪಿಸಿದ್ದ ಆರೋಪಿ, ಭಾನುವಾರ ವಿಶೇಷ ದಿನವಾಗಲಿದೆ ಎಂದು ಪಪೊರಾಕಿಸ್ ತನ್ನ ಟ್ಯಾಕೋ ಬೆಲ್ ಸಹೋದ್ಯೋಗಿಗಳಿಗೆ ಹೇಳಿದ್ದ ಎನ್ನಲಾಗಿದೆ. ಅಂದು ಬೆಳಿಗ್ಗೆ ಸಹೋದ್ಯೋಗಿಯೊಬ್ಬರಿಗೆ ಕರೆ ಮಾಡಿದ ಆತ, ತನ್ನ ಬಂದೂಕು ಜಾಮ್ ಆಗಿದೆ ಎಂದು ತಿಳಿಸಿದ್ದ. ಬಳಿಕ ಯಾರ ಕಣ್ಣಿಗೂ ಬೀಳದೆ ಅಲ್ಲಿಂದ ವೇಗವಾಗಿ ಹೊರಟಿದ್ದ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಈ ಆರೋಪಿಯನ್ನು ಯಾವುದೇ ಕಾರಣಕ್ಕೂ ಕಡಿಮೆ ಅಂದಾಜು ಮಾಡಲು ಸಾಧ್ಯವಿಲ್ಲ. ಧಾರ್ಮಿಕ ಆರಾಧನಾ ಸ್ಥಳಗಳ ರಕ್ಷಣೆ ಕಾನೂನು ಜಾರಿ ಸಂಸ್ಥೆಗಳ ಪ್ರಮುಖ ಆದ್ಯತೆಯಾಗಿದೆ ಎಂದು ಪಲಾಟೈನ್ ಪೊಲೀಸ್ ಮುಖ್ಯಸ್ಥ ವಿಲಿಯಂ ನಾರ್ಡ್ ಹೇಳಿದ್ದಾರೆ.

ಪಲಾಟೈನ್ ಪೊಲೀಸರು ಆರೋಪಿ ಬಳಸಿದ್ದ ಎಲೆಕ್ಟ್ರಾನಿಕ್ ಸಂವಹನ ದಾಖಲೆಗಳು ಹಾಗೂ ಆತನ ಹೆಸರಿನಲ್ಲಿ ಸಿದ್ಧಪಡಿಸಲಾಗಿದೆ ಎನ್ನಲಾದ 'Why I Fought: A.K.A.: ಎಂಬ ದಾಖಲೆಯನ್ನು ಪರಿಶೀಲಿಸಿದ್ದಾರೆ.

ಅದರಲ್ಲಿ ಬಿಳಿಯರ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಹಾಗೂ ಉಗ್ರವಾದಿ ಸಿದ್ಧಾಂತಗಳನ್ನು ವ್ಯಕ್ತಪಡಿಸುವ ಹೇಳಿಕೆಗಳಿದ್ದವು. ದಕ್ಷಿಣ ಏಷ್ಯಾ ಮೂಲದ ಜನರು, ಅದರಲ್ಲೂ ಭಾರತೀಯ ಮೂಲದವರ ವಿರುದ್ಧ ಹಿಂಸಾಚಾರ ನಡೆಸುವ ಉಲ್ಲೇಖಗಳೂ ಇದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

ಪಲಾಟೈನ್ ಮತ್ತು ಮೌಂಟ್ ಪ್ರಾಸ್ಪೆಕ್ಟ್ ಪೊಲೀಸ್ ಇಲಾಖೆಗಳು ತಕ್ಷಣ ಸಮನ್ವಯ ಸಾಧಿಸಿ ಕಾರ್ಯಾಚರಣೆ ನಡೆಸಿದ್ದವು. ಅಕ್ಟೋಬರ್ 11ರ ಸಂಜೆ ಆರೋಪಿ ತನ್ನ ಮನೆಯಿಂದ ಹೊರಬರುತ್ತಿದ್ದಾಗ ಆತನನ್ನು ಪತ್ತೆಹಚ್ಚಿ ವಶಕ್ಕೆ ಪಡೆಯಲಾಯಿತು.

ಬಳಿಕ ಆತನ ನಿವಾಸದಲ್ಲಿ ಶೋಧ ನಡೆಸಿದ ಪೊಲೀಸರು ಒಂದು ರೈಫಲ್, ಗುಂಡು ತುಂಬಿದ್ದ ಹಲವು ರೈಫಲ್ ಮ್ಯಾಗಜೀನ್‌ಗಳು, ನೂರಾರು ಹೆಚ್ಚುವರಿ ರೈಫಲ್ ಗುಂಡುಗಳು, ಯುದ್ಧತಂತ್ರದ ಉಪಕರಣಗಳು ಹಾಗೂ ತನಿಖೆಗೆ ಸಂಬಂಧಿಸಿರಬಹುದಾದ ಇತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಬಿಳಿಯರ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಉಗ್ರವಾದಿ ಸಿದ್ಧಾಂತಗಳಿಗೆ ಸಂಬಂಧಿಸಿದ ಚಿತ್ರವಿರುವ ಪ್ಯಾಚ್ ಹೊಂದಿದ್ದ ದೇಹದ ರಕ್ಷಣಾ ಕವಚವನ್ನೂ ಪೊಲೀಸರು ಪತ್ತೆಹಚ್ಚಿದ್ದಾರೆ.

## ಸಿಇಸಿ ವಿರುದ್ಧ ಪ್ರತಿಭಟನೆಗೆ ಮೊದಲ ಬಾರಿಗೆ ಕೈ ಜೋಡಿಸಿದ ವಿಜಯ್ ನೇತೃತ್ವದ ಟಿವಿಕೆ

**ಚೆನ್ನೈ:** ಸಿಇಸಿ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ಕೆಳಗಿಳಿಸಬೇಕು ಮತ್ತು ಮತ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ರದ್ದತಿಗೆ ಆಗ್ರಹಿಸಿ ಇಂಡಿಯಾ ಒಕ್ಕೂಟ ನಡೆಸಿರುವ ಪ್ರತಿಭಟನೆಗೆ ತಮಿಳುನಾಡು ಮುಖ್ಯಮಂತ್ರಿ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ ಪಕ್ಷ ಇದೇ ಮೊದಲ ಬಾರಿಗೆ ಕೈಜೋಡಿಸಿದೆ.

ತಮಿಳುನಾಡಿನಲ್ಲಿ ಇಂಡಿಯಾ ಒಕ್ಕೂಟ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮೊದಲ ಬಾರಿಗೆ ತಮಿಳಗ ವೆಟ್ರಿ ಕಳಗಂ ನಾಯಕರು ಭಾಗಿಯಾದರು.

ಚುನಾವಣಾ ಪಟ್ಟಿಗಳಲ್ಲಿನ ಅಕ್ರಮಗಳ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರ ರಾಜಧಾನಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ನಡುವೆ, ಕಾಂಗ್ರೆಸ್ ಸಂಸದ ಬಿ. ಮಾಣಿಕಂ ಟ್ಯಾಗೋರ್ ಮತ್ತು ತಮಿಳುನಾಡು ಕಾಂಗ್ರೆಸ್ ಸಮಿತಿ ನೇತೃತ್ವದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಿ ಅಭಿಯಾನ ನಡೆಸುತ್ತಿದ್ದು, ಈ ಪ್ರತಿಭಟನೆಯಲ್ಲಿ ಮೈತ್ರಿಕೂಟದ ಏಳು ಪಕ್ಷಗಳ ನಾಯಕರು ಭಾಗವಹಿಸಿದ್ದರು.



ಇಂಡಿಯಾ ಒಕ್ಕೂಟದ ನಾಯಕರು ಅಕ್ಟೋಬರ್ 3 ಮುಖ್ಯ ಚುನಾವಣಾ ಆಯುಕ್ತರನ್ನು ಹುದ್ದೆಯಿಂದ ತೆಗೆದುಹಾಕುವಂತೆ ಆಗ್ರಹಿಸಿ ದೇಶಾದ್ಯಂತ ಪ್ರತಿಭಟನೆ ನಡೆಸಿದ್ದಾರೆ. ಈ ಅಭಿಯಾನದಲ್ಲಿ ಟಿವಿಕೆ ಭಾಗಿಯಾಗುವ ಮೂಲಕ ಗಮನ ಸೆಳೆದಿದೆ. ತಮಿಳುನಾಡಿನಲ್ಲಿ ಟಿವಿಕೆ ಸರ್ಕಾರ ರಚನೆಗೆ ಕಾಂಗ್ರೆಸ್ ಬೆಂಬಲ ನೀಡಿದೆ.

ಪ್ರತಿಭಟನೆಯಲ್ಲಿ ಟಿವಿಕೆ ನಾಯಕ ಮತ್ತು ಶಾಲಾ ಶಿಕ್ಷಣ ಸಚಿವ ಎ. ರಾಜಮೋಹನ್, ವಿದುತಲೈ ಚಿರುತೈಗಲ್ ಕಚ್ಚಿ ಅಧ್ಯಕ್ಷ ಮತ್ತು ಸಂಸದ ತೊಳ್ ತಿರುಮಾವಲವನ್, ಮತ್ತು ಮರುಮಲಾರ್ಚಿ ದ್ರಾವಿಡ ಮುನ್ನೇತ್ರ ಕಳಗಂ ಪ್ರಧಾನ ಕಾರ್ಯದರ್ಶಿ ವೈಕೊ ಭಾಗಿಯಾದರು.

## ಶಾಲಾ ಚಾವಣಿ ಕುಸಿದು 17 ಮಕ್ಕಳು ಸಾವು

**ಪೇಶಾವರ:** ಪಾಕಿಸ್ತಾನದ ಖೈಬರ್ ಪಖ್ತೂಂಖ್ವಾ ಪ್ರಾಂತ್ಯದ ರಾಜಧಾನಿ ಪೇಶಾವರದ ದಿರ್ ಕಾಲೋನಿ ಪ್ರದೇಶದಲ್ಲಿ ಗುರುವಾರ ಖಾಸಗಿ ಶಾಲೆಯೊಂದರ ಮೇಲ್ಛಾವಣಿ ಇದ್ದಕ್ಕಿದ್ದಂತೆ ಕುಸಿದು ಬಿದ್ದಿದ್ದು, ದುರ್ಘಟನೆಯಲ್ಲಿ ಕನಿಷ್ಠ 17 ಮಕ್ಕಳು ಹಾಗೂ ಓರ್ವ ಮಹಿಳಾ ಶಿಕ್ಷಕಿ ದುರ್ಮರಣಕ್ಕೀಡಾಗಿದ್ದಾರೆ. ದುರಂತದಲ್ಲಿ 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ತೀವ್ರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಭೀತಿ ಎದುರಾಗಿದೆ. ಪೇಶಾವರದ ಒಳಭಾಗದಲ್ಲಿರುವ ದಿರ್ ಕಾಲೋನಿಯಲ್ಲಿ ಈ ದುರಂತ ಸಂಭವಿಸಿದೆ ಎಂದು ಪೇಶಾವರ ಕ್ಯಾಪಿಟಲ್ ಸಿಟಿ ಪೊಲೀಸ್ ಮುಖ್ಯಸ್ಥ ಮಿಯಾನ್ ಸಯೀದ್ ತಿಳಿಸಿದ್ದಾರೆ. ಘಟನೆಯಲ್ಲಿ 17 ವಿದ್ಯಾರ್ಥಿಗಳು ಹಾಗೂ ಓರ್ವ ಶಿಕ್ಷಕಿ ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಹೇಳಿದ್ದಾರೆ.

ಗಾಯಾಳುಗಳಿಗೆ ಚಿಕಿತ್ಸೆ ನೀಡಲು ಲೇಡಿ ರೀಡಿಂಗ್ ಆಸ್ಪತ್ರೆಯಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ ಎಂದು ಆಸ್ಪತ್ರೆ ವಕ್ತಾರ ಮೊಹಮ್ಮದ್ ಆಸಿಮ್ ತಿಳಿಸಿದ್ದಾರೆ.

ಮೃತಪಟ್ಟ ಮಕ್ಕಳೆಲ್ಲರೂ 13 ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು, ಗಾಯಗೊಂಡ 25 ಮಕ್ಕಳನ್ನು ವಿವಿಧ ವೈದ್ಯಕೀಯ ಕೇಂದ್ರಗಳಿಗೆ ದಾಖಲಿಸಲಾಗಿದೆ ಎಂದು ರಕ್ಷಣಾ ಕಾರ್ಯಾಚರಣೆ ಸಿಬ್ಬಂದಿ ತಿಳಿಸಿದ್ದಾರೆ.

## ಆರ್‌ಎಸ್‌ಎಸ್ ವಿಜಯದಶಮಿಗೆ ಮಾಜಿ ಉಪರಾಷ್ಟ್ರಪತಿ ಜಗದೀಪ್ ಧಂಖರ್‌ಗೆ ಆಹ್ವಾನ! ಕಾಂಗ್ರೆಸ್ ವ್ಯಂಗ್ಯ

**ನಾಗ್ಪುರ:** ಮುಂದಿನ ವಾರ ನಾಗ್ಪುರದಲ್ಲಿ ನಡೆಯಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ವಿಜಯದಶಮಿ ಕಾರ್ಯಕ್ರಮಕ್ಕೆ ಮಾಜಿ ಉಪರಾಷ್ಟ್ರಪತಿ ಜಗದೀಪ್ ಧಂಖರ್ ಅವರನ್ನು ಆಹ್ವಾನಿಸಲಾಗಿದೆ. ಸಂಘಟನೆಯ ಸ್ಥಾಪನಾ ದಿನದ ನೆನಪಿಗಾಗಿ ಪ್ರತಿ ವರ್ಷ ವಿಜಯದಶಮಿಯಂದು ಆಯೋಜಿಸಲಾಗುವ ಈ ಕಾರ್ಯಕ್ರಮಕ್ಕೆ, ಅತಿಥಿಯಾಗಿ ಪಾಲ್ಗೊಳ್ಳುವಂತೆ ಧಂಖರ್ ಅವರಿಗೆ ಆಹ್ವಾನ ನೀಡಲಾಗಿದೆ ಎಂದು ಆರ್‌ಎಸ್‌ಎಸ್ ತಿಳಿಸಿದೆ. ಅಕ್ಟೋಬರ್ 20 ರಂದು ನಾಗ್ಪುರದ ರೇಶಿಮ್‌ಬಾಗ್ ಮೈದಾನದಲ್ಲಿ ನಡೆಯಲಿರುವ ಈ ವರ್ಷದ ಕಾರ್ಯಕ್ರಮವು ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷದ ಸಮಾರೋಪವಾಗಿದೆ. ಈ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಭಾಷಣ ಮಾಡಲಿದ್ದು, 'ದೈನಿಕ ಜಾಗರಣ್' ಪತ್ರಿಕೆಯ ಪ್ರಧಾನ ಸಂಪಾದಕ ಸಂಜಯ್ ಗುಪ್ತಾ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಸಂಘವು ತಿಳಿಸಿದೆ. "ಸಂಘದ ಶತಮಾನೋತ್ಸವ ವರ್ಷದ ಸಮಾರೋಪವನ್ನು ಸೂಚಿಸುವ ಈ ವರ್ಷದ ವಿಜಯದಶಮಿ ಕಾರ್ಯಕ್ರಮಕ್ಕೆ, ಮಾಜಿ ಉಪರಾಷ್ಟ್ರಪತಿ ಜಗದೀಪ್ ಧಂಖರ್ ಮತ್ತು ಮಧ್ಯ-ಪಶ್ಚಿಮ ಭಾರತ ಪ್ರದೇಶಕ್ಕಾಗಿ ಇಸ್ರೇಲ್‌ನ ಕಾನ್ಸುಲ್ ಜನರಲ್ ಆಗಿರುವ ಯನಿವ್ ರೆವಾಚ್ ಅವರನ್ನು ಆಹ್ವಾನಿಸಲಾಗಿದೆ" ಎಂದು ಆರ್‌ಎಸ್‌ಎಸ್ ಹೇಳಿದೆ.

## ಅಂಕಿತಾ ಭಂಡಾರಿ ಹತ್ಯೆ ಪ್ರಕರಣ; ಇಂಡಿಯಾ ಗೇಟ್ ಮುಂದೆ ಪ್ರತಿಭಟಿಸುತ್ತಿದ್ದ ಪೋಷಕರ ಬಂಧನ, ಬಿಡುಗಡೆ

**ನವದೆಹಲಿ:** 2022ರಲ್ಲಿ ಉತ್ತರಾಖಂಡದಲ್ಲಿ ಹತ್ಯೆಗೀಡಾದ 19 ವರ್ಷದ ಅಂಕಿತಾ ಭಂಡಾರಿ ಅವರ ಪೋಷಕರು ಇಂಡಿಯಾ ಗೇಟ್ ಬಳಿ ಪ್ರತಿಭಟನೆ ನಡೆಸುತ್ತಿದ್ದಾಗ ಪೊಲೀಸರು ವಶಕ್ಕೆ ಪಡೆದ ಕೆಲವೇ ಗಂಟೆಗಳಲ್ಲಿ ಬಿಡುಗಡೆ ಮಾಡಿದ್ದಾರೆ.

ಪೋಷಕರು ಬುಧವಾರ ಸಂಜೆ ಇಂಡಿಯಾ ಗೇಟ್ ಮುಂದೆ ಪ್ರತಿಭಟನೆ ಆರಂಭಿಸಿದ್ದರು. ಗುರುವಾರ ನಸುಕಿನ ಜಾವ ಅವರನ್ನು ವಶಕ್ಕೆ ಪಡೆದ ಪೊಲೀಸರು ನಂತರದಲ್ಲಿ ಬಿಡುಗಡೆ ಮಾಡಿದ್ದಾರೆ.

ಈ ಪ್ರಕರಣದಲ್ಲಿ ವಿಐಪಿ ಒಬ್ಬರ ಕೈವಾಡವಿರುವ ಆರೋಪವಿದ್ದು, ಅಂಕಿತಾ ಅವರ ಕುಟುಂಬ ಮತ್ತು ಕಾರ್ಯಕರ್ತರು ಪದೇ ಪದೇ ಬಿಜೆಪಿ ನಾಯಕ ಗೌತಮ್ ಅವರ ಹೆಸರನ್ನು ಈ ವಿಷಯದಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಅವರನ್ನು ಸೋಮವಾರ ಸಿಕ್ಕಿಂ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಸಿಬಿಐ ತನಿಖೆ ಪೂರ್ಣಗೊಳ್ಳುವವರೆಗೂ, ದುಷ್ಯಂತ್ ಕುಮಾರ್ ಗೌತಮ್ ಅವರನ್ನು ಸಿಕ್ಕಿಂ ರಾಜ್ಯಪಾಲರನ್ನಾಗಿ ನೇಮಿಸಿರುವುದನ್ನು ತಡೆಹಿಡಿಯಬೇಕೆಂದು ಪೋಷಕರು ಒತ್ತಾಯಿಸುತ್ತಿದ್ದಾರೆ.





## ಕ್ಲೈಮ್ ತಿರಸ್ಕರಿಸಿದ್ದ ಇನ್ಶೂರೆನ್ಸ್ ಕಂಪನಿಗೆ ಮುಖಭಂಗ: 14 ವರ್ಷದ ಬಳಿಕ ಮಾಲೀಕನಿಗೆ ಸಿಕ್ತು 1.4 ಕೋಟಿ ರೂ.!

**ಮುಂಬೈ:** ಕೇವಲ ಟೈರ್ ಪಂಕ್ಚರ್ ಆದ ಕಾರಣಕ್ಕೆ ಇನ್ಶೂರೆನ್ಸ್ ಕಂಪನಿಯು ಕ್ಲೈಮ್ ನಿರಾಕರಿಸಿದ್ದರ ವಿರುದ್ಧ ಬಿಎಂಡಬ್ಲ್ಯು ಕಾರು ಮಾಲೀಕರು ನಡೆಸಿದ 14 ವರ್ಷಗಳ ಸುದೀರ್ಘ ಕಾನೂನು ಹೋರಾಟದಲ್ಲಿ ಕೊನೆಗೂ ಜಯ ಸಿಕ್ಕಿದೆ. ಮಹಾರಾಷ್ಟ್ರದ ಗ್ರಾಹಕ ಆಯೋಗವು ಕಾರಿನ ಮಾಲೀಕರಾದ ರವಿಕಾಂತ್ ಪಾಟೀಲ್ ಅವರಿಗೆ ಕಾರಿನ ಒಟ್ಟು ವಿಮಾ ಮೌಲ್ಯವಾದ 70 ಲಕ್ಷವನ್ನು ಪಾವತಿಸುವಂತೆ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಗೆ ಆದೇಶಿಸಿದೆ. ಈ ಮೂಲಕ ಬಡ್ಡಿ ಮತ್ತು ಇತರ ಪರಿಹಾರಗಳನ್ನು ಸೇರಿಸಿದರೆ ಮಾಲೀಕರಿಗೆ ಸಿಗಲಿರುವ ಒಟ್ಟು ಮೊತ್ತ ಸುಮಾರು 1.4 ಕೋಟಿಗೆ ತಲುಪಲಿದೆ.

**ಅಸಲಿಗೆ ಅಂದು ರಾತ್ರಿ ಆಗಿದ್ದೇನು?** 2012ರ ಮಾರ್ಚ್ 8ರಂದು ಕಾರು ಮಾಲೀಕರಾದ ರವಿಕಾಂತ್ ಪಾಟೀಲ್ ಅವರು ತಮ್ಮ ಬಿಎಂಡಬ್ಲ್ಯು ಕಾರಿನಲ್ಲಿ ಮಹಾರಾಷ್ಟ್ರದ ಧುಳೆಡ್ ಹೆದ್ದಾರಿ ಬಳಿ ಪ್ರಯಾಣಿಸುತ್ತಿದ್ದಾಗ ತಡರಾತ್ರಿ ಕಾರಿನ ಟೈರ್ ಪಂಕ್ಚರ್ ಆಗಿತ್ತು. ಆ ವೇಳೆ, ನಿರ್ಜನ ಪ್ರದೇಶ ಹಾಗೂ ತಡರಾತ್ರಿಯಾಗಿದ್ದರಿಂದ ಯಾವುದೇ ಮೆಕ್ಯಾನಿಕ್ ಸಿಗಲಿಲ್ಲ. ಸುರಕ್ಷತೆಯ ದೃಷ್ಟಿಯಿಂದ ಅವರು ಕಾರನ್ನು ರಸ್ತೆ ಬದಿಯಲ್ಲಿ ಸುರಕ್ಷಿತವಾಗಿ ಪಾರ್ಕ್ ಮಾಡಿ, ಡೋರ್ ಮತ್ತು ವಿಂಡೋಗಳನ್ನು ಸರಿಯಾಗಿ ಲಾಕ್ ಮಾಡಿ, ಮತ್ತೊಂದು ವಾಹನದಲ್ಲಿ ಮನೆಗೆ ಮರಳಿದರು. ಆದರೆ ಮರುದಿನ ಬೆಳಗ್ಗೆ ಅವರು ಗಾಡಿ ಪಾರ್ಕ್ ಮಾಡಿದ ಸ್ಥಳಕ್ಕೆ ಬಂದು ನೋಡಿದಾಗ, ಅವರ ಬಿಎಂಡಬ್ಲ್ಯು ಕಾರು ನಿಗೂಢವಾಗಿ ಸಂಪೂರ್ಣ ಸುಟ್ಟು ಕರಕಲಾಗಿತ್ತು. ಕಾರು ಮಾಲೀಕರು ವಿಮೆಗಾಗಿ ಅರ್ಜಿ ಸಲ್ಲಿಸಿದಾಗ, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯು ಕ್ಲೈಮ್ ಅನ್ನು ತಿರಸ್ಕರಿಸಿತು. "ಕಾರನ್ನು ರಸ್ತೆ ಬದಿಯಲ್ಲಿ ಯಾರೂ ಇಲ್ಲದೆ ಹಾಗೇ ಬಿಟ್ಟು ಹೋಗಿರುವುದು ಪಾಲಿಸಿಯ ನಿಯಮಗಳ ಉಲ್ಲಂಘನೆಯಾಗಿದೆ. ಮುಂದಾಗಬಹುದಾದ ನಷ್ಟವನ್ನು ತಡೆಯಲು ಮಾಲೀಕರು ಸೂಕ್ತ ಎಚ್ಚರಿಕೆ ವಹಿಸಿಲ್ಲ" ಎಂದು ಕಂಪನಿ ವಾದಿಸಿತು. ಇದರ ವಿರುದ್ಧ ರವಿಕಾಂತ್ ಪಾಟೀಲ್ ಅವರು ಗ್ರಾಹಕ ಆಯೋಗದ ಮೆಟ್ಟಿಲೇರಿದರು. 14 ವರ್ಷಗಳ ಸುದೀರ್ಘ ವಿಚಾರಣೆಯ ಬಳಿಕ ಆಯೋಗವು ಇನ್ಶೂರೆನ್ಸ್ ಕಂಪನಿಗೆ ತಪರಾಕಿ ನೀಡಿ, ತಡರಾತ್ರಿಯಲ್ಲಿ ಹೆದ್ದಾರಿಯಲ್ಲಿ ವಾಹನ ಕೆಟ್ಟು ನಿಂತಾಗ ವಾಹನವನ್ನು ಕಾಯುವುದಕ್ಕಿಂತ, ಮಾಲೀಕರ ಹಾಗೂ ಚಾಲಕನ ವೈಯಕ್ತಿಕ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ಕೇವಲ ಕಾರನ್ನು ಕಾಯಲು ನಿರ್ಜನ ಪ್ರದೇಶದಲ್ಲಿ ಜೀವವನ್ನು ಅಪಾಯಕ್ಕೆ ಸಿಲುಕಿಸಲು ಸಾಧ್ಯವಿಲ್ಲ. ಜೊತೆಗೆ, ಮಾಲೀಕರು ಕಾರನ್ನು ರಸ್ತೆ ಬದಿ ಪಾರ್ಕ್ ಮಾಡಿ, ಲಾಕ್ ಮಾಡಿ ಹೋಗಿದ್ದರಿಂದ ಅವರು ತಮ್ಮ ಮಟ್ಟಿಗೆ ಅಗತ್ಯ ಮುನ್ನೆಚ್ಚರಿಕೆ ವಹಿಸಿದ್ದರು. ಕಾರನ್ನು ಹಾಗೇ ಬಿಟ್ಟು ಹೋದದ್ದಕ್ಕೂ, ಕಾರಿಗೆ ಬೆಂಕಿ ಬಿದ್ದದ್ದಕ್ಕೂ ನೇರ ಸಂಬಂಧವಿದೆ ಎಂದು ಕಂಪನಿ ಸಾಬೀತುಪಡಿಸಿಲ್ಲ. ಹಾಗಾಗಿ, ನ್ಯಾಯಾಲಯವು ವಿಮಾ ಕಂಪನಿಯ ನಡೆ ತಪ್ಪು ಎಂದು ತೀರ್ಪು ನೀಡಿ, ಮಾಲೀಕರಿಗೆ ಭರ್ಜರಿ ಪರಿಹಾರ ಘೋಷಿಸಿದೆ.

### ಕಬ್ಬಿಗೆ ಬೆಂಬಲ ಬೆಲೆ, ಸಕ್ಕರೆಯ ಕನಿಷ್ಠ ಮಾರಾಟ ದರ ಹೆಚ್ಚಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಸಭೆಯಲ್ಲಿ ರೈತರ ಮುಖಂಡರ ಆಗ್ರಹ

# ತೀವ್ರಗೊಂಡ ಕಬ್ಬು ಬೆಳೆಗಾರರ ಪ್ರತಿಭಟನೆ: ರಮೇಶ್ ಚಂದ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ ಕೇಂದ್ರ

**ನವದೆಹಲಿ:** ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಶೀಲಿಸಿ, ಸೂಕ್ತ ಕ್ರಮಗಳನ್ನು ಶಿಫಾರಸು ಮಾಡಲು ಕೇಂದ್ರ ಸರ್ಕಾರವು ನೀತಿ ಆಯೋಗದ ಮಾಜಿ ಸದಸ್ಯ ರಮೇಶ್ ಚಂದ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿಯೊಂದನ್ನು ರಚಿಸಿದೆ.

ವಿಶೇಷವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಕಬ್ಬು ಬೆಳೆಗಾರರ ಪ್ರತಿನಿಧಿಗಳ ಜೊತೆ ಅ.12 ರಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಕೇಂದ್ರ ಆಹಾರ ಸಚಿವ ಪ್ರಲ್ಹಾದ್ ಜೋಶಿ ಅವರು ನಡೆಸಿದ ಸಭೆಯ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆಹಾರ ಸಚಿವಾಲಯವು ತಿಳಿಸಿದೆ.

1. ರಮೇಶ್ ಚಂದ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿ ರಚನೆ
2. ಎರಡು ರಾಜ್ಯಗಳ ರೈತರ ನಿಯೋಗದೊಂದಿಗೆ ಸುದೀರ್ಘ ಚರ್ಚೆ
3. 80–90 ರೈತರು, ಆಯಾ ರಾಜ್ಯಗಳ ಸಚಿವರು ಸಭೆಯಲ್ಲಿ ಭಾಗಿ

ಸೋಮವಾರ ನಡೆದ ಮಹತ್ವದ ಸಭೆಯಲ್ಲಿ ಕೇಂದ್ರದ ಈ ಇಬ್ಬರು ಕೇಂದ್ರ ಸಚಿವರು, ಪ್ರಮುಖ ಕಬ್ಬು ಬೆಳೆಯುವ ಈ ಎರಡು ರಾಜ್ಯಗಳ ರೈತರ ನಿಯೋಗದೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದರು. ವಿವಿಧ ಸಂಘಟನೆಗಳಿಗೆ ಸೇರಿದ ಸುಮಾರು 80 ರಿಂದ 90 ರೈತರು ಹಾಗೂ ಆಯಾ ರಾಜ್ಯಗಳ ಸಚಿವರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಕಬ್ಬಿಗೆ ಹೆಚ್ಚಿನ ಬೆಂಬಲ ಬೆಲೆ, ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಪ್ರತಿ ಕೆಜಿಗೆ 31 ರೂಪಾಯಿಯಿಂದ 50 ರೂಪಾಯಿಗೆ ಹೆಚ್ಚಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಸಭೆಯಲ್ಲಿ ರೈತರ ಮುಖಂಡರು ಆಗ್ರಹಿಸಿದ್ದರು. ಅಂತೆಯೇ, ಈ ಕುರಿತು ಪರಿಶೀಲಿಸಿ ಸೂಕ್ತ ಕ್ರಮ ಶಿಫಾರಸು ಮಾಡಲು ಉನ್ನತ ಮಟ್ಟದ ಸಮಿತಿ ರಚನೆಗೆ ಕೇಂದ್ರ ಸಚಿವರು ತೀರ್ಮಾನಿಸಿದ್ದರು.



ಈ ಉನ್ನತ ಮಟ್ಟದ ಸಮಿತಿಯು ಕೃಷಿ ವೆಚ್ಚ ಮತ್ತು ಇತರ ಸಂಬಂಧಿತ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ರೈತರಿಗೆ ಹೆಚ್ಚಿನ ಆದಾಯ ಸಿಗಬೇಕೆಂಬ ಅವರ ಬೇಡಿಕೆಯನ್ನು ಪರಿಶೀಲಿಸಲಿದೆ. ಜೊತೆಗೆ, ಉತ್ಪಾದನಾ ವೆಚ್ಚ, ಮಾರುಕಟ್ಟೆ ಆದಾಯ ಮತ್ತು ಸಕ್ಕರೆ ಕಾರ್ಖಾನೆಗಳ ಆರ್ಥಿಕ ಕಾರ್ಯಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಸಕ್ಕರೆಯ 'ಎಕ್ಸ್–ಮಿಲ್' ಕನಿಷ್ಠ ಮಾರಾಟ ಬೆಲೆಯನ್ನು ಪರಿಷ್ಕರಿಸುವ ಬೇಡಿಕೆಯನ್ನೂ ಇದು ಪರಿಶೀಲಿಸಲಿದೆ ಎಂದು ಆಹಾರ ಸಚಿವಾಲಯ ತಿಳಿಸಿದೆ.

ಹಾಗೆಯೇ, ಸಕ್ಕರೆ ಇಳುವರಿಯನ್ನು ಪರೀಕ್ಷಿಸುವ ಮತ್ತು ವರದಿ ಮಾಡುವ ಸದ್ಯದ ವ್ಯವಸ್ಥೆಯನ್ನು ಈ ಸಮಿತಿಯು ಪರಿಶೀಲಿಸಲಿದೆ. ಜೊತೆಗೆ ಪಾರದರ್ಶಕತೆಗಾಗಿ ಅಗತ್ಯ ಕ್ರಮಗಳನ್ನು ಸೂಚಿಸಲಿದೆ. ಅಲ್ಲದೆ, ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬನ್ನು ತೂಕ ಮಾಡುವ ಪದ್ಧತಿ, ಹಾಗೂ ಅದಕ್ಕೆ ಸಂಬಂಧಿಸಿದ ಮಾಪನಾಂಕ ನಿರ್ಣಯ, ತಪಾಸಣೆ ಮತ್ತು ಪರಿಶೀಲನಾ ವ್ಯವಸ್ಥೆಗಳ ಸಮರ್ಪಕತೆಯನ್ನು ಸಹ ಸಮಿತಿಯು ಮೌಲ್ಯಮಾಪನ ಮಾಡಲಿದೆ.

### ರಮೇಶ್ ಚಂದ್ ಯಾರು?

**ಪ್ರಖ್ಯಾತ ಕೃಷಿ ಅರ್ಥಶಾಸ್ತ್ರಜ್ಞ ಮತ್ತು ಸಾರ್ವಜನಿಕ ನೀತಿ ತಜ್ಞರಾದ ರಮೇಶ್ ಚಂದ್ ಅವರು, 2015 ರಿಂದ 2026 ರವರೆಗೆ ನೀತಿ ಆಯೋಗದ (NITI Aayog) ಸದಸ್ಯರಾಗಿದ್ದರು. ಅವರು ICAR-NIAP ನ ನಿರ್ದೇಶಕರಾಗಿ ಹಾಗೂ 15ನೇ ಹಣಕಾಸು ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕೃಷಿ ಅಭಿವೃದ್ಧಿ, ರೈತರ ಸಮಸ್ಯೆಗಳು, ಆಹಾರ ಭದ್ರತೆ, ಕೃಷಿ ಮಾರುಕಟ್ಟೆಗಳು ಮತ್ತು ಬೆಲೆ ನೀತಿಯ ವಿಷಯಗಳಲ್ಲಿ ಅವರು ಅಪಾರ ಪರಿಣತಿ ಹೊಂದಿದ್ದಾರೆ.**

**ರಮೇಶ್ ಚಂದ್ ಅಧ್ಯಕ್ಷತೆಯ ಸಮಿತಿಯಲ್ಲಿ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಕೃಷಿ ಆಯುಕ್ತರು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಜಂಟಿ ಕಾರ್ಯದರ್ಶಿ (ಸಕ್ಕರೆ) ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ (ಕಾನೂನು ಮಾಪನಶಾಸ್ತ್ರ) ಇರಲಿದ್ದಾರೆ.**

ಯಂತ್ರಗಳ ಮೂಲಕ ಕಟಾವು ಮಾಡಿದ ಕಬ್ಬಿನ ತೂಕದಲ್ಲಿ ಕಡಿತಗೊಳಿಸುವ ಪದ್ಧತಿಗಳನ್ನು ಸಮಿತಿಯು ಪರಿಶೀಲಿಸಲಿದೆ ಮತ್ತು ಯಾಂತ್ರೀಕೃತ ಕಟಾವಿನಿಂದ ರೈತರಿಗೆ ಏನಾದರೂ ನಷ್ಟವಾಗುತ್ತಿದೆಯೇ ಹಾಗೂ ಅದರ ಪ್ರಮಾಣವೆಷ್ಟು ಎಂಬುದನ್ನು ಪತ್ತೆ ಮಾಡಲಿದೆ. ಜೊತೆಗೆ, ಅಗತ್ಯ ಇತರ ಸಂಬಂಧಿತ ವಿಷಯಗಳನ್ನೂ ಸಮಿತಿ ಪರಿಗಣನೆಗೆ ತೆಗೆದುಕೊಳ್ಳಲಿದೆ ಎಂದು ಸಚಿವಾಲಯ ತಿಳಿಸಿದೆ.

ಈ ಸಮಿತಿಯು ರೈತರ ಪ್ರತಿನಿಧಿಗಳು, ಸಕ್ಕರೆ ಕಾರ್ಖಾನೆಗಳ ಸಂಘಗಳು, ರಾಜ್ಯ ಸರ್ಕಾರಗಳು ಹಾಗೂ ಇತರ ತಜ್ಞರು ಅಥವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಪಾಲುದಾರರೊಂದಿಗೆ ಚರ್ಚೆ ನಡೆಸಿ, ಸೂಕ್ತ ಶಿಫಾರಸುಗಳನ್ನು ಶೀಘ್ರದಲ್ಲಿ ಸಲ್ಲಿಸಲಿದೆ.


ಉದಯ ವಾಹಿನಿ

ದೇಶ/ವಿದೇಶ

ಶುಕ್ರವಾರ
16 ಅಕ್ಟೋಬರ್ 2026




# ಮಿನಿ ನ್ಯೂಸ್

## ಗೆಳೆಯನ ಬಿಡುಗಡೆಗಾಗಿ ಡ್ರಗ್ಸ್ ಸಾಗಿಸುತ್ತಿದ್ದ ಯುವತಿ ಸೆರೆ

**ಅಮರಾವತಿ:** ಜೈಲಿನಲ್ಲಿರುವ ತನ್ನ ಗೆಳೆಯನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲು ಅಗತ್ಯವಿರುವ ಹಣವನ್ನು ಹೊಂದಿಸುವ ಸಲುವಾಗಿ ಕಮಿಷನ್ ಆಸೆಯಿಂದ ಮಾದಕ ವಸ್ತು ಸಾಗಿಸುತ್ತಿದ್ದ ಯುವತಿಯೊಬ್ಬಳನ್ನು ಪೊಲೀಸರು ಬಂಧಿಸಿದ್ದಾರೆ. ಈ ಘಟನೆ ಆಂಧ್ರಪ್ರದೇಶದ ವಿಜಯವಾಡ ರೈಲು ನಿಲ್ದಾಣದಲ್ಲಿ ನಡೆದಿದೆ. ಸರ್ಕಾರಿ ರೈಲ್ವೆ ಪೊಲೀಸ್ ಅಧಿಕಾರಿಗಳು ನೀಡಿದ ಮಾಹಿತಿಯ ಪ್ರಕಾರ, ವಿಜಯವಾಡದ ಪಟಮಾಟ ನಿವಾಸಿಯಾದ ನಾಗ ಸೌಮ್ಯ ಎಂಬಾಕೆಗೆ ಮಾದಕ ವ್ಯಸನದ ಹಿನ್ನೆಲೆಯಿದೆ. ಆಕೆ ನಗರದ ಕೆಲವರೊಂದಿಗೆ ಸೇರಿಕೊಂಡು ಮಾದಕ ವಸ್ತುಗಳನ್ನು ಪೂರೈಸುವ ಜಾಲದಲ್ಲಿಯೂ ತೊಡಗಿಸಿಕೊಂಡಿದ್ದಳು. ಆಕೆಯ ಪ್ರಿಯಕರ ಕಾಶಿ ವರ್ಧನ್ ಎಂಬಾತನನ್ನು ಮಾದಕ ವಸ್ತು ಸಾಗಣೆ ಪ್ರಕರಣದಲ್ಲಿ 3 ತಿಂಗಳ ಹಿಂದೆ ಚಿತ್ತೂರಿನಲ್ಲಿ ಬಂಧಿಸಲಾಗಿದ್ದು, ಸದ್ಯ ಆತ ಜೈಲಿನಲ್ಲಿದ್ದಾನೆ. ಆತನನ್ನು ಬಿಡಿಸಲು ನಾಗ ಸೌಮ್ಯ ಬಳಿ ಹಣ ಇರಲಿಲ್ಲ. ಇದೇ ವೇಳೆ, ನಗರದಲ್ಲಿ ಎಂಡಿಎಂಎ ಮಾದಕ ವಸ್ತುವನ್ನು ಪೂರೈಸುವ ಕೃಷ್ಣಲಂಕಾದ ನಿವಾಸಿ ಬಶೀರ್ ಎಂಬಾತ, ಸೌಮ್ಯಳಿಗೆ ಒಂದು ಲಕ್ಷ ರೂಪಾಯಿ ನೀಡಿ, ಬೆಂಗಳೂರಿನಿಂದ ಈ ಮಾದಕ ವಸ್ತುಗಳನ್ನು ತರುವಂತೆ ಸೂಚಿಸಿದನು. ಇದಕ್ಕೆ 50 ಸಾವಿರ ರೂಪಾಯಿ ಕಮಿಷನ್ ನೀಡುವುದಾಗಿ ಭರವಸೆ ನೀಡಿದ್ದರಿಂದ ಆಕೆ ಈ ಕೆಲಸಕ್ಕೆ ಒಪ್ಪಿಕೊಂಡಳು. ಈ ತಿಂಗಳ 13ರಂದು ಸೌಮ್ಯ ಬೆಂಗಳೂರಿನ ಯಲಹಂಕಕ್ಕೆ ತೆರಳಿ, ಅಲ್ಲಿಯ ವ್ಯಕ್ತಿಯೊಬ್ಬನನ್ನು ಸಂಪರ್ಕಿಸಿದ್ದಾಳೆ. ಆತ ಎರಡು ಪ್ರತ್ಯೇಕ ಕವರ್‌ಗಳಲ್ಲಿ ಪ್ಯಾಕ್ ಮಾಡಲಾಗಿದ್ದ 110 ಗ್ರಾಂ ಎಂಡಿಎಂಎ ಡ್ರಗ್ಸ್ ಅನ್ನು ಆಕೆಗೆ ನೀಡಿದ್ದಾನೆ. ಆರೋಪಿ ಸೌಮ್ಯ ಅದನ್ನು ಪಡೆದು ಬೆಂಗಳೂರಿನಿಂದ ರೈಲು ಹತ್ತಿ ವಿಜಯವಾಡದತ್ತ ಪ್ರಯಾಣ ಬೆಳೆಸಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ.

## ರಾಹುಲ್, ಚು. ಆಯೋಗಕ್ಕೆ ಸುಪ್ರೀಂ ನೋಟಿಸ್

**ನವದೆಹಲಿ:** ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ, ಚುನಾವಣಾ ಆಯೋಗ ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿದೆ. ಈ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯವು ಭಾರತೀಯ ಚುನಾವಣಾ ಆಯೋಗ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹಾಗೂ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರಿಂದ ಪ್ರತಿಕ್ರಿಯೆ ಕೋರಿದೆ. ಅರ್ಜಿ ಸಲ್ಲಿಸಿದ್ದ 13 ಮಂದಿ ಅರ್ಜಿದಾರರ ಪೈಕಿ ಒಬ್ಬರ ನಡವಳಿಕೆಯ ಬಗ್ಗೆ ನ್ಯಾಯಾಲಯವು ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ತ್ರಿಸದಸ್ಯ ಪೀಠದ ಮುಂದೆ ಅರ್ಜಿ ವಿಚಾರಣೆಗೆ ಬಂದಿದ್ದು, ವಿಚಾರಣೆ ಸಂದರ್ಭದಲ್ಲಿ ನಾವು ಅರ್ಜಿದಾರರಲ್ಲಿ ಒಬ್ಬರನ್ನು ಅವರ ನಡವಳಿಕೆಯ ಬಗ್ಗೆಯೂ ಕೇಳಲಿದ್ದೇವೆ ಎಂದು ಮುಖ್ಯ ನ್ಯಾಯಮೂರ್ತಿಗಳು ಮೌಖಿಕವಾಗಿ ತಿಳಿಸಿದರು.

## ಮೋದಿ ವಿರೋಧಿ ಪ್ರತಿಭಟನೆಗಳಿಗೆ ಅಮೆರಿಕನ್ನರ ಆರ್ಥಿಕ ನೆರವು?

**ವಾಷಿಂಗ್ಟನ್:** ಭಾರತದಲ್ಲಿ ನಡೆಯುತ್ತಿರುವ ಕಾಕ್ರೋಚ್ ಜನತಾ ಪಾರ್ಟಿಗೆ (ಸಿಜೆಪಿ) ನೇತೃತ್ವದ ಪ್ರತಿಭಟನೆಗಳಿಗೆ ಅಮೆರಿಕದ ದಾನಿಗಳು ಹಣ ಒದಗಿಸುತ್ತಿದ್ದಾರೆ ಎಂಬ ಸ್ಫೋಟಕ ಆರೋಪವನ್ನು ಹಾಲಿವುಡ್ ಖ್ಯಾತ ಗಾಯಕಿ ಮೇರಿ ಮಿಲ್‌ಬೆನ್ ಮಾಡಿದ್ದಾರೆ.

ಕಾಕ್ರೋಚ್ ಜನತಾ ಪಾರ್ಟಿಗೆ (ಸಿಜೆಪಿ) ಅಮೆರಿಕದ ದಾನಿಗಳು ಹಣ ಒದಗಿಸುತ್ತಾರೆ ಎಂದು ಹಾಲಿವುಡ್ ಗಾಯಕಿ ಮೇರಿ ಮಿಲ್‌ಬೆನ್ ಆರೋಪಿಸಿದ್ದಾರೆ. ಅಲ್ಲದೆ ಇದು ಮೌನವಾಗಿರುವ ಸಮಯ ಅಲ್ಲ ಎಂದು ಹೇಳಿರುವ ಅವರು, ಭಾರತದ ಯುವ ದೇಶಭಕ್ತರು ಈ ವಿಧ್ವಂಸಕಾರಿ ಶಕ್ತಿ ವಿರುದ್ಧ ಶಾಂತಿಯುತ ಪ್ರತಿಭಟನೆ ನಡೆಸಬೇಕು ಎಂದು ಕರೆಕೊಟ್ಟಿದ್ದಾರೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಅಕ್ರಮಗಳು ನಡೆದಿವೆ, ಹೀಗಾಗಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಪಕ್ಷಗಳು ಮತ್ತು ಸಿಜೆಪಿ ಬೆಂಬಲಿಗರು ನವದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಬೆಳವಣಿಗೆಗಳ ನಡುವೆಯೇ ಮಿಲ್‌ಬೆನ್ ಅವರ ಈ ಹೇಳಿಕೆ ವ್ಯಾಪಕ ಪ್ರಾಮುಖ್ಯತೆ ಪಡೆದಿದೆ.

## ಇಸ್ಲಾಂಗೆ ಮತಾಂತರಗೊಂಡರೆ ಮೀಸಲಾತಿ ಸಿಗಲ್ಲ: ಸುಪ್ರೀಂ

**ನವದೆಹಲಿ:** ಧಾರ್ಮಿಕ ಮತಾಂತರ ಮತ್ತು ಜಾತಿ ಆಧಾರಿತ ಮೀಸಲಾತಿಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಮದ್ರಾಸ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಹಿಂದೂ ಧರ್ಮದಿಂದ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಕೆಲವರನ್ನು 'ಹಿಂದುಳಿದ ವರ್ಗದ' ಅಡಿಯಲ್ಲಿ ಸೇರಿಸಿ, ಅವರಿಗೆ ಮೀಸಲಾತಿ ಸೌಲಭ್ಯಗಳನ್ನು ಒದಗಿಸುವ ತಮಿಳುನಾಡು ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತ್ತು. ಬೇರೆ ಧರ್ಮಕ್ಕೆ ಮತಾಂತರಗೊಂಡ ವ್ಯಕ್ತಿಯೊಬ್ಬರು, ತಮ್ಮ ಹಿಂದಿನ ಸಾಮಾಜಿಕ ವರ್ಗದ ಆಧಾರದ ಮೇಲೆ ಮೀಸಲಾತಿ ಸೌಲಭ್ಯಗಳನ್ನು ಪಡೆಯಬಹುದೇ ಅಥವಾ 'ಹಿಂದುಳಿದ ವರ್ಗ' ವರ್ಗದ ಸದಸ್ಯರಾಗಿ ಮೀಸಲಾತಿಗೆ ಅರ್ಹರಾಗಬಹುದೇ ಎಂಬುದು ಈ ಪ್ರಕರಣದ ಮುಖ್ಯ ಪ್ರಶ್ನೆಯಾಗಿತ್ತು. ತಮಿಳುನಾಡಿನ ತೂತುಕುಡಿ ಜಿಲ್ಲೆಯ ವ್ಯಕ್ತಿಯೊಬ್ಬರು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಅರ್ಜಿದಾರರು ಹಿಂದೂ ಕುಟುಂಬದಲ್ಲಿ ಜನಿಸಿದ್ದರು. 2016ರಲ್ಲಿ ಅವರು ಇಸ್ಲಾಂ ಧರ್ಮದ ಪದ್ಧತಿಯಂತೆ ಮಹಿಳೆಯೊಬ್ಬರನ್ನು ವಿವಾಹವಾಗಿ, ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದರು. ತದನಂತರ ನಂತರ ಅವರು ತಮ್ಮ ಹೆಸರನ್ನು 'ಸಮೀರ್ ಅಹ್ಮದ್' ಎಂದು ಬದಲಾಯಿಸಿಕೊಂಡಿದ್ದರು. ಅರ್ಜಿದಾರರ ಪ್ರಕಾರ, ಕಾಯತಾರ್‌ನ 'ಸುನ್ನತ್ ಜಮಾತ್' ಸಂಸ್ಥೆಯು 2015ರಲ್ಲಿ ಅವರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿರುವುದನ್ನು ದೃಢೀಕರಿಸಿ ಪ್ರಮಾಣಪತ್ರವೊಂದನ್ನು ನೀಡಿತ್ತು. ತದನಂತರ, ಅವರು 'ಮುಸ್ಲಿಂ ಲೆಬ್ಬೈ' ಸಮುದಾಯಕ್ಕೆ ಸೇರಿದವರು ಎಂದು ಹೇಳಿಕೊಂಡು, ಸಮುದಾಯ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಆದರೆ, ಕಾಯತಾರ್‌ನ ತಹಸೀಲ್ದಾರರು ಅವರ ಅರ್ಜಿಯನ್ನು ತಿರಸ್ಕರಿಸಿದ್ದರು. ಈ ಹಿನ್ನೆಲೆಯಲ್ಲಿ ಅವರು ಮದ್ರಾಸ್ ಹೈಕೋರ್ಟ್‌ನ ಮೊರೆ ಹೋಗಿದ್ದರು.

## ಹೊಸ ಪಕ್ಷದ ಹೆಸರು ಘೋಷಿಸಿದ ದಿವ್ಯಾ ಮಿತ್ತಲ್

**ಲಖನೌ:** ಇತ್ತೀಚೆಗೆ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದ ಮಾಜಿ ಐಎಎಸ್ ಅಧಿಕಾರಿ ದಿವ್ಯಾ ಮಿತ್ತಲ್, ಹೊಸ ರಾಜಕೀಯ ಸ್ಥಾಪಿಸುವುದಾಗಿ ಘೋಷಿಸಿದ್ದರು. ಗುರುವಾರ ತಮ್ಮ ಹೊಸ ಪಕ್ಷದ ಹೆಸರು 'ಜನ್ ನೀತಿ ಭಾರತ್' ಎಂದು ಘೋಷಿಸಿದ್ದಾರೆ. ತಮ್ಮ ಪಕ್ಷವು 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿದೆ ಎಂದು ದಿವ್ಯಾ ಮಿತ್ತಲ್ ಅವರು ತಿಳಿಸಿದ್ದಾರೆ. ಈ ಕುರಿತು 'ಎಕ್ಸ್' ವಿಡಿಯೋ ಹಂಚಿಕೊಂಡಿರುವ ಮಿತ್ತಲ್, ತಮ್ಮ ಪಕ್ಷವು ನೀತಿ ನಿರೂಪಣೆಯಲ್ಲಿ ಜನರಿಗೆ ಪ್ರಮುಖ ಸ್ಥಾನ ನೀಡುವತ್ತ ಗಮನಹರಿಸಲಿದೆ ಎಂದು ಹೇಳಿದ್ದಾರೆ. ಅಲ್ಲದೆ, ಸರ್ಕಾರವು ಕೇವಲ ಚುನಾವಣಾ ದಿನದಂದು ಮಾತ್ರವಲ್ಲದೆ, ತನ್ನ ಐದು ವರ್ಷಗಳ ಅಧಿಕಾರಾವಧಿಯ ಉದ್ದಕ್ಕೂ ಜನರಿಗೆ ಉತ್ತರದಾಯಿತ್ವವನ್ನು ಹೊಂದಿರುವಂತೆ ಖಚಿತಪಡಿಸಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. "ರಾಜಕಾರಣಿಗಳು ನಿಮ್ಮ ಮೇಲೆ ಆಳ್ವಿಕೆ ನಡೆಸುತ್ತಾರೆ. ಆದರೆ 'ಜನ್ ನೀತಿ'ಯಲ್ಲಿ, ನೀವೇ ಆಳ್ವಿಕೆ ನಡೆಸುವವರಾಗುತ್ತೀರಿ," ಎಂದು ಹೇಳಿದ ಅವರು, ಪಕ್ಷದ ಹೆಸರನ್ನು ಘೋಷಿಸುವುದರ ಜೊತೆಗೆ, ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ನಿರ್ಧಾರವನ್ನೂ ಪ್ರಕಟಿಸಿದ್ದಾರೆ.ಐಐಟಿ ದೆಹಲಿ ಮತ್ತು ಐಐಎಂ ಬೆಂಗಳೂರಿನ ಹಳೆಯ ವಿದ್ಯಾರ್ಥಿನಿಯಾಗಿರುವ ಹಾಗೂ ಹಿಂದೆ 'ವಾಲ್ ಸ್ಟ್ರೀಟ್'ನಲ್ಲಿ ಟ್ರೇಡರ್ ಆಗಿ ಕೆಲಸ ಮಾಡಿದ್ದ ದಿವ್ಯಾ ಮಿತ್ತಲ್, 13 ವರ್ಷಗಳ ಸೇವೆಯ ನಂತರ ಆಗಸ್ಟ್ 30ರಂದು ಭಾರತೀಯ ಆಡಳಿತ ಸೇವೆಗೆ ರಾಜೀನಾಮೆ ನೀಡಿದ್ದರು. ನಂತರ ಸೆಪ್ಟೆಂಬರ್ 29ರಂದು ರಾಜಕೀಯ ಪಕ್ಷವನ್ನು ಘೋಷಿಸಿದ್ದರು.

# ಆಸ್ಪತ್ರೆ ತಲುಪುವ ನಿಮಿಷಕ್ಕೂ ಮೊದಲೇ ಅಪ್ಪು ಹೃದಯಬಡಿತ ನಿಂತಿತ್ತು!

**ಒಂದೂವರೆ ಗಂಟೆಗಳ ಕಾಲ ಕಿಕ್‌ಬಾಕ್ಸಿಂಗ್ ------ ECGಯಲ್ಲಿ ಅತಿಯಾದ ಆಯಾಸ!**

ಕನ್ನಡ ನಟ ಪುನೀತ್ ರಾಜ್‌ಕುಮಾರ್ ನಿಧನರಾಗಿ ಐದು ವರ್ಷಗಳ ನಂತರ, ಅವರ ವೈದ್ಯರಾದ ಡಾ. ರಮಣ ರಾವ್ ಅವರು ಪುನೀತ್ ಅಂತಿಮ ಕ್ಷಣಗಳಿಗೆ ಕಾರಣವಾದ ಘಟನೆಗಳನ್ನು ಸ್ಮರಿಸಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ತೀವ್ರವಾದ ವ್ಯಾಯಾಮದ ನಂತರ ಪುನೀತ್ ತಮ್ಮ ಕ್ಲಿನಿಕ್‌ಗೆ ಭೇಟಿ ನೀಡಿದ್ದು, ಅವರ ಆರೋಗ್ಯ ಸ್ಥಿತಿಯ ಬಗ್ಗೆ ಕಳವಳ ಮೂಡಿಸಿದ ಇಸಿಜಿ ವರದಿಗಳು ಮತ್ತು ಅವರನ್ನು ಆಸ್ಪತ್ರೆಗೆ ಸಾಗಿಸಲು ಕೈಗೊಂಡ ತುರ್ತು ಕ್ರಮಗಳ ಬಗ್ಗೆ ಅವರು ವಿವರಿಸಿದರು.

'ಅಪ್ಪು' ಎಂದೇ ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ಪುನೀತ್, 2021ರ ಅಕ್ಟೋಬರ್ 29ರಂದು, ತಮ್ಮ 46ನೇ ವಯಸ್ಸಿನಲ್ಲಿ ಹೃದಯ ಸ್ತಂಭನದಿಂದ ನಿಧನರಾದರು. ಅವರನ್ನು ಬೆಂಗಳೂರಿನ ವಿಕ್ರಮ್ ಆಸ್ಪತ್ರೆಗೆ ತರಾತುರಿಯಲ್ಲಿ ಕರೆದೊಯ್ಯಲಾಯಿತಾದರೂ, ವೈದ್ಯರಿಗೆ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.



'ಜಸ್ಟ್ ಕ್ಯೂರಿಯಸ್ ಕನ್ನಡ' ಜೊತೆ ಮಾತನಾಡಿದ ಡಾ. ರಮಣ ರಾವ್, ನಟ ಮತ್ತು ಅವರ ಕುಟುಂಬದೊಂದಿಗೆ ತಮಗಿದ್ದ ವೈಯಕ್ತಿಕ ಒಡನಾಟವನ್ನು ನೆನಪಿಸಿಕೊಂಡರು. "ಅಪ್ಪು ಒಬ್ಬ ಅದ್ಭುತ ವ್ಯಕ್ತಿ. ಅವರು ನನಗೆ ಮಗನಿದ್ದಂತೆ. ಅವರು ಮತ್ತು ನನ್ನ ಎರಡನೇ ಮಗ ಒಳ್ಳೆಯ ಸ್ನೇಹಿತರಾಗಿದ್ದರು. ಇಬ್ಬರೂ ಆಗಾಗ್ಗೆ ಒಟ್ಟಿಗೆ ಆಟವಾಡುತ್ತಿದ್ದರು ಮತ್ತು ತಮ್ಮ ಆಟಿಕೆಗಳನ್ನು ಹಂಚಿಕೊಳ್ಳುತ್ತಿದ್ದರು" ಎಂದು ಅವರು ಹೇಳಿದರು.

ನಟನ ನಿಧನವು ತಮ್ಮ ವೃತ್ತಿಜೀವನದ ಅತ್ಯಂತ ಕಠಿಣ ಅನುಭವಗಳಲ್ಲಿ ಒಂದಾಗಿದೆ. "ಒಬ್ಬ ವೈದ್ಯನಾಗಿ, ನನ್ನ ಜೀವನದಲ್ಲಿ ಅನೇಕ ದುರಂತಗಳನ್ನು ಕಂಡಿದ್ದೇನೆ. ಅವು ಮನಸ್ಸಿನ ಮೇಲೆ ತೀವ್ರವಾದ, ಭಯಾನಕ ಪರಿಣಾಮ ಬೀರುತ್ತವೆ. ಕೆಲವು ವಿಷಯಗಳನ್ನು ಮರೆಯಲು ಸಾಧ್ಯವೇ ಇಲ್ಲ. ಅಪ್ಪು ಅಂತಹ ಉದಾಹರಣೆಗಳಲ್ಲಿ ಒಬ್ಬರು ಎಂದಿದ್ದಾರೆ. ಘಟನೆ ನಡೆದ ದಿನವನ್ನು ನೆನಪಿಸಿಕೊಂಡ ಡಾ. ರಮಣ ರಾವ್, ಜಿಮ್‌ನಲ್ಲಿ ಸುಮಾರು ಒಂದೂವರೆ ಗಂಟೆಗಳ ಕಾಲ ಕಿಕ್‌ಬಾಕ್ಸಿಂಗ್ ಅಭ್ಯಾಸ ಮಾಡಿದ ನಂತರ ಪುನೀತ್ ತಮ್ಮ ಕ್ಲಿನಿಕ್‌ಗೆ ಬಂದಿದ್ದರು ಎಂದು ಹೇಳಿದರು. ವೈದ್ಯರ ಪ್ರಕಾರ, ಅಂದು ಪುನೀತ್ ಮೊದಲ ಬಾರಿಗೆ ಈ ಕ್ರೀಡೆಯನ್ನು ಪ್ರಯತ್ನಿಸಿದ್ದರು ಮತ್ತು ಅಸಾಮಾನ್ಯ ರೀತಿಯಲ್ಲಿ ದಣಿದಂತೆ ಕಂಡುಬಂದರು.

"ಅಪ್ಪು ಕ್ಲಿನಿಕ್‌ಗೆ ಬಂದಾಗ ನಾನು ಅಲ್ಲಿದ್ದೆ. ಅವರಿಗೆ ವಿಪರೀತ ಬೆವರು ಸುರಿಯುತ್ತಿತ್ತು. ಜಿಮ್‌ಗೆ ಹೋಗಿ ಒಂದೂವರೆ ಗಂಟೆಗಳ ಕಾಲ ಕಿಕ್‌ಬಾಕ್ಸಿಂಗ್ ಮಾಡಿದ್ದಾಗಿ ಅವರು ನನಗೆ ಹೇಳಿದರು. ಅಂದು ಅವರು ಮೊದಲ ಬಾರಿಗೆ ಇದನ್ನು ಪ್ರಯತ್ನಿಸಿದ್ದರು ಮತ್ತು ತುಂಬಾ ಆಯಾಸಗೊಂಡಿದ್ದರು. ಆದರೆ, ಅವರಿಗೆ ಸುರಿಯುತ್ತಿದ್ದ ಬೆವರನ್ನು ಗಮನಿಸಿದಾಗ, ಅವರ ಆರೋಗ್ಯ ಸ್ಥಿತಿಯಲ್ಲಿ ಗಂಭೀರವಾದ ಏನೋ ಇದೆ ಎಂದು ನನಗೆ ಅರಿವಾಯಿತು. ನಾನು ತಕ್ಷಣವೇ ಇಸಿಜಿ ಮಾಡಿದೆ. ಆ ಇಸಿಜಿ ವರದಿಯಲ್ಲಿ ಹೃದಯದ ಮೇಲಿನ ಒತ್ತಡ ಕಂಡುಬಂತು" ಎಂದು ಅವರು ವಿವರಿಸಿದರು.

ಇಸಿಜಿ ಫಲಿತಾಂಶಗಳನ್ನು ಕಂಡ ಕೂಡಲೇ ಡಾ. ರಮಣ ರಾವ್ ತುರ್ತು ಕ್ರಮಗಳನ್ನು ಕೈಗೊಂಡರು. ತಾನು ಪುನೀತ್‌ಗೆ ಔಷಧ ನೀಡಿದ್ದಾಗಿ ಮತ್ತು ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲು ವ್ಯವಸ್ಥೆ ಮಾಡಿದ್ದಾಗಿ ಅವರು ತಿಳಿಸಿದರು.

ಇದು ಹೃದಯಾಘಾತವಲ್ಲ, ಬದಲಾಗಿ ದೇಹದ ಮೇಲಾದ ಅತಿಯಾದ ಒತ್ತಡ ಆಗಿತ್ತು. ಏನೋ ಅನಾಹುತ ಸಂಭವಿಸಲಿದೆ ಎಂದು ನನಗೆ ಅರಿವಾಗಿತ್ತು. ನಾನು ಅವರಿಗೆ ಔಷಧ ನೀಡಿದೆ ಮತ್ತು ತಕ್ಷಣವೇ ಅವರನ್ನು ಆಸ್ಪತ್ರೆಗೆ ಸಾಗಿಸಿದೆವು. ಅವರು ತಮ್ಮದೇ ಕಾರಿನಲ್ಲಿ ಪ್ರಯಾಣಿಸಿದರು. ಆ ಸಮಯದಲ್ಲಿ ಅವರು ನಮ್ಮೊಂದಿಗೆ ಮಾತನಾಡುತ್ತಿದ್ದರು. ಕಾರಿನಲ್ಲಿ ಕುಳಿತುಕೊಳ್ಳಲು ಅವರು ಬಯಸಿದ್ದರು, ಆದರೆ ನಾನು ಅವರನ್ನು ಅವರ ಪತ್ನಿ ಅಶ್ವಿನಿ ಅವರ ಮಡಿಲಲ್ಲಿ ತಲೆ ಇಟ್ಟು ವಿಶ್ರಾಂತಿ ಪಡೆಯುವಂತೆ ಕೋರಿದೆ. ಡಾ. ರಂಗ ನಾಯಕ್ ಅವರು ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಿರುವಾಗಲೇ, ಚಾಲಕನಿಗೆ ಅವರನ್ನು ಆದಷ್ಟು ಬೇಗ ಆಸ್ಪತ್ರೆಗೆ ಕರೆದೊಯ್ಯುವಂತೆ ಸೂಚಿಸಿದೆ," ಎಂದು ಅವರು ಹೇಳಿದರು.

ಪುನೀತ್ ಅವರ ತಂದೆ ಹಾಗೂ ದಿಗ್ಗಜ ನಟ ರಾಜ್‌ಕುಮಾರ್ ಸೇರಿದಂತೆ, ಪುನೀತ್ ಅವರ ಕುಟುಂಬದ ಇತರ ಸದಸ್ಯರಿಗೂ ಚಿಕಿತ್ಸೆ ನೀಡಿದ್ದ ಡಾ. ರಂಗ ನಾಯಕ್ ಅವರು, ತುರ್ತು ಚಿಕಿತ್ಸಾ ವ್ಯವಸ್ಥೆಗಳನ್ನು ಸಂಘಟಿಸಲು ನೆರವಾದರು. ಆಸ್ಪತ್ರೆ ತಲುಪುವ ಒಂದು ನಿಮಿಷದ ಮೊದಲು ಅವರ ಹೃದಯ ಬಡಿತ ನಿಂತುಹೋಗಿತ್ತು ಎಂದರು.

ಆಸ್ಪತ್ರೆಗೆ ಕರೆದೊಯ್ಯುವಾಗ ಪುನೀತ್ ಗೆ ಪ್ರಜ್ಞೆ ಇತ್ತು ತಮ್ಮ ಸುತ್ತಲಿದ್ದವರೊಂದಿಗೆ ಮಾತನಾಡುತ್ತಿದ್ದರು ಎಂದು ಡಾ. ರಮಣ ರಾವ್ ನೆನಪಿಸಿಕೊಂಡರು. ಆದರೆ, ಆಸ್ಪತ್ರೆ ತಲುಪುವಷ್ಟರಲ್ಲಿ ಅವರ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು. ಅವರು ಆಸ್ಪತ್ರೆ ತಲುಪಲು ಕೇವಲ ಒಂದು ನಿಮಿಷ ಬಾಕಿ ಇರುವಾಗ ಅವರ ಹೃದಯ ಬಡಿತ ನಿಂತುಹೋಗಿತ್ತು. ಅವರು ಆಸ್ಪತ್ರೆಯ ಒಳಗೆ ಪ್ರವೇಶಿಸಿದಾಗ, ಅವರಲ್ಲಿ ಯಾವುದೇ ಹೃದಯ ಬಡಿತವಿರಲಿಲ್ಲ ಎಂದು ಅವರು ವಿವರಿಸಿದರು.

ವಿಕ್ರಮ್ ಆಸ್ಪತ್ರೆಯ ವೈದ್ಯಕೀಯ ತಂಡವು, ಅಗತ್ಯ ತುರ್ತು ಚಿಕಿತ್ಸಾ ವಿಧಾನಗಳನ್ನು ಅನುಸರಿಸುವ ಮೂಲಕ ನಟನನ್ನು ಉಳಿಸಿಕೊಳ್ಳಲು ಪ್ರಯತ್ನಿಸಿತು. ಆದರೆ, ಅವರ ಪ್ರಯತ್ನಗಳು ಫಲ ನೀಡಲಿಲ್ಲ. ಈ ದುರಂತವನ್ನು ನೆನಪಿಸಿಕೊಂಡ ಡಾ. ರಮಣ ರಾವ್, "ಇದು ನಮ್ಮೆಲ್ಲರಿಗೂ ಅತ್ಯಂತ ದುಃಖಕರ ಕ್ಷಣಗಳಲ್ಲಿ ಒಂದಾಗಿತ್ತು. ಇದು ನನ್ನ ಸ್ವಂತ ಮಗನನ್ನೇ ಕಳೆದುಕೊಂಡಂತೆ ಭಾಸವಾಯಿತು," ಎಂದು ಹೇಳಿದ್ದಾರೆ.

# ಪಡ್ಡೆಹುಲಿ ಖ್ಯಾತಿಯ ಶ್ರೇಯಸ್ ಮಂಜುಗೆ ಉತ್ತಮ ಭವಿಷ್ಯವಿದೆ: ನಟ ಶ್ರೀಮುರಳಿ

ಮಾರುತ ಸಿನಿಮಾ ಬಳಿಕ ಪಡ್ಡೆಹುಲಿ ಖ್ಯಾತಿಯ ಶ್ರೇಯಸ್ ಕೆ ಮಂಜು ಬಣ್ಣ ಹಚ್ಚಿರುವ ಬಹುನಿರೀಕ್ಷಿತ ಚಿತ್ರ 'ದಿಲ್‌ದಾರ್'. ಮಧು ಗೌಡ ಗಂಗೂರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚಿತ್ರ ತನ್ನ ಚಿತ್ರೀಕರಣ ಪೂರ್ಣಗೊಳಿಸಿ, ಬಿಡುಗಡೆಗೆ ಎದುರು ನೋಡುತ್ತಿದೆ. ಚಿತ್ರತಂಡ ಪ್ರಚಾರ ಪ್ರಾರಂಭಿಸಿದ್ದು, 'ಕೂಲ್ ಬ್ರದರ್' ಎಂಬ ಹಾಡನ್ನು ರೋರಿಂಗ್ ಸ್ಟಾರ್ ಶ್ರೀಮುರಳಿ ಅನಾವರಣಗೊಳಿಸಿದರು. ಈಗಾಗಲೇ ಮಾಸ್ ಪಾತ್ರಗಳ ಮೂಲಕ ಗಮನ ಸೆಳೆದಿರುವ ನಿರ್ಮಾಪಕ ಕೆ.ಮಂಜು ಪುತ್ರ ಶ್ರೇಯಸ್ ಮಂಜು, ಈ ಚಿತ್ರದಲ್ಲಿ ಮತ್ತೊಂದು ಹಂತದ ಮಾಸ್ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದೊಂದು ವಿಭಿನ್ನ ಕಥಾನಕವನ್ನೊಳಗೊಂಡಿರುವ ಮನರಂಜನಾತ್ಮಕ ಚಿತ್ರ. ನಟ ಶರಣ್, ನಟಿ ಶ್ರುತಿ ಅವರ ಸಹೋದರಿಯ ಮಗಳಾದ ಕೀರ್ತಿ ಕೃಷ್ಣ ಈ ಚಿತ್ರದ ಮೂಲಕ ನಾಯಕಿಯಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಸಾಂಗ್ ರಿಲೀಸ್ ಈವೆಂಟ್‌ಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾಜಿ ಸಚಿವ ಅರವಿಂದ್ ಲಿಂಬಾವಳಿ ಮಾತನಾಡಿ, "ರಾಜಕಾರಣದಲ್ಲಿ ನಾಟಕ, ಸಿನಿಮಾ ನಡೆಯುತ್ತಿರುತ್ತದೆ. ನಿರ್ಮಾಪಕ ಸಂತೋಷ್, ಹರಿಕೃಷ್ಣ ನಮ್ಮ ಕ್ಷೇತ್ರದವರೇ. ಅವರಿಗಾಗಿ ನಾನಿಲ್ಲಿಗೆ ಬಂದ್ದಿದ್ದೇನೆ. ಈ ಸಿನಿಮಾ ಯಶಸ್ವಿಯಾಗಲಿ" ಎಂದು ಶುಭ ಹಾರೈಸಿದರು. ನಟ ಶ್ರೀಮುರಳಿ ಮಾತನಾಡಿ, "ಶ್ರೇಯಸ್ ಅವರಿಗೆ ಕನ್ನಡ ಚಿತ್ರರಂಗದಲ್ಲಿ ಒಂದೊಳ್ಳೆ ಭವಿಷ್ಯವಿದೆ. ನನಗೆ ಈ ಡಾನ್ಸ್ ಸಾಂಗಲ್ಲಿ ಆಕ್ಟ್ ಮಾಡಲು ಹೇಳಿದಾಗ ಆಗಲ್ಲ ಎಂದಿದ್ದೆ. ಶ್ರೇಯಸ್ ತುಂಬಾ ಚೆನ್ನಾಗಿ ಸ್ಟೆಪ್ಸ್ ಹಾಕಿದ್ದಾರೆ" ಎಂದರು. ನಿರ್ಮಾಪಕ ಕೆ.ಮಂಜು ಮಾತನಾಡಿ, ಅರ್ಜುನ್ ಜನ್ಯ ಅವರ ಮ್ಯೂಸಿಕ್‌ನಲ್ಲಿ ಈ ಹಾಡು ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದರು. ಉಳಿದಂತೆ ನಿರ್ಮಾಪಕರಾದ ರಮೇಶ್ ಯಾದವ್, ಮಾಧವ್ ಕಿರಣ್ ಶುಭ ಹಾರೈಸಿದರು.



ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮಾತನಾಡಿ, ಶ್ರೇಯಸ್ ನನಗೆ ಬಹಳ ವರ್ಷಗಳ ಸ್ನೇಹಿತ. ಚಂದನ್ ಶೆಟ್ಟಿ ಈ ಹಾಡನ್ನು ನೆಕ್ಸ್ ಲೆವೆಲ್‌ಗೆ ತೆಗೆದುಕೊಂಡು ಹೋಗಿದ್ದಾರೆ ಎಂದರು.

ಗಾಯಕ ಚಂದನ್ ಶೆಟ್ಟಿ ಮಾತನಾಡಿ, ಶ್ರೇಯಸ್ ಅವರ ಮೊದಲ ಸಿನಿಮಾದಿಂದಲೂ ನಾನು ಹಾಡಿದ್ದೇನೆ. ಸಾಂಗ್ ಸಖತ್ತಾಗಿ ಮೂಡಿ ಬಂದಿದೆ ಎಂದರು. ನಾಯಕ ನಟ ಶ್ರೇಯಸ್, ನಿರ್ದೇಶಕ ಮಧುಗೌಡ, ನಿರ್ಮಾಪಕ ಸಂತೋಷ್ ಮಾತನಾಡಿದರು. ಸಾಧು ಕೋಕಿಲ, ಚಂದ್ರಪ್ರಭ, ಕಾರ್ತಿಕ್, ಚಿಲ್ಲರ್ ಮಂಜು ಸೇರಿ ಮೊದಲಾದ ಹಾಸ್ಯ ನಟರ ದಂಡು ಈ 'ದಿಲ್ ದಾರ್' ಚಿತ್ರದಲ್ಲಿದೆ. ಕೆಜಿಎಫ್ ಖ್ಯಾತಿಯ ಆಂಡ್ರೋ ಅವಿನಾಶ್, ಅರ್ಪಿತ್ ಕೂಡಾ ಚಿತ್ರದಲ್ಲಿದ್ದಾರೆ. ಎನ್ಸಿಯಂಟ್ ಮೂವೀಸ್ ಬ್ಯಾನರ್ ಅಡಿ ಆರ್.ಸಂತೋಷ್ ಕುಮಾರ್ (ಎಸ್‌ವಿಟಿ) ನಿರ್ಮಿಸಿದ್ದು, ಹರೇಕೃಷ್ಣ ರೆಡ್ಡಿ ಎಸ್ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ. ಸದ್ಯ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿರುವ ದಿಲ್ ದಾರ್ ಸದ್ಯದಲ್ಲೇ ತೆರೆಗೆ ಬರಲಿದೆ.

# ಅ. 25ರಂದು ಸಂಡೇಸ್ ಆನ್ ಸೈಕಲ್ ಆಯೋಜನೆ: ರಾಗಿಣಿ ದ್ವಿವೇದಿ

ನಾಗರಿಕರಲ್ಲಿ ದೈಹಿಕ ಕ್ಷಮತೆ ಹಾಗೂ ಆರೋಗ್ಯಕರ ಜೀವನಶೈಲಿಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಅಕ್ಟೋಬರ್ 25ರಂದು ಹುಬ್ಬಳ್ಳಿಯ ತೋಳನಕೆರೆ ವೃತ್ತದಲ್ಲಿ 'ಫಿಟ್ ಕರ್ನಾಟಕ ಫಾರ್ ಫಿಟ್ ಇಂಡಿಯಾ' ಅಭಿಯಾನದಡಿ 'ಸಂಡೇಸ್ ಆನ್ ಸೈಕಲ್' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಖ್ಯಾತ ನಟಿ ಹಾಗೂ ಫಿಟ್ ಇಂಡಿಯಾ ಚಾಂಪಿಯನ್ ರಾಗಿಣಿ ದ್ವಿವೇದಿ ತಿಳಿಸಿದರು.



**ಫಿಟ್ ಕರ್ನಾಟಕ ಫಾರ್ ಫಿಟ್ ಇಂಡಿಯಾ ಅಭಿಯಾನದಡಿ ಆಯೋಜನೆ**

ಹುಬ್ಬಳ್ಳಿ ನಗರದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದಿನ ಒತ್ತಡದ ಜೀವನದಲ್ಲಿ ದೈಹಿಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು ಅಗತ್ಯವಾಗಿದೆ. ಸೈಕ್ಲಿಂಗ್ ಮತ್ತು ನಡಿಗೆಯಂತಹ ಸರಳ ಚಟುವಟಿಕೆಗಳನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಭಾರತ ಸರ್ಕಾರದ ಫಿಟ್ ಇಂಡಿಯಾ ಆಂದೋಲನ, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಹಾಗೂ ಭಾರತೀಯ ಕ್ರೀಡಾ ಪ್ರಾಧಿಕಾರದ ಸಹಯೋಗದೊಂದಿಗೆ ಜೆನ್ನೆಕ್ಸ್ ಚಾರಿಟೇಬಲ್ ಟ್ರಸ್ಟ್ ಕಾರ್ಯಕ್ರಮ ಆಯೋಜಿಸುತ್ತಿದೆ. ಹುಬ್ಬಳ್ಳಿ ಬೈಸಿಕಲ್ ಕ್ಲಬ್, ಹುಬ್ಬಳ್ಳಿ ಫಿಟ್ನೆಸ್ ಫೌಂಡೇಶನ್, ಒಬ್ಸೆಷನ್ ಕ್ಲಬ್ ಹಾಗೂ ನಶಾ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮಕ್ಕೆ ಬೆಂಬಲ ನೀಡಿವೆ ಎಂದು ಅವರು ತಿಳಿಸಿದರು.

ಅಕ್ಟೋಬರ್ 25ರಂದು ಭಾನುವಾರ ಬೆಳಗ್ಗೆ 6:30ಕ್ಕೆ 5ಕಿಲೋಮೀಟರ್ ಸೈಕ್ಲೋಥಾನ್ ಆರಂಭವಾಗಲಿದ್ದು, 6:50ಕ್ಕೆ 5ಕಿಲೋಮೀಟರ್ ವಾಕಥಾನ್ ನಡೆಯಲಿದೆ. ಸಾರ್ವಜನಿಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಸೈಕ್ಲಿಂಗ್ ಅಥವಾ ನಡಿಗೆಯಲ್ಲಿ ಯಾವುದಾದರೂ ಒಂದು ಚಟುವಟಿಕೆಯಲ್ಲಿ ಭಾಗವಹಿಸಬಹುದು. ಎರಡೂ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಡ್ಡಾಯವಲ್ಲ.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ಟಿ-ಶರ್ಟ್ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು. ಲಭ್ಯತೆ ಮತ್ತು ಮೊದಲಿಗೆ ಬಂದವರಿಗೆ ಆದ್ಯತೆ ಆಧಾರದಲ್ಲಿ ಇವುಗಳನ್ನು ನೀಡಲಾಗುತ್ತದೆ ಎಂದರು.

ಸೈಕ್ಲಿಂಗ್ ಪ್ರಿಯರು, ವಾಕಿಂಗ್ ಗುಂಪುಗಳು, ಫಿಟ್ನೆಸ್ ಆಸಕ್ತರು, ವಿದ್ಯಾರ್ಥಿಗಳು, ಕುಟುಂಬಗಳು ಸೇರಿದಂತೆ ಎಲ್ಲಾ ವಯೋಮಾನದ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ದೈಹಿಕ ಚಟುವಟಿಕೆಯನ್ನು ದೈನಂದಿನ ಬದುಕಿನ ಭಾಗವಾಗಿಸುವುದು, ಆರೋಗ್ಯದ ಕುರಿತು ಅರಿವು ಮೂಡಿಸುವುದು ಹಾಗೂ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಜನರನ್ನು ಪ್ರೇರೇಪಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ನಟಿ ರಾಗಿಣಿ ದ್ವಿವೇದಿ ತಿಳಿಸಿದರು.

ಹೆಚ್ಚಿನ ಮಾಹಿತಿಗಾಗಿ 83108 44241, 80502 10433 ಸಂಪರ್ಕಿಸಬಹುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಆರೋಗ್ಯವಂತ ಕರ್ನಾಟಕ ಹಾಗೂ ಆರೋಗ್ಯವಂತ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಆಯೋಜಕರು ಮನವಿ ಮಾಡಿದ್ದಾರೆ.

ಮಾಧ್ಯಮಗೋಷ್ಠಿಯಲ್ಲಿ ಹುಬ್ಬಳ್ಳಿ ಬೈಸಿಕಲ್ ಕ್ಲಬ್ ಅಧ್ಯಕ್ಷ ಚಟ್ಟಪ್ಪ, ಕಾರ್ಯದರ್ಶಿ ಶಿವಾನಂದ, ಹುಬ್ಬಳ್ಳಿ ಫಿಟ್ನೆಸ್ ಕ್ಲಬ್ ಅಧ್ಯಕ್ಷ ಡಾ. ಅರುಣ್ ಯಲಮಣಿ, ಒಬ್ಸೆಷನ್ ರನ್ನರ್ಸ್‌ನ ಅಕ್ಷಯ್ ಮತ್ತು ಆನಂದ ಇನ್ನಿತರರು ಉಪಸ್ಥಿತರಿದ್ದರು.

# ಬಿಸಿಸಿಐಗೆ ಶಾಕ್ ಕೊಟ್ಟ ಇಬ್ಬರು ಕ್ರಿಕೆಟಿಗರು! ಕೋಟಿ ಕೋಟಿ ಕೊಡ್ತೀನಂದ್ರೂ ಕ್ಯಾರೇ ಎನ್ನದ ಸ್ಟಾರ್ಸ್

ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಬೋರ್ಡ್ ಎಂದೇ ಖ್ಯಾತಿ ಪಡೆದಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯೊಂದಿಗೆ ಕೆಲಸ ಮಾಡಬೇಕು ಎಂಬುದು ಪ್ರತಿಯೊಬ್ಬರ ಕನಸಾಗಿರುತ್ತದೆ. ಆದರೆ ಇಲ್ಲೊಬ್ಬ ಕ್ರಿಕೆಟರ್ ಬಿಸಿಸಿಐನ ಬಂಪರ್ ಆಫರ್ ಅನ್ನೇ ತಿರಸ್ಕರಿಸಿ ಶಾಕ್ ನೀಡಿದ್ದಾರೆ.

ಇತ್ತೀಚೆಗೆ ಬಿಸಿಸಿಐ, ಆಯ್ಕೆಗಾರರ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಿತ್ತು. ಮಾಜಿ ಭಾರತೀಯ ಕ್ರಿಕೆಟಿಗರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬರುತ್ತವೆ ಎಂದೇ ನಿರೀಕ್ಷಿಸಲಾಗಿತ್ತು, ಆದರೆ ಹೀಗೆ ಸಂಭವಿಸಿಲ್ಲ. ಅದರಲ್ಲೂ ತಲಾ 100ಕ್ಕೂ ಹೆಚ್ಚು ಟೆಸ್ಟ್ ಪಂದ್ಯಗಳನ್ನು ಆಡಿದ ಅನುಭವ ಹೊಂದಿರುವ ಇಬ್ಬರು ಆಟಗಾರ ಈ ಆಫರ್‌ಗೆ ಕ್ಯಾರೇ ಎಂದಿಲ್ಲ ಎಂದು ವರದಿಯಾಗಿದೆ.

ಭಾರತ ತಂಡದ ಮುಖ್ಯ ಆಯ್ಕೆಗಾರರಾಗಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ ಅಜಿತ್ ಅಗರ್ಕರ್ ಅವರ ಅಧಿಕಾರಾವಧಿಯು ಅಕ್ಟೋಬರ್ 4 ರಂದು ಕೊನೆಗೊಂಡಿತು. ತದನಂತರ, ಬಿಸಿಸಿಐ ಪಶ್ಚಿಮ ವಲಯದಿಂದ ಆಯ್ಕೆಗಾರರ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಿತು. ಅರ್ಜಿ ಸಲ್ಲಿಸಲು ಅಕ್ಟೋಬರ್ 14ರ ಸಂಜೆ 5:00 ಗಂಟೆಯವರೆಗೆ ಗಡುವು ನೀಡಲಾಗಿತ್ತು. ರಮೇಶ್ ಪವಾರ್ ಮತ್ತು ಸಮೀರ್ ದಿಘೆ ಮಾತ್ರ ಈ ಹುದ್ದೆಗಾಗಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಈ ಬಾರಿ ಅರ್ಜಿದಾರರಲ್ಲಿ ಪಾರ್ಥಿವ್ ಪಟೇಲ್ ಸಹ ಕಾಣಿಸಿಕೊಳ್ಳಲಿದ್ದಾರೆ ಎಂದು ವರದಿಯಾಗಿತ್ತು. ಅಲ್ಲದೆ ಬಿಸಿಸಿಐ ಸಹ ಅವರ ಮೇಲೆ ಹೆಚ್ಚಿನ ಒಲವು ಹೊಂದಿತ್ತು. ಒಂದು ವೇಳೆ ಅವರು ಅರ್ಜಿ ಸಲ್ಲಿಸಿದ್ದರೆ, ಬಹುಶಃ ಮುಖ್ಯ ಆಯ್ಕೆಗಾರರಾಗಿ ನೇಮಕಗೊಳ್ಳುತ್ತಿದ್ದರು. ಆದರೆ, ಅವರು ಇದರಲ್ಲಿ ಆಸಕ್ತಿ ತೋರಿಸಿಲ್ಲ. ಹೆಸರು ಹೇಳಲು ಇಚ್ಚಿಸದ ಬಿಸಿಸಿಐ ಅಧಿಕಾರಿಯೊಬ್ಬರು ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದು, ಬಿಸಿಸಿಐ ಅರ್ಜಿ ಸಲ್ಲಿಸುವ ಗಡುವನ್ನು ವಿಸ್ತರಿಸುತ್ತದೆಯೋ ಇಲ್ಲವೋ ನನಗೆ ತಿಳಿದಿಲ್ಲ, ಆದರೆ ಪಾರ್ಥಿವ್ ಪಟೇಲ್ ಅಕ್ಟೋಬರ್ 14 ರಂದು ಸಂಜೆ 5 ಗಂಟೆಯವರೆಗೆ ಅರ್ಜಿ ಸಲ್ಲಿಸಲಿಲ್ಲ" ಎಂದು ಹೇಳಿದರು. ಪರಿಣಾಮವಾಗಿ, ಪ್ರಗ್ಯಾನ್ ಓಜಾ ಅವರು ಮುಖ್ಯ ಆಯ್ಕೆಗಾರರಾಗುವುದು ಬಹುತೇಕ ಖಚಿತವಾಗಿದೆ. ಓಜಾ ಅವರೊಂದಿಗೆ, ಪ್ರಸ್ತುತ ಆಯ್ಕೆಗಾರರ ಸಮಿತಿಯಲ್ಲಿ ಆರ್.ಪಿ. ಸಿಂಗ್, ಅಜಯ್ ರಾತ್ರಾ ಮತ್ತು ಎಸ್.ಎಸ್. ದಾಸ್ ಇದ್ದಾರೆ.

**ಆಯ್ಕೆದಾರರ ವೇತನದಲ್ಲಿ ಗಣನೀಯ ಹೆಚ್ಚಳ:** ಸುಮಾರು ಒಂದೂವರೆ ದಶಕದ ಹಿಂದೆ, ಆಯ್ಕೆಗಾರರ ವೇತನ ಮತ್ತು ಭತ್ಯೆಗಳು ಅಷ್ಟೇನೂ ಹೆಚ್ಚಿರಲಿಲ್ಲ. ಆದರೆ, ಬಿಸಿಸಿಐ ಈಗ ಆಯ್ಕೆ ಸಮಿತಿಯ ಬಜೆಟ್ ಅನ್ನು ಗಮನಾರ್ಹವಾಗಿ ಹೆಚ್ಚಿಸಿದ್ದು, ಹೆಚ್ಚಿನ ಸಂಭಾವನೆಯನ್ನು ನೀಡುತ್ತಿದೆ. ಹಿಂದೆ 17.45 ಕೋಟಿ ರೂ. ಇದ್ದ ಬಜೆಟ್ ಅನ್ನು, 2026-27ರ ಆರ್ಥಿಕ ವರ್ಷಕ್ಕೆ 19.35 ಕೋಟಿ ರೂ.ಗೆ ಏರಿಸಲಾಗಿದೆ. ಇದರರ್ಥ ಮುಖ್ಯ ಆಯ್ಕೆಗಾರರು ವಾರ್ಷಿಕವಾಗಿ 3 ಕೋಟಿ ರೂ.ವರೆಗೂ ಸಂಬಳ ಪಡೆಯಬಹುದು. ಆದಾಗ್ಯೂ ಇದು ದೊಡ್ಡ ಜವಾಬ್ದಾರಿಗಳನ್ನು ಒಳಗೊಂಡಿರುವ ಹುದ್ದೆಯಾಗಿದೆ. ಇದರಲ್ಲಿ ದೇಶೀಯ ಮತ್ತು ಅಂತರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸುವ ಆಟಗಾರರ ಪ್ರತಿಭೆಯನ್ನು ಮೌಲ್ಯಮಾಪನ ಮಾಡುವುದು, ಅವಶ್ಯಕತೆ ಬಿದ್ದ ಆಟಗಾರರೊಂದಿಗೆ ಪ್ರಯಾಣಿಸುವುದು ಮತ್ತು ವಿವಿಧ ಸಭೆಗಳಲ್ಲಿ ಪಾಲ್ಗೊಳ್ಳುವುದು ಸೇರಿರುತ್ತದೆ.



ಈ ವಿಭಾಗದಲ್ಲಿರುವ ಇತರ ಆಯ್ಕೆಗಾರರಿಗೂ ಉತ್ತಮ ಸಂಭಾವನೆ ಪ್ಯಾಕೇಜ್‌ಗಳನ್ನು ನೀಡಲಾಗುತ್ತದೆ. ಪ್ರತಿಯೊಬ್ಬ ಸದಸ್ಯರು ತ್ರೈಮಾಸಿಕ ವರದಿಗಳನ್ನು ಸಿದ್ಧಪಡಿಸಿ, ಬಿಸಿಸಿಐ ಅಪೆಕ್ಸ್ ಕೌನ್ಸಿಲ್‌ಗೆ ಸಲ್ಲಿಸಬೇಕಾಗುತ್ತದೆ. ಇದಲ್ಲದೆ, ತಂಡಗಳಿಗೆ ನಾಯಕರನ್ನು ನೇಮಿಸುವ ನಿರ್ಣಾಯಕ ಜವಾಬ್ದಾರಿಯನ್ನು ಆಯ್ಕೆ ಸಮಿತಿಯ ಸದಸ್ಯರಿಗೆ ವಹಿಸಲಾಗಿದೆ.

ಏತನ್ಮಧ್ಯೆ ಖುದ್ದು ಬಿಸಿಸಿಐ 100 ಟೆಸ್ಟ್‌ಗಳನ್ನು ಆಡಿದ್ದ ಇಬ್ಬರು ಕ್ರಿಕೆಟಿಗರನ್ನು ಹುದ್ದೆಗಾಗಿ ಸಂಪರ್ಕಿಸಿತ್ತು, ಆದರೆ ಅವರಿಬ್ಬರು ಈ ಪ್ರಸ್ತಾಪವನ್ನು ನಿರಾಕರಿಸಿದ್ದಾರೆ ಎಂದು ವರದಿಯಾಗಿದೆ. ಆದರೆ ಆ ಇಬ್ಬರು ಯಾರು ಎಂದು ತಿಳಿದು ಬಂದಿಲ್ಲ.

# ಈ ತಂಡ ವಿಶ್ವಕಪ್ ಗೆಲ್ಲಲು ಸಾಧ್ಯವಿಲ್ಲ; ಕೈಫ್ ಶಾಕಿಂಗ್ ಹೇಳಿಕೆ

ವೆಸ್ಟ್ ಇಂಡೀಸ್ ವಿರುದ್ಧದ ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತ ತಂಡವು ತನಗೆ ನೀಡಲಾದ ಬೃಹತ್ ಗುರಿಯನ್ನು ಚೇಸ್ ಮಾಡುವಲ್ಲಿ ವಿಫಲವಾಯಿತು. ಈ ಪಂದ್ಯದಲ್ಲಿ ಬೌಲರ್‌ಗಳು ಅತಿಯಾದ ರನ್‌ಗಳನ್ನು ಬಿಟ್ಟುಕೊಟ್ಟಿದ್ದೆ ತಂಡದ ಸೋಲಿಗೆ ಕಾರಣವಾಯ್ತು. ಈ ಸೋಲಿನ ಬೆನ್ನಲ್ಲೆ ಟೀಮ್ ಇಂಡಿಯಾದ ಮಾಜಿ ಕ್ರಿಕೆಟಿಗ ಮೊಹಮ್ಮದ್ ಕೈಫ್ ಪ್ರಮುಖ ಹೇಳಿಕೆಯೊಂದನ್ನು ನೀಡಿದ್ದಾರೆ.



ಅ.14ರಂದು ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡ ಭರ್ಜರಿ ಪ್ರದರ್ಶನ ನೀಡಿತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ್ದ ಕೆರೆಬಿಯನ್ ಪಡೆ, ನಾಯಕ ಶಾಯ್ ಹೋಪ್ ಅವರ ಶತಕ ಬಲದಿಂದ 3 ವಿಕೆಟ್ ನಷ್ಟಕ್ಕೆ 247 ರನ್ ಕಲೆಹಾಕಿತು. ಭಾರತದ ಪರ ಪ್ರಿನ್ಸ್ ಯಾದವ್ ಹೊರತುಪಡಿಸಿ ಉಳಿದೆಲ್ಲ ಬೌಲರ್‌ಗಳು ದುಬಾರಿ ಎನಿಸಿಕೊಂಡರು. ಮಯಾಂಕ್ ಯಾದವ್, ಅರ್ಷದೀಪ್ ತಲಾ 52 ರನ್‌ಗಳನ್ನು ಬಿಟ್ಟುಕೊಟ್ಟರೆ, ಅಕ್ಷರ್ ಪಟೇಲ್ 45, ನಿತೀಶ್ ಕುಮಾರ್ 3 ಓವರ್‌ಗಳಲ್ಲಿ 39 ರನ್‌ಗಳನ್ನು ಬಿಟ್ಟುಕೊಟ್ಟರು. ಪ್ರಿನ್ಸ್, ಅಕ್ಷರ್, ಅರ್ಷದೀಪ್ ತಲಾ 1 ವಿಕೆಟ್ ಪಡೆದರು.

ಬಳಿಕ ಗುರಿಯನ್ನು ಬೆನ್ನತ್ತಿದ ಭಾರತ ಪರ ಸಂಜು ಸ್ಯಾಮ್ಸನ್ (56 ರನ್), ತಿಲಕ್ ವರ್ಮಾ (43), ನಿತೀಶ್ ರೆಡ್ಡಿ (41) ಹೊರತು ಪಡಿಸಿ ಉಳಿದ ಯಾವುದೇ ಆಟಗಾರರು ನಿರೀಕ್ಷಿತ ಮಟ್ಟದಲ್ಲಿ ಪ್ರದರ್ಶನ ನೀಡಲಿಲ್ಲ. ಪರಿಣಾಮವಾಗಿ ಭಾರತ 9 ವಿಕೆಟ್ ಕಳೆದುಕೊಂಡು 223 ರನ್‌ಗಳಿಸಿ 24 ರನ್‌ಗಳಿಂದ ಸೋಲನ್ನು ಕಂಡಿತು. ಇದರೊಂದಿಗೆ 5 ಪಂದ್ಯಗಳ ಸರಣಿ ಪ್ರಸ್ತುತ 2-2 ರಿಂದ ಸಮಬಲಗೊಂಡಿದೆ.

**ಟೀಮ್ ಇಂಡಿಯಾ ವಿರುದ್ಧ ಮೊಹಮ್ಮದ್ ಕೈಫ್ ಫೈರ್:** ಈ ಪಂದ್ಯದ ಬೆನ್ನಲ್ಲೆ ಮೊಹಮ್ಮದ್ ಕೈಫ್ ಆಕ್ರೋಶ ಹೊರಹಾಕಿದ್ದಾರೆ. "ಹೈದರಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡ ಸೋತಿದ್ದೇಕೆ ಗೊತ್ತೆ? ಅದಕ್ಕೆ ಮುಖ್ಯ ಕಾರಣ ಬೌಲಿಂಗ್. ಬೌಲರ್‌ಗಳು ಅತಿಯಾದ ರನ್‌ಗಳನ್ನು ಬಿಟ್ಟುಕೊಟ್ಟರು. ಟಿ20 ಪಂದ್ಯಗಳಲ್ಲಿ 247 ರನ್‌ಗಳನ್ನು ನೀಡುವುದು ಸಾಮಾನ್ಯ ವಿಷಯವಲ್ಲ. ಇದು ಮೊದಲ ಬಾರಿಯೇನಲ್ಲ. ಈ ಹಿಂದೆಯೂ ಸಹ 250ಕ್ಕೂ ಹೆಚ್ಚು ರನ್‌ಗಳ ಗುರಿಯನ್ನು ರಕ್ಷಿಸಿಕೊಳ್ಳುವಲ್ಲಿ ಬೌಲರ್‌ಗಳು ವಿಫಲರಾಗಿದ್ದರು. ಐದು ಪಂದ್ಯಗಳ ಸರಣಿಯಲ್ಲಿ, ಬ್ಯಾಟರ್‌ಗಳು ಮೂರು ಪಂದ್ಯಗಳಲ್ಲಿ ಗೆಲುವು ತಂದುಕೊಟ್ಟರೆ, ಉಳಿದ ಎರಡು ಪಂದ್ಯಗಳಲ್ಲಿ ಬೌಲರ್‌ಗಳು ಜವಾಬ್ದಾರಿ ತೆಗೆದುಕೊಂಡು ಉತ್ತಮ ಪ್ರದರ್ಶನ ನೀಡಬೇಕಿತ್ತು. ಆದರೆ ಬೌಲರ್‌ಗಳು ಹಾಗೆ ಮಾಡುವಲ್ಲಿ ವಿಫಲರಾದರು. ಇಂತಹ ತಂಡವನ್ನಿಟ್ಟುಕೊಂಡು ವಿಶ್ವಕಪ್ ಗೆಲ್ಲುವುದು ಅಸಾಧ್ಯ" ಎಂದು ಕೈಫ್ ಹೇಳಿದರು.

ಮುಂದುವರಿದು ಮಾತನಾಡುತ್ತ, "2024ರ ಟಿ20 ವಿಶ್ವಕಪ್ ಅನ್ನೆ ಒಮ್ಮೆ ಗಮನಿಸಿ. ಅಲ್ಲಿ ಜಸ್ಪ್ರೀತ್ ಬುಮ್ರಾ, ಅಕ್ಷರ್ ಪಟೇಲ್ ಮತ್ತು ಕುಲದೀಪ್ ಯಾದವ್ ಅವರಂತಹ ಬೌಲರ್‌ಗಳಿಂದ ಹಿಡಿದು ಬ್ಯಾಟರ್‌ಗಳವರೆಗೆ ಪ್ರತಿಯೊಬ್ಬರೂ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ತಂಡದ ಗೆಲುವಿನಲ್ಲಿ ಪಾತ್ರ ವಹಿಸಿದ್ದರು. ಇನ್ನು ವೆಸ್ಟ್ ಇಂಡೀಸ್ ವಿರುದ್ಧದ ನಾಲ್ಕನೇ ಪಂದ್ಯದ ವಿಷಯಕ್ಕೆ ಬಂದರೆ, ಅಭಿಷೇಕ್ ಶರ್ಮಾ ತುಂಬಾ ನಿಧಾನವಾಗಿ ಆಡಿದರು ಎಂದು ಕೆಲವರು ಹೇಳುತ್ತಿದ್ದಾರೆ. ಯಾವುದೇ ಬ್ಯಾಟರ್ ಪ್ರತಿದಿನವೂ ಅದ್ಭುತ ಪ್ರದರ್ಶನ ನೀಡುವುದು ಕಷ್ಟ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಆದಾಗ್ಯೂ, ಸಂಜು ಸ್ಯಾಮ್ಸನ್ ತಂಡಕ್ಕೆ ಅದ್ಭುತ ಆರಂಭ ಒದಗಿಸಿಕೊಟ್ಟಿದ್ದರು" ಎಂದು ಕೈಫ್ ತಿಳಿಸಿದರು.

ಏತನ್ಮಧ್ಯೆ ಈ ಸರಣಿಯಲ್ಲಿ ಮೊದಲ ಪಂದ್ಯವನ್ನು ಹೊರತುಪಡಿಸಿ, ಉಳಿದ ಮೂರು ಪಂದ್ಯಗಳಲ್ಲಿಯೂ ಭಾರತೀಯ ಬೌಲರ್‌ಗಳು ತಲಾ 200ಕ್ಕೂ ಹೆಚ್ಚು ರನ್‌ಗಳನ್ನು ಬಿಟ್ಟುಕೊಟ್ಟಿದ್ದಾರೆ. ಎರಡನೇ ಪಂದ್ಯದಲ್ಲಿ, ಭಾರತವು 250 ರನ್‌ಗಳ ಗುರಿಯನ್ನು ರಕ್ಷಿಸಿಕೊಳ್ಳುವಲ್ಲಿಯೂ ವಿಫಲವಾಗಿತ್ತು.

**ಐದನೇ ಪಂದ್ಯ ಯಾವಾಗ?:** ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳ ನಡುವಿನ ಐದನೇ ಮತ್ತು ಅಂತಿಮ ಟಿ20 ಅಕ್ಟೋಬರ್ 17 ರಂದು ನಡೆಯಲಿದೆ. ಈ ಪಂದ್ಯಕ್ಕೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಆತಿಥ್ಯ ವಹಿಸಿಕೊಳ್ಳಲಿದೆ.

# ಒಂದೇ ಓವರ್‌ನಲ್ಲಿ 5 ವಿಕೆಟ್! ಟಿ20 ಕ್ರಿಕೆಟ್‌ನಲ್ಲಿ ಇತಿಹಾಸ ಬರೆದ 19 ವರ್ಷದ ಆಲ್‌ರೌಂಡರ್!

19 ವರ್ಷದ ಚಾಡ್ ಲೇಕಾಕ್ ದಕ್ಷಿಣ ಆಫ್ರಿಕಾ ಟಿ20 ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ ಬರೆದಿದ್ದಾರೆ. ಕೆಜೆಡ್‌ಎನ್ ಇನ್‌ಲ್ಯಾಂಡ್ ತಂಡದ ಪರ ಟೈಟಾನ್ಸ್ ವಿರುದ್ಧ ಸಿಎಸ್‌ಎ ಪ್ರೊ20 ಕಪ್‌ನಲ್ಲಿ ಒಂದೇ ಓವರ್‌ನಲ್ಲಿ 5 ವಿಕೆಟ್ ಪಡೆದ ಮೊದಲ ಬೌಲರ್ ಆಗಿದ್ದಾರೆ. ಈ ವಿಶೇಷ ಸಾಧನೆಯಲ್ಲಿ 4 ಎಸೆತದಲ್ಲಿ 4 ವಿಕೆಟ್ ಪಡೆದ ದಾಖಲೆಯೂ ಸೇರಿದೆ. ಇದು ದಕ್ಷಿಣ ಆಫ್ರಿಕಾ ಟಿ20ಯ ಇತಿಹಾಸದಲ್ಲೇ ಮೊದಲ ಬಾರಿಗೆ ನಡೆದಿದೆ.

ಐತಿಹಾಸಿಕ ಓವರ್ ಹೇಗಿತ್ತು?: ಟೈಟಾನ್ಸ್ ಇನ್ನಿಂಗ್ಸ್‌ನ 19ನೇ ಓವರ್‌ನಲ್ಲಿ ಹೊಸ ದಾಖಲೆ ಆಯಿತು. ಟೈಟಾನ್ಸ್ 193ಕ್ಕೆ 4 ರಿಂದ ಉತ್ತಮ ಸ್ಥಿತಿಯಲ್ಲಿತ್ತು. ಈ ವೇಳೆ ಲೇಕಾಕ್ ಮೊದಲು ಲ್ಯೂಸ್ ಡು ಪ್ಲಾಯ್ ಅವರನ್ನು ಔಟ್ ಮಾಡಿದರು. ನಂತರದ 4 ಎಸೆತಗಳಲ್ಲಿ ದಯಾನ್ ಗಾಲಿಯಮ್, ಅಫಿವೆ ಮನ್ಯಾಂಡ, ಜಾಂಕೊ ಸ್ಮಿತ್ ಮತ್ತು ಎಸೋಸಾ ಐಹೆವ್ಬಾ ಅವರನ್ನು ಸತತವಾಗಿ ಔಟ್ ಮಾಡಿದರು. 5 ವಿಕೆಟ್‌ನೊಂದಿಗೆ ಟೈಟಾನ್ಸ್ ಇನ್ನಿಂಗ್ಸ್ 204 ರನ್‌ಗೆ ಕೊನೆಗೊಂಡಿತು.

**ಬೌಲಿಂಗ್ ದಾಖಲೆ ಎಷ್ಟು?:** ಚಾಡ್ ಲೇಕಾಕ್ ಈ ಪಂದ್ಯದಲ್ಲಿ 26 ರನ್‌ಗಳನ್ನು ನೀಡಿ 6 ವಿಕೆಟ್ ಪಡೆದಿದ್ದಾರೆ. ಇದು ಅವರ ವೃತ್ತಿ ಜೀವನದ ಶ್ರೇಷ್ಠ ಬೌಲಿಂಗ್. ಸಿಎಸ್‌ಎ ಪ್ರೊ20 ಕಪ್ ಇತಿಹಾಸದ ಅತ್ಯುತ್ತಮ ಬೌಲಿಂಗ್ ದಾಖಲೆಯನ್ನೂ ಅವರು ಬರೆದಿದ್ದಾರೆ. ಈ ಹಿಂದೆ 2014 ರಲ್ಲಿ ಬ್ಯೂರಾನ್ ಹೆಂಡ್ರಿಕ್ಸ್ 29 ರನ್‌ಗಳನ್ನು ನೀಡಿ 6 ವಿಕೆಟ್ ಪಡೆದು ದಾಖಲೆ ಬರೆದಿದ್ದರು. ಅದನ್ನು ಲೇಕಾಕ್ ಮುರಿದಿದ್ದಾರೆ. ದೊಡ್ಡ ತಂಡಗಳ ಟಿ20 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಲಸಿತ್ ಮಾಲಿಂಗ, ರಶೀದ್ ಖಾನ್, ಕರ್ಟಿಸ್ ಕ್ಯಾಂಫರ್ ಮತ್ತು ಜೇಸನ್ ಹೋಲ್ಡರ್ ಈ ಹಿಂದೆ ಸತತ 4 ಎಸೆತದಲ್ಲಿ 4 ವಿಕೆಟ್ ಪಡೆದಿದ್ದರು, ಈಗ ಲೇಕಾಕ್ ಕೂಡ ಆ ಪಟ್ಟಿಗೆ ಸೇರಿದ್ದಾರೆ.

**ಪಂದ್ಯದ ಫಲಿತಾಂಶ:** ಲೇಕಾಕ್ ಅವರ ಅದ್ಭುತ ಪ್ರದರ್ಶನದ ಹೊರತಾಗಿಯೂ ಕೆಜೆಡ್‌ಎನ್ ಇನ್‌ಲ್ಯಾಂಡ್‌ಗೆ ಗೆಲುವು ಸಿಗಲಿಲ್ಲ. ಟೈಟಾನ್ಸ್ ಮೊದಲು ಬ್ಯಾಟ್ ಮಾಡಿ 204 ರನ್ ಗಳಿಸಿತು. ಆರಂಭದಲ್ಲಿ ಲುವಾನ್-ಡ್ರೆ ಪ್ರಿಟೋರಿಯಸ್ 36 ಎಸೆತದಲ್ಲಿ 81 ರನ್ ಸಿಡಿಸಿ 112 ರನ್‌ಗಳ ಆರಂಭಿಕ ಜೊತೆಯಾಟ ನೀಡಿದ್ದರು. ಲೇಕಾಕ್ 9ನೇ ಓವರ್‌ನಲ್ಲಿ ಅವರನ್ನು ಔಟ್ ಮಾಡಿ ಮೊದಲ ಯಶಸ್ಸು ನೀಡಿದ್ದರು. ಗುರಿ ಬೆನ್ನತ್ತಿದ ಕೆಜೆಡ್‌ಎನ್ ಇನ್‌ಲ್ಯಾಂಡ್ 183ಕ್ಕೆ 6 ಗಳಿಸಿ 21 ರನ್‌ನಿಂದ ಸೋತಿತು. ಲೇಕಾಕ್ ಅಜೇಯ 31 ರನ್ ಗಳಿಸಿ ಬ್ಯಾಟಿಂಗ್‌ನಲ್ಲೂ ಮಿಂಚಿದರು. ಈ ಗೆಲುವಿನೊಂದಿಗೆ ಟೈಟಾನ್ಸ್ ಅಂಕಪಟ್ಟಿಯಲ್ಲಿ 6 ಪಂದ್ಯಗಳ ಅಜೇಯ ಓಟ ಮುಂದುವರಿಸಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news